ಕರ್ನಾಟಕ ಸರ್ಕಾರ

ಜಿಲ್ಲಾ ಆಡಳಿತ–ಜಿಲ್ಲಾ ಪಂಚಾಯಿತಿ–ಸಾರ್ವಜನಿಕ ಶಿಕ್ಷಣ ಇಲಾಖೆ,ಹಾಸನ–573201.

2018–19ನೇ ಸಾಲಿನಲ್ಲಿ ಜಿಲ್ಲೆಯ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಪ್ರಗತಿಗಾಗಿ ಸಿದ್ಧಪಡಿಸಿರುವ ಕೈಪಿಡಿ.

# ಪರೀಕ್ಷಾ ಸ್ಫೂರ್ತಿ 2018–19

ಸಾಧನೆಗಾಗಿ ..........

# ವಿಷಯ : ಸಮಾಜ ವಿಜ್ಞಾನ..

## ಪರಿಕಲ್ಪನೆ ಮತ್ತು ಮಾರ್ಗದರ್ಶನ.

ಎಸ್.ಜಿ. ನಾಗೇಶ್
ಉಪನಿರ್ದೇಶಕರು (ಅಭಿವೃದ್ಧಿ),ಡಯಟ್,ಹಾಸನ.

ಹೆಚ್.ಮಂಜುನಾಥ್
ಉಪನಿರ್ದೇಶಕರು(ಆಡಳಿತ),ಸಾ.ಶಿ.ಇಲಾಖೆ, ಹಾಸನ.

## ಸಲಹೆ ಮತ್ತು ಸಂಯೋಜನೆ

1.ಕೆ.ಎಸ್.ಪ್ರಕಾಶ್.ಡಿ.ವೈ.ಪಿ.ಸಿ.ಆರ್.ಎಂ.ಎಸ್.ಎ.
2.ಹಾಲಾನಾಯ್ಕ್.ಡಿ.ವೈ.ಪಿ.ಸಿ ಆರ್.ಎಂ.ಎಸ್.ಎ.
3.ರುದ್ರೇಶ್.ಎಸ್.ಶಿಕ್ಷಣಾಧಿಕಾರಿಗಳು.ಸಾ.ಶಿ.ಇಲಾಖೆ.ಹಾಸನ.
4.ಸೋಮನಾಥ್.ಎನ್.ಜೆ.ಶಿಕ್ಷಣಾಧಿಕಾರಿಗಳು.ಸಾ.ಶಿ.ಇಲಾಖೆ.ಹಾಸನ. :.
5.ವೇದಾವತಿ.ಪಿ.ಹಿರಿಯಉಪನ್ಯಾಸಕರು.ಡಯಟ್.ಹಾಸನ.
6.ರಾಜೇಗೌಡ. ಹಿರಿಯಉಪನ್ಯಾಸಕರು.ಡಯಟ್.ಹಾಸನ
7. ಶಂಕರಯ್ಯ. ಹಿರಿಯಉಪನ್ಯಾಸಕರು.ಡಯಟ್.ಹಾಸನ.

## ಸಮನ್ವಯ ಮತ್ತು ಸಹಕಾರ

| ಕ್ರ.ಸಂ | ತಾಲ್ಲೂಕು | ಕ್ಷೇತ್ರ ಶಿಕ್ಷಣಾಧಿಕಾರಿಗಳು | ವಿಷಯ ಪರಿವೀಕ್ಷಕರು/ ಉಪನ್ಯಾಸಕರು/ ನೋಡಲ್ ಅಧಿಕಾರಿಗಳು | |
|---|---|---|---|---|
| 1 | ಆಲೂರು | ಹೊನ್ನೇಶ್ ಕುಮಾರ್ | ಧನಂಜಯ ಡಿ.ಎಸ್ | ಗೀತಾ ಬಿ.ಎಂ. ಅನುಸೂಯ ಪಿ.ಆರ್ |
| 2 | ಅರಕಲಗೂಡು | ಶಿವನಂಜೇಗೌಡ ಕೆ.ಎನ್ | ನರಸಿಂಹಮೂರ್ತಿ | ಚನ್ನಯ್ಯ. |
| 3 | ಅರಸೀಕೆರೆ | ಮೋಹನ್ ಕುಮಾರ್.ಬಿ | ವೆಂಕಟೇಶ್ಮೂರ್ತಿ. | ಮಲ್ಲಮ್ಮ ಸಿ.ಹೆಚ್. ಲೋಹಿತ್ ಜೆ. |
| 4 | ಬೇಲೂರು | ನಟರಾಜ್ ಎಸ್.ಪಿ | ಪುಷ್ಪ ಎಸ್ | ದಿನೇಶ್ ಎನ್.ಎಸ್ ಗಂಗಾಧರ್ ಹೆಚ್ |
| 5 | ಚನ್ನರಾಯಪಟ್ಟಣ | ಪುಷ್ಪಲತಾ ಹೆಚ್.ಕೆ | | ಮಂಜುನಾಥ್ ಕೆ.ಸಿ ಚಂದ್ರಶೇಖರ್. |
| 6 | ಹಾಸನ | ಕೃಷ್ಣ ಡಿ. | ಚನ್ನಪ್ಪಗೌಡ | ಕೃಷ್ಣೇಗೌಡಎ.ಜೆ. ರೇಣುಕಾಂಬ.ಎಂ.ಆರ್. ವಿಜಯಲಕ್ಷ್ಮಿಹೆಚ್.ಕೆ. |
| 7 | ಹೊಳೆನರಸೀಪುರ | ಲೋಕೇಶ್ | ಭಾಗ್ಯಮ್ಮ ಎಸ್. | ಕುಮಾರ್.ಡಿ |
| 8 | ಸಕಲೇಶಪುರ | ಶಿವಾನಂದ್ ಹೆಚ್.ಬಿ | ಧನಂಜಯ ಡಿ.ಎಸ್ | ಗೀತಾ ಹೆಚ್.ಟಿ. |

ಸದಾ ನಮ್ಮೊಂದಿಗೆ.

ಬಿಎಸ್.ಸೋಮಶೇಖರ,ಅಧ್ಯಕ್ಷರು
ಬಸವರಾಜ,ಕಾರ್ಯದರ್ಶಿ
ಪ್ರೌ.ಶಾ.ಸ.ಶಿ.ಸಂಘ,ಹಾಸನ.

ಕೆ.ಪಿ ನಾರಾಯಣ.ಅಧ್ಯಕ್ಷರು
ಬಿ.ಹೆಚ್.ತಿಮ್ಮೇಗೌಡ,ಕಾರ್ಯದರ್ಶಿ
ಪ್ರೌ.ಶಾ.ಮು.ಶಿ.ಸಂಘ,ಹಾಸನ.

ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖ್ಯಶಿಕ್ಷಕರು,ಸಹಶಿಕ್ಷಕರ ವೃಂದ

ಹಾಸನ ಜಿಲ್ಲಾ ಪ್ರೌಢಶಾಲಾ ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರ ಸಂಘ.ಹಾಸನ ಜಿಲ್ಲೆ.

ಹೆಚ್ಚಿನ ಮಾಹಿತಿಗಾಗಿ,

ಜಿಲ್ಲೆಯ ಪರೀಕ್ಷಾ ಕೇಂದ್ರಗಳು-95

| ಕ್ರ.ಸಂ | ತಾಲ್ಲೂಕಿನ ಹೆಸರು | ಪರೀಕ್ಷಾ ಕೇಂದ್ರಗಳ ಸಂಖ್ಯೆ |
|---|---|---|
| 1 | ಆಲೂರು | 06 |
| 2 | ಅರಕಲಗೂಡು | 09 |
| 3 | ಅರಸೀಕೆರೆ | 14 |
| 4 | ಬೇಲೂರು | 09 |
| 5 | ಚನ್ನರಾಯಪಟ್ಟಣ | 13 |
| 6 | ಹಾಸನ | 22 |
| 7 | ಹೊಳೆನರಸೀಪುರ | 09 |
| 8 | ಸಕಲೇಶಪುರ | 09 |
| ಒಟ್ಟು | | 91 |

## 2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಮಾಹಿತಿ.

| ಕ್ರ ಸಂ | ತಾಲ್ಲೂಕು | ನೋಂದಣಿಯಾದ ವಿದ್ಯಾರ್ಥಿಗಳು |
|---|---|---|
| 1 | ಆಲೂರು | 1053 |
| 2 | ಅರಕಲಗೂಡು | 2340 |
| 3 | ಅರಸೀಕೆರೆ | 3492 |
| 4 | ಬೇಲೂರು | 2083 |
| 5 | ಚನ್ನರಾಯಪಟ್ಟಣ | 2927 |
| 6 | ಹಾಸನ | 5077 |
| 7 | ಹೊಳೆನರಸೀಪುರ | 2485 |
| 8 | ಸಕಲೇಶಪುರ | 1217 |
| ಒಟ್ಟು | | 20674 |

# ಸಂಪನ್ಮೂಲಶಿಕ್ಷಕರತಂಡ

| ವಿಷಯ : ಸಮಾಜ ವಿಜ್ಞಾನ | | | |
|---|---|---|---|
| ಕ್ರ.ಸಂ | ಸಂಪನ್ಮೂಲ ಶಿಕ್ಷಕರ ಹೆಸರು | ಶಾಲಾ ವಿಳಾಸ | ದೂರವಾಣಿ ಸಂಖ್ಯೆ |
| 01 | ಶ್ರೀ ಅನಂತರಾಜು. ಸಿ.ಇ, | ಜಿ.ಹೆಚ್.ಎಸ್, ದೇವಿಹಳ್ಳಿ, ಹಾಸನ ತಾಲ್ಲೂಕು. | 9449394777 |
| 02 | ಶ್ರೀ ರವಿ. ಬಿ.ಬಿ, | ಜಿ.ಹೆಚ್.ಎಸ್, ಆದರವಳ್ಳಿ, ಸಕಲೇಶಪುರ ತಾಲ್ಲೂಕು. | 8970086424 |
| 03 | ಶ್ರೀ ಸತ್ಯನಾರಾಯಣ. ಟಿ, | ಜಿ.ಹೆಚ್.ಎಸ್, ಗವೇನಹಳ್ಳಿ, ಹಾಸನ ತಾಲ್ಲೂಕು. | 9480227560 |
| 04 | ಶ್ರೀ ಮಂಜಪ್ಪ. | ಎನ್.ಹೆಚ್.ಎಸ್, ದೊಡ್ಡಕುಂಚೆ, ಹೊಳೇನರಸೀಪುರ ತಾ॥ | 9731654441 |
| 05 | ಶ್ರೀ ಸತೀಶ. ಎಂ. ಎನ್, | ಜಿ.ಹೆಚ್.ಎಸ್, ಮೋಕಲಿ, ಅರಕಲಗೂಡು ತಾಲ್ಲೂಕು. | 9632999040 |
| 06 | ಶ್ರೀ ಹರೀಶ. ಕೆ.ಎಲ್, | ಸಂತ ಮೇರಿಸ್ ಪ್ರೌಢಶಾಲೆ, ಆಲ್ಫೋನ್ಸ್‌ನಗರ, ಸಿ.ಆರ್.ಪಟ್ಟಣ ತಾ॥ | 9972831640 |
| 07 | ಶ್ರೀ ಸಿದ್ಧಪ್ಪ. ಹೆಚ್. ಎನ್ | ಜಿ.ಜೆ.ಸಿ, (ಪ್ರೌ.ಶಾಲೆ) ಅರಕಲಗೂಡು. | 9035990778 |
| 08 | ಶ್ರೀ ರಾಘವೇಂದ್ರ. ಸಿ.ಪಿ, | ಜಿ.ಹೆಚ್.ಎಸ್, ಚೀಕನಹಳ್ಳಿ, ಬೇಲೂರು ತಾಲ್ಲೂಕು. | 9900440068 |
| 09 | ಶ್ರೀ ಸತ್ಯಪ್ಪ ಕಪನಿಂಬರಗಿ | ಜಿ.ಹೆಚ್.ಎಸ್, ಕುಂದೂರು, ಆಲೂರು ತಾಲ್ಲೂಕು. | 9945799791 |
| 10 | ಶ್ರೀ ದೇವರಾಜ. ಕೆ, | ಎಸ್.ಮಾನಸ ಪ್ರೌಢಶಾಲೆ, ಬಾಳೆಗದ್ದೆ, ಸಕಲೇಶಪುರ ತಾ॥ | 9916384142 |
| 11 | ಶ್ರೀ ದೇವರಾಜ. ಸಿ.ಇ | ಜಿ.ಹೆಚ್.ಎಸ್, ಹಾರೋಸೋಮನಹಳ್ಳಿ, ಸಿ.ಆರ್.ಪಟ್ಟಣ ತಾ॥ | 9449887704 |
| 12 | ಶ್ರೀ ಈರಣ್ಣ ರಿತ್ತಿ | ಜಿ.ಹೆಚ್.ಎಸ್, ಹರಿಹಳ್ಳಿ ಟೆಂಪಲ್, ಆಲೂರು ತಾ॥ | 9008554205 |
| 13 | ಶ್ರೀ ತಿಪ್ಪೇಶ್ | ಸರ್ಕಾರಿ ಪ್ರೌಢಶಾಲೆ, ನೇರಳೆಕಟ್ಟೆ, ಬೇಲೂರು ತಾ॥ | 8970411741 |
| 14 | ಶ್ರೀ ಯಲ್ಲಪ್ಪ | ಸರ್ಕಾರಿ ಪ್ರೌಢಶಾಲೆ, ನಗರನಹಳ್ಳಿ, ಹೊಳೇನರಸೀಪುರ ತಾ॥ | 9611628810 |
| 15 | ಶ್ರೀ ಮಂಜೇಗೌಡ. ಎನ್.ಕೆ | ಶ್ರೀ ಬಸವೇಶ್ವರ ಪ್ರೌಢಶಾಲೆ, ಅರಸೀಕೆರೆ. | 8453561060 |
| 16 | ಶ್ರೀಮತಿ ಕಮಲ ವಿ ಕೊಡೆಯ | ಸರ್ಕಾರಿ ಪ್ರೌಢಶಾಲೆ, ಕುರುವಂಕ, ಅರಸೀಕೆರೆ ತಾ॥ | 9731195628 |

## ಮುನ್ನುಡಿ

**ದಿನಾಂಕ : 01–01–2019**

**ಹೊಸ ವರುಷದ ಶುಭಾಶಯಗಳೊಂದಿಗೆ..**

**ಪ್ರಿಯ ಶಿಕ್ಷಕರೆ,**

ಹಾಸನ ಜಿಲ್ಲೆಯು ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಐತಿಹಾಸಿಕವಾಗಿ ವಿಶಿಷ್ಠ ಛಾಪನ್ನು ಮೂಡಿಸಿ ರಾಜ್ಯದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿರುವುದು ತಮಗೆಲ್ಲಾ ತಿಳಿದ ವಿಷಯವಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲೂ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂಬುದು ಸಮುದಾಯದ ನಿರೀಕ್ಷೆಯಾಗಿರುತ್ತದೆ. ಕಳೆದ ಬಾರಿ ಉತ್ತಮ ಫಲಿತಾಂಶ ನೀಡಿದ ನಿಮಗೆಲ್ಲಾ ಅಭಿನಂದನೆಗಳು.

ಜಿಲ್ಲೆಯಲ್ಲಿ ಒಟ್ಟು 532 ಪ್ರೌಢಶಾಲೆಗಳಿದ್ದು, ಎಸ್.ಎಸ್.ಎಲ್.ಸಿ. ಹಂತವು ಪ್ರತಿಯೊಬ್ಬ ವಿದ್ಯಾರ್ಥಿಗೂ ಶೈಕ್ಷಣಿಕವಾಗಿ ಭವಿಷ್ಯದ ದೃಷ್ಟಿಯಲ್ಲಿ ಪ್ರಮುಖ ಹಂತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷ ಎಸ್.ಎಸ್.ಎಲ್.ಸಿ. ಫಲಿತಾಂಶ ಉತ್ತಮಗೊಳಿಸುವಲ್ಲಿ ಪ್ರಾರಂಭದಿಂದಲೇ ಹತ್ತು–ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಮುಖ್ಯವಾಗಿ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರ ತರಬೇತಿ, ಮಾಸಿಕ ಕಾರ್ಯಾಗಾರ, ಆಪ್ತ ಸಮಾಲೋಚನೆ, ಫಲಿತಾಂಶ ಉತ್ತಮ ಪಡಿಸಲು ಶಾಲಾವಾರು ಮತ್ತು ವಿಷಯವಾರು ಕ್ರಿಯಾಯೋಜನೆ ತಯಾರಿಕೆ ಮತ್ತು ಅನುಷ್ಠಾನ ಹಾಗೂ ಬೆಳಗಿನ ವಿಶೇಷ ತರಗತಿಗಳು, ಸಂಜೆ ಗುಂಪು ಅಧ್ಯಯನ, ವಿಶ್ವಾಸ ಕಿರಣ, ಮಿಸ್ಡ್ ಕಾಲ್, ಪೋಷಕರ ಮನೆ–ಮನೆ ಭೇಟಿ, ದತ್ತು ಯೋಜನೆ, ಅರ್ಧವಾರ್ಷಿಕ ಪರೀಕ್ಷಾ ಫಲಿತಾಂಶದ ವಿಶ್ಲೇಷಣೆ, ಡಿಸೆಂಬರ್ ಮಾಹೆಯಲ್ಲಿ ಎಲ್ಲಾ ತರಬೇತಿ, ಪ್ರವಾಸ ಹಾಗೂ ಶಾಲಾ ವಾರ್ಷಿಕೋತ್ಸವ, ಪಾಠ ಬೋಧನೆ ಮುಕ್ತಾಯಗೊಳಿಸಿ ಜನವರಿಯಿಂದ ಪುನರಾವರ್ತನೆ ಆರಂಭಿಸುವುದು.

ಜನವರಿ, ಫೆಬ್ರವರಿಯಲ್ಲಿ ಎರಡು ಪೂರ್ವಸಿದ್ಧತಾ ಪರೀಕ್ಷೆಗಳು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ವಿದ್ಯಾರ್ಥಿ ಸಂವಾದ ಮತ್ತು ಪರೀಕ್ಷಾ ಅಂಗಳ ಕಾರ್ಯಕ್ರಮ, ಶಿಕ್ಷಕರ ಅಂತರ್‌ಶಾಲಾ ಭೇಟಿ ಮತ್ತು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಪ್ರೇರಣಾ ಶಿಬಿರ, ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳಿಗೆ ಅನುಷ್ಠಾನಾಧಿಕಾರಿಗಳ ಭೇಟಿ ಮತ್ತು ಮಾರ್ಗದರ್ಶನ ಇತ್ಯಾದಿ ಚಟುವಟಿಕೆಗಳನ್ನು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಎಸ್.ಎಸ್.ಎಲ್.ಸಿ. ಫಲಿತಾಂಶ ಪ್ರಗತಿಗಾಗಿ ಹಮ್ಮಿಕೊಂಡಿರುವ ತಾಲ್ಲೂಕುವಾರು ಕಾರ್ಯಚಟುವಟಿಕೆಗಳ ಬಗ್ಗೆ ಪ್ರತಿ ಮಾಹೆ ಪ್ರಗತಿ ಪರಿಶೀಲನೆ ಹಾಗೂ ತಾಯಂದಿರ ಸಭೆಗಳ ಆಯೋಜನೆಗೆ ಸೂಚನೆ ಹಾಗೂ ಪ್ರತಿ ವಿದ್ಯಾರ್ಥಿಗೆ ಪ್ರೇರಣೆ ನೀಡುವಂತಹ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ವಿಶೇಷವಾಗಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿ, ಉತ್ತಮ ಫಲಿತಾಂಶ ಪಡೆಯಲು ನೆರವಾಗುವಂತೆ ನುರಿತ ಶಿಕ್ಷಕರಿಂದ ವಿಷಯವಾರು ಕೈಪಿಡಿ ಹೊರತರಲು ಯೋಜಿಸಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸೂಚನೆಯಂತೆ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಉಪನಿರ್ದೇಶಕರು (ಆಡಳಿತ) ಆದ ನಾವು ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳಲ್ಲಿ ಏಕರೂಪದ ಫಲಿತಾಂಶ ಸುಧಾರಣ ವ್ಯವಸ್ಥೆಯನ್ನು ಜಾರಿಗೊಳಿಸಿ, ಅನುಷ್ಠಾನ ಹಾಗೂ ಅನುಪಾಲನೆ ಮಾಡಲು ತೀರ್ಮಾನಿಸಿ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ನುರಿತ ಶಿಕ್ಷಕರು ಹಾಗೂ ಶಿಕ್ಷಕ ಸಂಘಗಳೊಂದಿಗೆ ಸಮಾಲೋಚನೆ ನಡೆಸಿ ಈ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ.

ಅಭ್ಯಾಸ ಪ್ರಶ್ನೆಪತ್ರಿಕೆಗಳು, ಬೇರೆ ಜಿಲ್ಲೆಗಳ ಕೈಪಿಡಿಗಳು ಹಾಗೂ ಮಂಡಳಿ ತಯಾರಿಸಿರುವ ನೀಲನಕ್ಷೆ ಮತ್ತು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅವಲೋಕಿಸಿ ಈ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಜನವರಿ ಪ್ರಾರಂಭದಿಂದ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಈ ಕೈಪಿಡಿಯನ್ನು ಪೂರ್ಣ ಪ್ರಮಾಣದಲ್ಲಿ ಕಲಿಸಿದರೂ ವಿದ್ಯಾರ್ಥಿ ಉತ್ತೀರ್ಣ ಅಂಕಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದು ನಮ್ಮೆಲ್ಲರ ಸದಾಶಯ. ಈ ಕೈಪಿಡಿಯು ಪ್ರಸಕ್ತ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಉತ್ತಮ ಫಲಿತಾಂಶಕ್ಕೆ ನಾಂದಿಯಾಗುತ್ತದೆಂಬ ವಿಶ್ವಾಸ ನಮ್ಮದಾಗಿದೆ.

ಈ ಕೈಪಿಡಿಯನ್ನು ಸಿದ್ಧಪಡಿಸಲು ಸಹಕರಿಸಿದ ಇಲಾಖೆಯ ಎಲ್ಲಾ ಅನುಷ್ಠಾನ ಅಧಿಕಾರಿಗಳು, ವಿಷಯ ಶಿಕ್ಷಕರು ಹಾಗೂ ಹಾಸನ ಜಿಲ್ಲಾ ಪ್ರೌಢಶಾಲಾ ಮುಖ್ಯಶಿಕ್ಷಕರ ಸಂಘ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಈ ಕಾರ್ಯಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇವೆ.

**ಶುಭ ನಿರೀಕ್ಷೆಗಳೊಂದಿಗೆ.**

| | | |
|---|---|---|
| **ಶ್ರೀ ಎಸ್.ಜಿ.ನಾಗೇಶ್** | **ಶ್ರೀ ಹೆಚ್. ಮಂಜುನಾಥ್** | **ಶ್ರೀ ಹೆಚ್. ಸಿ. ಪುಟ್ಟಸ್ವಾಮಿ** |
| ಉಪನಿರ್ದೇಶಕರು (ಅಬಿವೃಧ್ಧಿ) | ಉಪನಿರ್ದೇಶಕರು (ಆಡಳಿತ) | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು |
| ಡಯಟ್, ಹಾಸನ ಜಿಲ್ಲೆ. | ಸಾ.ಶಿ. ಇಲಾಖೆ, ಹಾಸನ ಜಿಲ್ಲೆ. | ಜಿಲ್ಲಾ ಪಂಚಾಯತ್, ಹಾಸನ ಜಿಲ್ಲೆ. |

*************

## ಶಿಕ್ಷಕರಿಗೆ ಸೂಚನೆಗಳು

- ಈ ಕೈಪಿಡಿಯನ್ನು 2018–19ನೇ ಸಾಲಿನ ಕ.ಪ್ರೌ.ಶಿ ಪರೀಕ್ಷಾಮಂಡಳಿ ನಿಗದಿಪಡಿಸಿರುವ ಆಧ್ಯಾಯವಾರು ಅಂಕ ಹಂಚಿಕೆಯನ್ನು ಆಧರಿಸಿ ತಯಾರಿಸಲಾಗಿದೆ. ಆಧ್ಯಾಯವಾರು ಅಂಕ ಹಂಚಿಕೆಯನ್ನು ಆಧರಿಸಿ ಪ್ರಶ್ನೆ ಪತ್ರಿಕೆ ತಯಾರಿಸಲಾಗುತ್ತದೆಯೇ ಹೊರತು ನೀಲನಕಾಶೆಯನ್ನು ಆಧರಿಸಿ ಅಲ್ಲ ಎಂಬ ಅಂಶವನ್ನು ಶಿಕ್ಷಕರು ಗಮನದಲ್ಲಿಟ್ಟುಕೊಳ್ಳಬೇಕು.

- ಈ ಕೈಪಿಡಿಯಲ್ಲಿ ತಯಾರಿಸಲಾಗಿರುವ ಪ್ರಶ್ನೆಗಳು ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಬಂದೇ ಬರುತ್ತವೆ ಎಂದು ಯಾವುದೇ ಕಾರಣಕ್ಕೂ ಭಾವಿಸುವಂತಿಲ್ಲ. ಈ ಕೈಪಿಡಿಯಲ್ಲಿ ರಚಿಸಲಾಗಿರುವ ಪ್ರಶ್ನೆಗಳು ಕೇವಲ ಸಂಭವನೀಯ.

- ಈ ಕೈಪಿಡಿಯಲ್ಲಿ ರಚಿಸಲಾಗಿರುವ ಪ್ರಶ್ನೆಗಳ ಜೊತೆಗೆ ಸಾಧ್ಯವಾದ ಮತ್ತು ಸರಳವಾದ ಇನ್ನೂ ಕೆಲವು ಪ್ರಶ್ನೆಗಳು ಮತ್ತು ಉತ್ತರಗಳನ್ನು ರಚಿಸಿ ವಿದ್ಯಾರ್ಥಿಗಳಿಗೆ ತಿಳಿಸುವುದು.

- ಈ ಕೈಪಿಡಿಯಲ್ಲಿ ರಚಿಸಲಾಗಿರುವ ಪ್ರಶ್ನೋತ್ತರಗಳನ್ನು ವಿದ್ಯಾರ್ಥಿಗಳ ಮನಮುಟ್ಟುವಂತೆ ಅರ್ಥೈಸಿಸಿ ಹೆಚ್ಚಿನ ಅಭ್ಯಾಸ ಮಾಡಿಸುವುದು.

- ಅತ್ಯಂತ ಸರಳವಾಗಿ ಭೂಪಟ ಬಿಡಿಸುವ ಮತ್ತು ಸ್ಥಳ ಗುರುತಿಸುವ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.

- ಕೆಲವು ಪ್ರಶ್ನೆಗಳಿಗೆ 6–10 ಅಂಶಗಳ ಉತ್ತರವಿದ್ದು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸುಲಭವಾದ 4–6 ಅಂಶಗಳನ್ನು ಕಲಿಸುವುದು.

- ಇನ್ನು ಮುಂದೆ ನೀಲನಕಾಶೆ ಬಿಡುಗಡೆ ಮಾಡುವುದಿಲ್ಲವೆಂದು ಕೆ.ಎಸ್.ಇ.ಇ.ಬಿ ಸ್ಪಷ್ಟಪಡಿಸಿದ್ದು ಸಾಧ್ಯವಾದಷ್ಟು ಎಲ್ಲಾ ಅಧ್ಯಾಯಗಳ ಮುಖ್ಯ ಪ್ರಶ್ನೋತ್ತರಗಳನ್ನು ಅಭ್ಯಾಸ ಮಾಡಿಸುವುದು.

- ಈ ಕೈಪಿಡಿಯು 60 ಅಂಕ ಗಳಿಸುವ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತಿದ್ದು ಶಿಕ್ಷಕರು ತಮ್ಮ ಶಾಲೆಯಲ್ಲಿನ ಮಕ್ಕಳ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಇದನ್ನು ಬಳಸಿಕೊಳ್ಳುವುದು.

- 2014–15 ನೇ ಶೈಕ್ಷಣಿಕ ಸಾಲಿನಿಂದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ಮೌಲ್ಯಮಾಪನ ಕ್ರಮ ಬದಲಾಗಿದ್ದು ಶೇಕಡಾ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಹಾಗೂ ಶೇಕಡಾ 20 ಅಂಕಗಳಿಗೆ ಆಂತರಿಕ ಮೌಲ್ಯಮಾಪನವನ್ನು ಒಳಗೊಂಡಿದೆ.

- ಕೆಲವೊಂದು ಆಧ್ಯಾಯಗಳಿಗೆ ಕಲಿಕೆಯನ್ನು ಸರಳಗೊಳಿಸುವ ಉದ್ದೇಶದಿಂದ ಪಟ್ಟಿಯ (ಟೇಬಲ್) ರೂಪದಲ್ಲಿ ನೀಡಲಾಗಿದೆ. ಈ ಆಧ್ಯಾಯಗಳಿಗೆ ಶಿಕ್ಷಕರೇ ಅಭ್ಯಾಸ ಪ್ರಶ್ನೆಗಳನ್ನು ರಚಿಸಿಕೊಳ್ಳುವುದು.

- ಈ ಕೈಪಿಡಿಯಲ್ಲಿ ನೀಡಲಾಗಿರುವ ಪ್ರಶ್ನೋತ್ತರಗಳಲ್ಲದೆ ಆಧ್ಯಾಯವಾರು ಇನ್ನೂ ಹೆಚ್ಚುವರಿ ಪ್ರಶ್ನೋತ್ತರಗಳನ್ನು ಅಭ್ಯಾಸಮಾಡಿಸುವುದು ಸೂಕ್ತ.

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಗದಿಪಡಿಸಿರುವ ಅಧ್ಯಾಯವಾರು ಅಂಕ ಹಂಚಿಕೆ.

| ಕ್ರ.ಸಂ | ಆಧ್ಯಾಯದ ಹೆಸರು | ನಿಗದಿಪಡಿಸಿದ |
|---|---|---|
| | ಇತಿಹಾಸ | **25** |
| 01 | ಭಾರತಕ್ಕೆ ಯುರೋಪಿಯನ್ನರ ಆಗಮನ | 02 |
| 02 | ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ | 02 |
| 03 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | 03 |
| 04 | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು | 02 |
| 05 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು | 02 |
| 06 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857 | 03 |
| 07 | ಸ್ವಾತಂತ್ರ್ಯ ಹೋರಾಟ | 02 |
| 08 | ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ | 04 |
| 09 | ಸ್ವಾತಂತ್ರ್ಯೋತ್ತರ ಭಾರತ | 02 |
| 10 | 20ನೇ ಶತಮಾನದ ರಾಜಕೀಯ ಆಯಾಮಗಳು | 03 |
| | ರಾಜ್ಯಶಾಸ್ತ್ರ | **10** |
| 01 | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು | 02 |
| 02 | ಭಾರತದ ವಿದೇಶಾಂಗ ನೀತಿ | 02 |
| 03 | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 02 |
| 04 | ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ | 02 |
| 05 | ಜಾಗತಿಕ ಸಂಸ್ಥೆಗಳು | 02 |
| | ಸಮಾಜ ಶಾಸ್ತ್ರ | **08** |
| 01 | ಸಾಮಾಜಿಕ ಸ್ತರ ವಿನ್ಯಾಸ | 02 |
| 02 | ದುಡಿಮೆ | 02 |
| 03 | ಸಾಮಾಜಿಕ ಚಳವಳಿಗಳು | 02 |
| 04 | ಸಾಮಾಜಿಕ ಸಮಸ್ಯೆಗಳು | 02 |
| | ಭೂಗೋಳ | **23** |
| 01 | ಭಾರತದ ಸ್ಥಾನ ಮತ್ತು ವಿಸ್ತೀರ್ಣ | 01 |
| 02 | ಭಾರತದ ಮೇಲ್ಮೈ ಲಕ್ಷಣಗಳು | 02 |
| 03 | ಭಾರತದ ವಾಯುಗುಣ | 02 |
| 04 | ಭಾರತದ ಮಣ್ಣುಗಳು | 01 |
| 05 | ಭಾರತದ ಅರಣ್ಯ ಸಂಪತ್ತು | 02 |
| 06 | ಭಾರತದ ಜಲಸಂಪನ್ಮೂಲಗಳು | 02 |
| 07 | ಭಾರತದ ಭೂ ಸಂಪನ್ಮೂಲಗಳು | 02 |
| 08 | ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | 02 |
| 09 | ಭಾರತದ ಸಾರಿಗೆ ಮತ್ತು ಸಂಪರ್ಕ | 03 |
| 10 | ಭಾರತದ ಕೈಗಾರಿಕೆಗಳು | 02 |
| 11 | ಭಾರತದ ನೈಸರ್ಗಿಕ ವಿಪತ್ತುಗಳು | 02 |
| 12 | ಭಾರತದ ಜನಸಂಖ್ಯೆ | 02 |
| | ಅರ್ಥಶಾಸ್ತ್ರ | **07** |
| 01 | ಅಭಿವೃದ್ಧಿ | 02 |
| 02 | ಗ್ರಾಮೀಣ ಅಭಿವೃದ್ಧಿ | 01 |
| 03 | ಹಣ ಮತ್ತು ಸಾಲ | 02 |
| 04 | ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ | 02 |
| | ವ್ಯವಹಾರ ಅಧ್ಯಯನ | **07** |
| 01 | ಬ್ಯಾಂಕು ವ್ಯವಹಾರಗಳು | 02 |
| 02 | ಉದ್ಯಮಗಾರಿಕೆ | 01 |
| 03 | ವ್ಯವಹಾರದ ಜಾಗತೀಕರಣ | 02 |
| 04 | ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ | 02 |

# ಇತಿಹಾಸ

## ಅಧ್ಯಾಯ–1. ಭಾರತಕ್ಕೆ ಯುರೋಪಿಯನ್ನರ ಆಗಮನ

**I. ಈಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಕ್ರಿ.ಶ **1498** ರಲ್ಲಿ ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿದವನು ಯಾರು? **– ವಾಸ್ಕೋಡಗಾಮ (ಪೋರ್ಚುಗೀಸ್ ನಾವಿಕ)**
2. ವಾಸ್ಕೋಡಗಾಮನು ಭಾರತದ ಯಾವ ಸ್ಥಳಕ್ಕೆ ಬಂದಿಳಿದನು?– ಪಶ್ಚಿಮ ಕರಾವಳಿಯ ಕಲ್ಲಿಕೋಟೆ ಸಮೀಪದ **ಕಾಪ್ಪಡ್**
3. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ದಿವಾನಿ ಹಕ್ಕನ್ನು ನೀಡಿದನು ಯಾರು? – **2ನೇ ಷಾ ಆಲಂ**
4. ಯುರೋಪಿನಲ್ಲಿ ಬೇಡಿಕೆ ಇದ್ದ ಭಾರತದ ಸಾಂಬಾರ ಪದಾರ್ಥಗಳು ಯಾವುವು? **– ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ**
5. ಭಾರತದೊಂದಿಗೆ ಮರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ಯುರೋಪಿಯನ್ನರಲ್ಲಿ ಮೊದಲಿಗರು ಯಾರು?– **ಪೋರ್ಚುಗೀಸರು**
6. ಪೋರ್ಚುಗೀಸರ ಮೊಟ್ಟ ಮೊದಲ ವೈಸರಾಯ್ ಯಾರು?/ನೀಲಿ ನೀರಿನ ನೀತಿಯನ್ನು ಜಾರಿಗೆ ತಂದವರು ಯಾರು?
   **– ಫ್ರಾನ್ಸಿಸ್ಕೋ ಡಿ ಆಲ್ಮೇಡ**

**7. ನೀಲಿ ನೀರಿನ ನೀತಿ ಎಂದರೇನು?**
– ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ ನೀತಿ.

**8. ಮೂರು ಕಾರ್ನಾಟಿಕ್ ಯುದ್ಧಗಳು ನಡೆಯಲು ಮುಖ್ಯ ಕಾರಣವೇನು?**
–ಹೈದರಾಬಾದ್ ಸಂಸ್ಥಾನ & ಕಾರ್ನಾಟಿಕ್ ಪ್ರಾಂತ್ಯದಲ್ಲಿನ ರಾಜಕೀಯ ಅಸ್ಥಿರತೆಯ ಲಾಭ ಪಡೆಯಲು ಬ್ರಿಟಿಷರು & ಫ್ರೆಂಚರ ಯತ್ನ.

9. ಮೊದಲ ಕಾರ್ನಾಟಿಕ್ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **– ಏಕ್ಸ್–ಲಾ–ಚಾಪೆಲ್ ಒಪ್ಪಂದ**
10. ಎರಡನೇ ಕಾರ್ನಾಟಿಕ್ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **– ಪಾಂಡಿಚೇರಿ ಒಪ್ಪಂದ**
11. ಮೂರನೇ ಕಾರ್ನಾಟಿಕ್ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **– ಪ್ಯಾರೀಸ್ ಒಪ್ಪಂದ**
12. 1760ರಲ್ಲಿ ವಾಂಡಿವಾಷ್ ಕದನ ಯಾರು ಯಾರಿಗೆ ನಡೆಯಿತು? **– ಫ್ರೆಂಚರಕೌಂಟ್ ಡಿ ಲಾಲಿಮತ್ತು ಬ್ರಿಟಿಷರ ಸರ್ ಐರ್ ಕೂಟ್**
13. ದಸ್ತಕ್ ಎಂದರೇನು? **– ಯಾವುದೇ ತೆರಿಗೆ ನೀಡದೆವ್ಯಾಪಾರ ನಡೆಸುವ ಪರವಾನಗಿ ಪತ್ರ.**

**II. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಭಾರತದಲ್ಲಿ ಡಚ್ಚರ ವ್ಯಾಪಾರ ಕೋಠಿಗಳು ಯಾವುವು?
   **– ಸೂರತ್, ಬ್ರೋಚ್, ಕ್ಯಾಂಬೆ, ಕೊಚ್ಚಿನ್, ನಾಗಪಟ್ಟಣ, ಮಚಲಿಪಟ್ಟಣ, ಚಿನ್ಸೂರ್**

**2. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ತಿಳಿಸಿ.**
1. ಆಟೋಮಾನ್ ಟರ್ಕರಿಂದ ಕಾನ್‌ಸ್ಟಾಂಟಿನೋಪಲ್ ನಗರದ ವಶ.
2. ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರದ ವ್ಯಾಪಾರಗಳ ಮೇಲೆ ಅಧಿಕ ತೆರಿಗೆ ವಿಧಿಸಿದರು
3. ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಪ್ರಯತ್ನ. 4. ನಾವಿಕರಿಗೆ ಪ್ರೋತ್ಸಾಹ ದೊರೆಯಿತು.
5. ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದುಗಳ ಸಂಶೋಧನೆ.

**3. ಕಾರ್ನಾಟಿಕ್ ಯುದ್ಧದಗಳ ಪರಿಣಾಮಗಳೇನು? ಅಥವಾ**
**ಕಾರ್ನಾಟಿಕ್ ಯುದ್ಧಗಳು ಬ್ರಿಟಿಷರು ಭಾರತದಲ್ಲಿ ಪ್ರಬಲರಾಗಲು ಸಹಾಯಕವಾದವು ಹೇಗೆ?**
1. ಫ್ರೆಂಚರು ಭಾರತದಲ್ಲಿ ತಮ್ಮ ನೆಲೆ ಕಳೆದುಕೊಂಡರು 2. **ಪ್ಯಾರಿಸ್ ಒಪ್ಪಂದದ** ಪ್ರಕಾರ ಫ್ರೆಂಚರು ಪಾಂಡಿಚೇರಿ ಪಡೆದರು.
3. ದಕ್ಷಿಣ ಭಾರತದಲ್ಲಿ ಫ್ರೆಂಚರು ಮೂಲೆಗುಂಪಾದರು. 4. ದಕ್ಷಿಣ ಭಾರತದಲ್ಲಿ ಬ್ರಿಟಿಷರು ಪ್ರಬಲರಾದರು.

**4. ಎರಡನೇ ಕಾರ್ನಾಟಿಕ್ ಯುದ್ಧವನ್ನು ವಿವರಿಸಿ.**
1. ಫ್ರೆಂಚರ ನೆರವಿನಿಂದ ಹೈದರಾಬಾದಿನಲ್ಲಿ ಸಲಾಬತ್‌ಜಂಗ್ ಹಾಗೂ ಕಾರ್ನಾಟಿಕ್‌ನಲ್ಲಿ ಚಂದಾಸಾಹೇಬ್ ಅಧಿಕಾರಕ್ಕೆ ಬಂದರು.
2. ರಾಬರ್ಟ್ ಕ್ಲೈವನು ಆರ್ಕಾಟಿನ ಮೇಲೆ ಆಕ್ರಮಣ ಮಾಡಿ ಚಂದಾಸಾಹೇಬನನ್ನು ಹತ್ಯೆ ಮಾಡಿದನು.
3. ಬ್ರಿಟಿಷರ ಬೆಂಬಲದಿಂದ ಆರ್ಕಾಟಿನಲ್ಲಿ ಮಹಮ್ಮದ್ ಅಲಿ ನವಾಬನಾದ. 4. **ಪಾಂಡಿಚೇರಿ ಒಪ್ಪಂದದಿಂದ** ಮುಕ್ತಾಯ.

**5. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.**
**ಕಾರಣಗಳು :** 1. ದಸ್ತಕ್‌ಗಳ ದುರುಪಯೋಗ 2. ಅನುಮತಿ ಇಲ್ಲದೆ ಕೋಟೆಯ ದುರಸ್ಥಿ 3. ಕಪ್ಪುಕೋಣೆ ದುರಂತ
**ಪರಿಣಾಮಗಳು :** 1. ಸಿರಾಜುದ್ದೌಲ್ ಮಡಿದನು. 2. ಮೀರ್‌ಜಾಫರ್ ಬಂಗಾಳದ ನವಾಬನಾದನು
3. ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ವ್ಯಾಪಾರಿಗಳ ಲೋಭಿತನ ಪ್ರದರ್ಶನ.
4. ಬ್ರಿಟಿಷರು ಬಂಗಾಳದಲ್ಲಿ ವ್ಯಾಪಾರದಹಕ್ಕನ್ನು ಪಡೆದರು. 5. ಮೀರ್ ಜಾಫರನಿಂದ ಬ್ರಿಟಿಷರಿಗೆ ಯುದ್ಧ ಪರಿಹಾರ.

**6. ಬಕ್ಸಾರ್ ಕದನಕ್ಕೆ ಕಾರಣಗಳು ಯಾವುವು?**
1. ಮೀರ್ ಖಾಸಿಂ ದಸ್ತಕ್‌ಗಳ ದುರ್ಬಳಕೆ ಪರಿಶೀಲಿಸಿ ಬಂಗಾಳದ ವ್ಯಾಪಾರವನ್ನು ಸುಂಕಮುಕ್ತಗೊಳಿಸಿದ.
2. ಭಾರತೀಯರು ವ್ಯಾಪಾರದಲ್ಲಿ ಬ್ರಿಟಿಷರೊಡನೆ ನೇರ ಸ್ಪರ್ಧಿಗಿಳಿದರು. 3. ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿದ್ದಿತು.

4. ಬ್ರಿಟಿಷರಿಂದ ಮೀರ್ ಖಾಸಿಂನ ಪದಚ್ಯುತಿ ಮತ್ತೆ ಮೀರ್ ಜಾಫರ್ ನವಾಬನಾಗಿ ನೇಮಕ.
5. ಮೀರ್‌ಖಾಸಿಮನು ಮೊಗಲರ ಷಾ ಆಲಂ ಮತ್ತು ಔದ್‌ನ ನವಾಬರೊಂದಿಗೆ ಸೇರಿ ಬ್ರಿಟಿಷರ ಮೇಲೆ ಯುದ್ಧ ಸಾರಿದನು.

**7. ಬಕ್ಸಾರ್ ಕದನದ ಪರಿಣಾಮಗಳಾವುವು?**

1. ಮೀರ್‌ಕಾಸಿಮನ ಒಕ್ಕೂಟ ಸೈನ್ಯಕ್ಕೆ ಸೋಲು. 2. ಷಾ ಅಲಂ ಬಂಗಾಳದಲ್ಲಿ ಬ್ರಿಟಿಷರಿಗೆ **ದಿವಾನಿ ಹಕ್ಕನ್ನು** ನೀಡಿದನು.
3. ಔದ್‌ನ ನವಾಬ ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50ಲಕ್ಷ ರೂ ನೀಡಿದ.
4. ಮೀರ್‌ಜಾಫರ್ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳವನ್ನುಬ್ರಿಟಿಷರುಪಡೆದರು. 5. ಬಂಗಾಳದಲ್ಲಿ **ದ್ವಿಪ್ರಭುತ್ವ** ಜಾರಿ.

**8. ದ್ವಿ ಪ್ರಭುತ್ವ ಎಂದರೇನು?ಅದನ್ನು ಜಾರಿಗೆ ತಂದವರು ಯಾರು?**

– ಬ್ರಿಟಿಷರಿಗೆ ಭೂ ಕಂದಾಯ ವಸೂಲಿ ಮಾಡುವ ಹಕ್ಕು. ನವಾಬನು ನ್ಯಾಯ ಆಡಳಿತಾತ್ಮಕ ಕಾರ್ಯಗಳ ನಿರ್ವಹಣೆ.
ಜಾರಿಗೆ ತಂದವನು ರಾಬರ್ಟ್ ಕ್ಲೈವ್.

## ಅಧ್ಯಾಯ-2. ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**I. ಈಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಮೊದಲನೇ ಆಂಗ್ಲೋ ಮರಾಠ ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **– ಸಾಲಬಾಯ್**
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ಯಾರು? **– ವೆಲ್ಲೆಸ್ಲಿ**
3. ಲಾರ್ಡ್ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?
**– ಭಾರತೀಯ ರಾಜ್ಯಗಳನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲು.**
4. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು? **– ಹೈದರಾಬಾದ್ ಸಂಸ್ಥಾನ.**
5. ಎರಡನೇ ಆಂಗ್ಲೋ-ಮರಾಠ ಯುದ್ಧಕ್ಕೆ ಮುಖ್ಯ ಕಾರಣವೇನು? **– ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷ.**
6. ಎರಡನೇ ಆಂಗ್ಲೋ-ಮರಾಠ ಯುದ್ಧದಲ್ಲಿ ಬ್ರಿಟಿಷರು ಮತ್ತು ಪೇಶ್ವೆ ಮಾಡಿಕೊಂಡ ಒಪ್ಪಂದ ಯಾವುದು?**– ಬೆಸ್ಸಿನ್ ಒಪ್ಪಂದ**
7. ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಯಾವುದು? **– ಲಾಹೋರ್ ಒಪ್ಪಂದ.**
8. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡವನು ಯಾರು? – **ಡಾಲ್‌ಹೌ**ಸಿ.

**9. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂದರೇನು?**

– ಯಾವುದೇ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ,ಅವನು ದತ್ತು ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ.

**10. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಲು ಕಾರಣವೇನು?**

– ವೆಲ್ಲೆಸ್ಲಿಯ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದದ್ದರಿಂದ.

**II. ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ.**

**1. ಮೊದಲನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.**

1. ಪೇಶ್ವೆ ನಾರಾಯಣರಾವ್‌ನನ್ನು ರಘೋಬನು ಕೊಲೆ ಮಾಡಿದ.
2. ನಾನಾ ಫಡ್ನವೀಸ್ ನೇತೃತ್ವದಲ್ಲಿ ಮರಾಠರು 2ನೇ ಮಾದವರಾವ್‌ನನ್ನು ಪೇಶ್ವೆಯಾಗಿ ನೇಮಕ.
3. ರಘೋಬನ ಬ್ರಿಟಿಷರ ಬೆಂಬಲ ಕೋರಿದನು. 4. ಬ್ರಿಟಿಷರು ಇದನ್ನು ತಮ್ಮ ಲಾಭಕ್ಕೆ ಬಳಸಿಕೊಂಡರು.

**2. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?**

1. ಭಾರತೀಯ ರಾಜನು ಬ್ರಿಟಿಷ್ ಸೈನ್ಯದ ತುಕಡಿಯನ್ನು ತನ್ನ ರಾಜ್ಯದಲ್ಲಿ ಇಟ್ಟುಕೊಳ್ಳಬೇಕು.
2. ಸೇನೆಯ ವೆಚ್ಚವನ್ನು ಆ ರಾಜ್ಯವೇ ಭರಿಸಬೇಕು. 3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನ ನೇಮಕ.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
5. ಗವರ್ನರ್‌ನ ಅನುಮತಿ ಇಲ್ಲದೆ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳುವಂತಿಲ್ಲ.
6. ಕಂಪನಿಯು ಆ ರಾಜ್ಯಕ್ಕೆ ರಕ್ಷಣೆಯನ್ನು ನೀಡಬೇಕಿತ್ತು.

**3. ಬ್ರಿಟಿಷರ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಹೇಗೆ ಸಹಕಾರಿಯಾಯಿತು?**

1. ದೇಶೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನ ದತ್ತು ಮಕ್ಕಳಿಗೆ ಉತ್ತರಾಧಿಕಾರದ ಹಕ್ಕಿರಲಿಲ್ಲ
2. ಆ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳುತ್ತಿದ್ದರು. 3. ಇದು ರಾಜಕೀಯ ಅಸ್ತ್ರವಾಗಿ ಬಳಸಲ್ಪಟ್ಟಿತು
4. ಇದಕ್ಕೆ ಒಳಪಟ್ಟ ರಾಜ್ಯಗಳು ಸತಾರ, ಜೈಪುರ್, ಸಂಬಲ್‌ಪುರ್, ಉದಯಪುರ್, ಝಾನ್ಸಿ, ನಾಗಪುರ

**4. ಮೂರನೇ ಆಂಗ್ಲೋ-ಮರಾಠ ಯುದ್ಧದ ಪರಿಣಾಮಗಳನ್ನು ತಿಳಿಸಿ.**

1. ಎರಡನೇ ಬಾಜಿರಾಯನು ಯುದ್ಧದಲ್ಲಿ ಸೋತನು. 2. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿದರು.
3. ಬಾಜಿರಾಯನಿಗೆ ವಿಶ್ರಾಂತಿ ವೇತನ. 4. ಶಿವಾಜಿಯ ವಂಶಸ್ಥ ಪ್ರತಾಪಸಿಂಹ ಸತಾರಾದಲ್ಲಿ ಅಧಿಕಾರಕ್ಕೆ ಬಂದನು.

## ಅಧ್ಯಾಯ –3. ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು.

**I. ಈಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. **ದಿವಾನಿ ಅದಾಲತ್ & ಫೌಜದಾರಿ ಅದಾಲತ್** ಎಂಬ ನ್ಯಾಯಾಲಯಗಳನ್ನು ಸ್ಥಾಪಿಸಿದವನು ಯಾರು? – **ವಾರನ್ ಹೇಸ್ಟಿಂಗ್ಸ್**
2. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ದತಿ ಯಾವುದು? – **ರೈತವಾರಿ ಪದ್ದತಿ**
3. ಆಧುನಿಕ ಶಿಕಣ್ಣ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ಯಾರು? – **ವಾರನ್ ಹೇಸ್ಟಿಂಗ್ಸ್**
4. ರೈತವಾರಿ ಪದ್ಧತಿಯನ್ನು ಮೊದಲಿಗೆ ಬಾರಾಮಹಲ್ ಪ್ರಾಂತ್ಯದಲ್ಲಿ ಪ್ರಯೋಗಿಸಿದವನು ಯಾರು? – **ಅಲೆಕ್ಸಾಂಡರ್ ರೀಡ್**
5. ರೈತವಾರಿ ಪದ್ಧತಿಯನ್ನು ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವನು ಯಾರು? – **ಥಾಮಸ್ ಮನ್ರೊ**
6. ಮಹಲ್ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಯಾರು? – **ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್**
7. ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು? – **ಕಾರ್ನವಾಲೀಸ್**
8. **ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು? ಇದನ್ನು ಜಾರಿಗೊಳಿಸಿದವರು ಯಾರು?**
 – ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದ ಹೊಸ ಕಂದಾಯ ಪದ್ಧತಿ. ಜಾರಿಗೊಳಿಸಿದವನು ಲಾರ್ಡ್ ಕಾರ್ನವಾಲೀಸ್
9. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಕಾನೂನು ಸದಸ್ಯನನ್ನಾಗಿ ಯಾರನ್ನು ನೇಮಕ ಮಾಡಲಾಯಿತು? – **ಮೆಕಾಲೆ**
10. ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿ ಯಾವುದು? – **ಮೆಕಾಲೆ ವರದಿ**

**II. ಈ ಪ್ರಶ್ನೆಗಳಿಗೆ5–6 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**1. ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.**

**ದಿವಾನಿ ಅದಾಲತ್:– 1.** ನಾಗರೀಕ ನ್ಯಾಯಾಲಯ 2. ಇವು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯ.
3. ಹಿಂದೂಗಳಿಗೆ ಧರ್ಮಶಾಸ್ತ್ರದ ಪ್ರಕಾರ ಮುಸಲ್ಮಾನರಿಗೆ ಷರಿಯತ್ ಕಾನೂನಿನ ಪ್ರಕಾರ ನ್ಯಾಯ.

**ಫೌಜದಾರಿ ಅದಾಲತ್:–** 1. ಅಪರಾಧ ನ್ಯಾಯಾಲಯ. 2. ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ.
3. ಕಾಜಿಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿಯೇ ಕಾರ್ಯ.

**2. ಬ್ರಿಟಿಷರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?**

1. ಸೂಪರಿಡೆಂಟೆಂಟ್ ಆಫ್ ಪೊಲೀಸ್ (SP) ಎಂಬ ಹುದ್ದೆ ಸೃಷ್ಟಿ.
2. ಜಿಲ್ಲಾ ಠಾಣೆಗಳು **ಕೊತ್ವಾಲರ** ಅಧೀನಕ್ಕೆ ಮತ್ತು ಹಳ್ಳಿಗಳು **ಚೌಕಿದಾರರ** ಅಧೀನಕ್ಕೆ.
3. ಕೊತ್ವಾಲರಿಗೆ ಹಳ್ಳಿಗಳಲ್ಲಿ ಕಳ್ಳತನ, ಅಪರಾಧ, ದರೋಡೆಗಳ ನಿಯಂತ್ರಣದ ಜವಾಬ್ದಾರಿ. 5. 1861ರಲ್ಲಿ **ಪೊಲೀಸ್ ಕಾಯ್ದೆ** ಜಾರಿ.
4. ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೆ. 6. 1902ರಲ್ಲಿ ಪೊಲೀಸ್ ಕಮಿಷನ್ ಕಾಯ್ದೆ ಜಾರಿ.

**3. ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ' ಮಾಡಿತು. ಹೇಗೆ?**

**1.** ರೈತರ ಭೂ ಮಾಲಿಕತ್ವವನ್ನು ಕಸಿದುಕೊಂಡಿತು 2. ಜಮೀನ್ದಾರರು ರೈತರಿಂದ ಹೆಚ್ಚಿನ ತೆರಿಗೆವಸೂಲಿ.
3. ತೆರಿಗೆ ನೀಡದ ರೈತರ ಭೂಮಿ ಬ್ರಿಟಿಷರ ವಶವಾಗುತಿತ್ತು.
4. ಇದರಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗಾಗಲಿಲ್ಲ.
5. ರೈತರು, ರೈತ ಕೂಲಿಕಾರ್ಮಿಕರು ಜಮೀನ್ದಾರರ ಶೋಷಣೆಗೊಳಗಾದರು, 6. ರೈತರ ಜೀವನ ಅತಂತ್ರ ಸ್ಥಿತಿಯಿಂದ ಕೂಡಿತ್ತು

**4. ರೈತವಾರಿ ಪದ್ದತಿಯು ಒಳಗೊಂಡ ಪ್ರಮುಖಾಂಶಗಳಾವುವು? ಅಥವಾ ರೈತವಾರಿ ಪದ್ದತಿಯಲ್ಲಿ ಅಡಕವಾಗಿರುವ ಅಂಶಗಳಾವುವು?**

1. ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕ. 2. ಭೂಮಿ ಉಳುಮೆ ಮಾಡುತ್ತಿದ್ದವನೇ ಅದರ ಮಾಲಿಕನಾದ.
3. ಉತ್ಪನ್ನದ ಶೇಕಡ 50 ಭಾಗ ಕಂದಾಯ ನಿಗದಿ. 4. 30 ವರ್ಷಗಳ ಕಂದಾಯ ನಿಗದಿ.
5. ತೆರಿಗೆ ಸಂಗ್ರಹಿಸಲು ಬ್ರಿಟಿಷರಿಂದ ಕಠಿಣ ಕ್ರಮ.

**5. ಬ್ರಿಟಿಷರ ಕಂದಾಯ ನೀತಿಗಳಿಂದಾದ ಪರಿಣಾಮಗಳಾವುವು?**

1. ರೈತರನ್ನು ಶೋಷಿಸುವ ಜಮೀನ್ದಾರಿ ಸಮುದಾಯ ಸೃಷ್ಟಿ. 2. ಭೂಮಿ ಮಾರಾಟದ ವಸ್ತುವಾಯಿತು.
2. ಜಮೀನ್ದಾರರ ಶೋಷಣೆಯಿಂದ ರೈತರಿಗೆ ಸಂಕಷ್ಟ. 4. ಕೃಷಿ ಕ್ಷೇತ್ರದ ವಾಣಿಜ್ಯೀಕರಣ
5. ಭೂಮಿಯನ್ನು ಪರಭಾರೆ ಮಾಡಿ ಸಾಲ ಪಡೆಯಬಹುದಾಗಿತ್ತು. 6. ಹಣದ ಲೇವಾದೇವಿಗಾರರು ಬಲಿಷ್ಠರಾದರು.
7. ಇಂಗ್ಲೆಂಡಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.

**6. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಾವುವು?**

1. ವಾರನ್ ಹೇಸ್ಟಿಂಗ್ಸ್ ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ. 2. ಕಲ್ಕತ್ತದಲ್ಲಿ ಮದರಸಾ ಪ್ರಾರಂಭ.
3. ಡಂಕನ್ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜು ಪ್ರಾರಂಭಿಸಿದನು. 4. ವಿಲಿಯಂ ಬೆಂಟಿಂಕ್ ಬ್ರಿಟಿಷ್ ಶಿಕ್ಷಣಕ್ಕೆ ಪ್ರೋತ್ಸಾಹ.
5. ಚಾರ್ಲ್ಸ್ ಗ್ರಾಂಟ್ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಒತ್ತಾಯ.
6. ಮೆಕಾಲೆ ವರದಿ ಅಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿ.
7. ಡಾಲ್ ಹೌಸಿ ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ.

**7. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿಮಾಡಿ.**

1. ಭಾರತೀಯರಲ್ಲಿ ಪ್ರಜಾಪ್ರಭುತ್ವ, ವೈಜ್ಞಾನಿಕ ಮತ್ತು ರಾಷ್ಟ್ರೀಯವಾದಿ ಮನೋಭಾವ ಬೆಳೆಯಿತು.
2. ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯ ರಚನೆಗೆ ಪ್ರೋತ್ಸಾಹ.
3. ವೃತ್ತ ಪತ್ರಿಕೆಗಳಿಂದ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಿತು.
4. ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.
5. ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂರ ಚಿಂತನೆಗಳು ಭಾರತೀಯರ ಆಲೋಚನೆಯಲ್ಲಿ ಹೊಸತನ.
6. ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲಾಯಿತು.
7. ಭಾರತೀಯರು ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

**8. ರೆಗ್ಯೂಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?(1773)**

1. ಬಂಗಾಳ ಪ್ರೆಸಿಡೆನ್ಸಿಯಿಂದ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳ ಮೇಲೆ ನಿಯಂತ್ರಣ.
2. ಬಂಗಾಳದ ಗವರ್ನರ್ ಹುದ್ದೆ ಗವರ್ನರ್ ಜನರಲ್ ಎಂದು ಬದಲಾವಣೆ. 4. ಕೋಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪನೆ.
3. ವಾರನ್ ಹೇಸ್ಟಿಂಗ್ಸ್ ಪ್ರಥಮ ಗವರ್ನರ್ ಜನರಲ್ ಆದ. 5. ಭಾರತದ ಆಡಳಿತ ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ.
6. ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ ಅನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಅಥವಾ ಶಾಂತಿ ಸಂಧಾನ ನಡೆಸುವಂತಿಲ್ಲ.

**9. 1919ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳಾವುವು?**

1. ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆ. 2. ಪ್ರಾಂತ್ಯಗಳಲ್ಲಿ ದ್ವಿಸರಕಾರ ಜಾರಿ.
3. ಭಾರತಕ್ಕೆ ಒಬ್ಬ ಹೈಕಮಿಷನರ್ ನೇಮಕ. 4. ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ.
5. ಕೇಂದ್ರ & ಪ್ರಾಂತ್ಯಗಳಿಗೆ ಪ್ರತ್ಯೇಕ ಬಜೆಟ್. 6. ಮುಸ್ಲಿಂ, ಸಿಖ್, ಆಂಗ್ಲೋ ಇಂಡಿಯನ್ನರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ.

**10. 1935ರ ಭಾರತ ಸರ್ಕಾರ ಕಾಯ್ದೆ ಭಾರತ ಸಂವಿಧಾನದ ಬುನಾದಿ ಸಮರ್ಥಿಸಿ.**

1. ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನು ಆಧರಿಸಿವೆ. 3. ಅಖಿಲ ಭಾರತ ಒಕ್ಕೂಟಕ್ಕೆ ಅವಕಾಶ.
2. ಸಂಪೂರ್ಣ ಜವಾಬ್ದಾರಿ ಸರ್ಕಾರ ರಚನೆ. 4. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆ.
5. ಫೆಡರಲ್ ಕೋರ್ಟ್ ಸ್ಥಾಪನೆ. 6. ಕೇಂದ್ರದಲ್ಲಿ ದ್ವಿಸರಕಾರ ಜಾರಿ. 7. ಪ್ರಾಂತ್ಯಗಳಿಗೆ ಸ್ವಾಯತ್ತತೆ.

**11. 1833ರ ಚಾರ್ಟರ್ ಕಾಯ್ದೆಯ ಪ್ರಮುಖ ಅಂಶಗಳಾವುವು?**

1. ಬಂಗಾಳದ ಗವರ್ನರ್ ಜನರಲ್ ಭಾರತದ ಗವರ್ನರ್ ಜನರಲ್ ಆದ.
2. ಭಾರತದ ವ್ಯಾಪಾರಿ ಸರಕುಗಳ ನಿಯಂತ್ರಣ ಅಧಿಕಾರ ಗವರ್ನರ್ ಜನರಲ್‌ನಿಗೆ.
3. ಯುದ್ಧ, ಶಾಂತಿ ಮತ್ತು ರಾಜತಾಂತ್ರಿಕ ವಿಷಯಗಳ ಬಗ್ಗೆ ತೀರ್ಮಾನಿಸುವ ಹಕ್ಕು ಬಂಗಾಳದ ಸರ್ಕಾರಕ್ಕೆ.
4. ಧರ್ಮ, ಬಣ್ಣ ಮತ್ತು ಹುಟ್ಟಿನ ಆಧಾರದ ಮೇಲೆ ತಾರತಮ್ಯ ನಿಷೇಧ.
5. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ನ್ಯಾಯಾಂಗ ಪರಿಣಿತನ ನೇಮಕ.
6. ಬ್ರಿಟಿಷ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬರಲು ಮುಕ್ತ ಪರವಾನಗಿ.

**12. 1909 ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳಾವುವು?**

1. ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆ 16 ರಿಂದ 60ಕ್ಕೆ ಹೆಚ್ಚಳ. 2. ಪ್ರಾಂತ್ಯಗಳ ಶಾಸನ ಸಭೆಗಳ ಸದಸ್ಯರ ಸ್ಥಾನ ಹೆಚ್ಚಳ.
3. ಮೊದಲ ಬಾರಿಗೆ ಚುನಾವಣೆ ಮೂಲಕ ಶಾಸನ ಸಭೆಗೆ ಆಯ್ಕೆ. 4. ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಮತಗಟ್ಟೆ ಜಾರಿ.

## ಅಧ್ಯಾಯ-4. ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

**I. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಯಾಯಿತು? **– ಮದ್ರಾಸ್ ಒಪ್ಪಂದ**
2. ಎರಡನೆಯ ಆಂಗ್ಲೋ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **– ಮಂಗಳೂರು ಒಪ್ಪಂದ**
3. ಮೂರನೇ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಯಾಯಿತು? **– ಶ್ರೀರಂಗಪಟ್ಟಣ ಒಪ್ಪಂದ**
4. **ಎರಡನೇ ಆಂಗ್ಲೋ – ಮೈಸೂರು ಯುದ್ಧಕ್ಕೆ ಕಾರಣವೇನು?**
   – ಹೈದರಾಲಿಯ ನಿಯಂತ್ರಣಕ್ಕೊಳಪಟ್ಟು, ಫ್ರೆಂಚರ ವಸಾಹತುವಾಗಿದ್ದ ಮಾಹೆಯ ಮೇಲೆ ಬ್ರಿಟಿಷರ ದಾಳಿ

5 **ಮೂರನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣವೇನು?** –ಟಿಪ್ಪುವಿನಿಂದ ಬ್ರಿಟಿಷರ ಸ್ನೇಹಿತ ತಿರುವಾಂಕೂರಿನ ರಾಜನ ಮೇಲೆ ದಾಳಿ.

**6. ಭಾರತದ ಚರಿತ್ರೆಯಲ್ಲಿ 18ನೇ ಶತಮಾನವನ್ನು ರಾಜಕೀಯ ಸಮಸ್ಯೆಗಳ ಶತಮಾನ ಎಂದು ಚಿತ್ರಿಸಲಾಗಿದೆ.ಏಕೆ?**
–1707ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ.

**7. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಸಿಡಿದೆದ್ದರು?**
– ಬ್ರಿಟಿಷರು ಶಸ್ತ್ರಾಸ್ತ್ರಗಳ ಬಳಕೆಯ ನಿರ್ಬಂಧ ಕಾನೂನು ಜಾರಿಗೆ ತಂದಿದ್ದರಿಂದ.

**II.ಈ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**1. ಇಂಗ್ಲಿಷರು ಮದ್ರಾಸ್ ಒಪ್ಪಂದಕ್ಕೆ ಸಹಿ ಹಾಕುವುದು ಏಕೆ ಅನಿವಾರ್ಯವಾಯಿತು?**

1. ಹೈದರ್ ಆಲಿಯ ವಿರುದ್ಧ ಬ್ರಿಟಿಷರು ತ್ರಿಪಕ್ಷ ಒಕ್ಕೂಟ ರಚಿಸಿಕೊಂಡರು. (ಮರಾಠರು, ನಿಜಾಮ,ಬ್ರಿಟಿಷರು)
2. ಹೈದರಾಲಿ ಮಿತ್ರಕೂಟ ಒಡೆದು ಬ್ರಿಟಿಷರ ವಿರುದ್ಧ ಎತ್ತಿಕಟ್ಟಿದನು. 3. ಹೈದರಾಲಿಯಿಂದ ಮದರಾಸಿನ ಮೇಲೆ ಮುತ್ತಿಗೆ.
4. ಹೆದರಿದ ಬ್ರಿಟಿಷರಿಂದ ಅನಿವಾರ್ಯವಾಗಿ **ಮದ್ರಾಸ್ ಒಪ್ಪಂದಕ್ಕೆ ಸಹಿ.**

**2. ಎರಡನೇ ಆಂಗ್ಲೋ-ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳೇನು?**

1. ಹೈದರಾಲಿಯು ಮರಣ. 2. ಟಿಪ್ಪು ಮಂಗಳೂರು ಬಳಿ ಬ್ರಿಟಿಷರನ್ನು ಸೋಲಿಸಿದನು 3. **ಮಂಗಳೂರು ಒಪ್ಪಂದಕ್ಕೆ ಸಹಿ.**

**3. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು? / 3ನೇ ಆಂಗ್ಲೋ-ಮೈಸೂರು ಯುದ್ಧದ ಪರಿಣಾಮಗಳೇನು?**

1. ಟಿಪ್ಪು ತನ್ನ ಅರ್ಧ ರಾಜ್ಯ ಬ್ರಿಟಿಷರಿಗೆ ಕೊಡಬೇಕು. 2. ಯುದ್ದ ಪರಿಹಾರವಾಗಿ 3ಕೋಟಿ ರೂಪಾಯಿಗಳನ್ನು ಕೊಡಬೇಕು.
3. ಹಣ ಕೊಡುವವರೆಗೆ ಟಿಪ್ಪುವಿನ ಇಬ್ಬರು ಮಕ್ಕಳನ್ನು ಬ್ರಿಟಿಷರಿಗೆ ಒತ್ತೆಯಾಳಾಗಿ ನೀಡುವುದು.
4. ಯುದ್ಧದಲ್ಲಿ ಸೆರೆ ಹಿಡಿದ ಸೈನಿಕರ ಬಿಡುಗಡೆ. **(ಅರ್ಧ ರಾಜ್ಯ, 3 ಕೋಟಿ, ಇಬ್ಬರು ಮಕ್ಕಳು)**

**4. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧವು ಬ್ರಿಟಿಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ಸಮರ್ಥಿಸಿ.(ಪರಿಣಾಮಗಳೇನು?)**

1. ಟಿಪ್ಪುವಿನ ಮರಣ 2. ಬ್ರಿಟಿಷರು ಟಿಪ್ಪುವಿನ ರಾಜ್ಯವನ್ನು ಮರಾಠರು ಹಾಗೂ ನಿಜಾಮನೊಂದಿಗೆ ಹಂಚಿಕೊಂಡರು
3. ಸಣ್ಣ ಪ್ರಾಂತ್ಯ ಮೈಸೂರು ಒಡೆಯರಿಗೆ ನೀಡಿಕೆ. 4. ಒಡೆಯರಿಂದ ಸಹಾಯಕ ಸೈನ್ಯಪದ್ಧತಿಗೆ ಸಹಿ.

**III.ಈ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**1. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಕಾರಣಗಳು ಯಾವುವು?**

1. ಟಿಪ್ಪು ಭಾರತೀಯ ರಾಜರನ್ನು ತನ್ನಡೆಗೆ ಸೆಳೆಯಲು ಮಾಡುತ್ತಿದ್ದ ಪ್ರಯತ್ನ. 2. ಟಿಪ್ಪು & ಫ್ರೆಂಚರ ನಡುವಿನ ಸಂಬಂಧ.
3. ಫ್ರೆಂಚರ ಸಹಕಾರಕ್ಕೆ ರಾಯಭಾರಿಯನ್ನು ಕಳಿಸಿದನು.
4. ಟಿಪ್ಪು ಮತ್ತು ಫ್ರೆಂಚರ ನಡುವಿನ ಸ್ನೇಹ ಬ್ರಿಟಿಷರಿಗೆ ಮುಳುವಾಗಬಹುದೆಂಬ ಭಾವನೆ.
5. ಹೊಸ ಷರತ್ತಗಳುಳ್ಳ ಒಪ್ಪಂದವನ್ನು ಟಿಪ್ಪುವಿನ ಮೇಲೆ ಹೇರಲಾಯಿತು. 6. ಅಸಮಾನ ಷರತ್ತುಗಳುಳ್ಳ ಒಪ್ಪಂದ ನಿರಾಕರಿಸಿದನು.

**2. ದೋಂಡಿಯ ವಾಘನು ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.**

1. ದೋಂಡಿಯ ವಾಘನಿಂದ ಖಾಸಗಿ ಸೈನ್ಯ ಸ್ಥಾಪನೆ. 2. ಶಿವಮೊಗ್ಗ ಹಾಗೂ ಬಿದನೂರಿನ ಕೋಟೆಗಳ ವಶ.
3. ಪಾಳೆಯಗಾರರು ವಾಘನಿಗೆ ಬೆಂಬಲ ನೀಡಿದರು 4. ಫ್ರೆಂಚರು ಸಹಾಯ ನೀಡಿದರು.
5. ಹರಿಹರ, ಚಿತ್ರದುರ್ಗ, ಸವಣೂರು ಪ್ರದೇಶಗಳಲ್ಲಿ ಬ್ರಿಟಿಷರ ಸೈನ್ಯ ಆತನನ್ನು ಹಿಂಬಾಲಿಸಿತು.
6. ಬ್ರಿಟಿಷರು ಕಾರ್ಯಾಚರಣೆ ನಡೆಸಿ ಕೋನ್‌ಗಲ್‌ನಲ್ಲಿ ವಾಘ್‌ನ ಹತ್ಯೆ.

**3. ಕಿತ್ತೂರಿನ ವೀರರಾಣಿ ಚೆನ್ನಮ್ಮ ಮತ್ತು ಬ್ರಿಟಿಷರ ನಡುವಿನ ಹೋರಾರವನ್ನು ವಿವರಿಸಿ.**

1. ಚೆನ್ನಮ್ಮ ಶಿವಲಿಂಗಪ್ಪನನ್ನು ದತ್ತು ಪಡೆದು ಆಡಳಿತ ಪ್ರಾರಂಭಿಸಿದಳು.
2. ಥ್ಯಾಕರೆ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಡಿ ಕಿತ್ತೂರನ್ನು ವಶಪಡಿಸಿಕೊಳ್ಳಲು ಯತ್ನಿಸಿದನು.
3. ಕಿತ್ತೂರಿನ ಖಜಾನೆ, ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು.
4. ಕಿತ್ತೂರಿನ ಸೈನ್ಯ ಬ್ರಿಟಿಷ್ ಸೈನ್ಯದ ಮೇಲೆ ದಾಳಿ. - ಥ್ಯಾಕರೆ ಗುಂಡೇಟಿಗೆ ಬಲಿ.
5. ಬ್ರಿಟಿಷ್ ಸೈನ್ಯದಿಂದ ಚೆನ್ನಮ್ಮನ ಸೆರೆ. 6. ಬೈಲಹೊಂಗಲ ಸೆರೆಮನೆಯಲ್ಲಿ ಚೆನ್ನಮ್ಮ ಮರಣ.

**4. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.**

1. ಚೆನ್ನಮ್ಮನ ಜೊತೆ ಬ್ರಿಟಿಷರ ವಿರುದ್ಧ ಹೋರಾಟ. 2. ಯುದ್ಧದಲ್ಲಿ ಬಂಧನ, ನಂತರ ಬಿಡುಗಡೆ.
3. ಸ್ವಾತಂತ್ರ್ಯದ ಬಗ್ಗೆ ಅಭಿಮಾನ. 4. ಗುಪ್ತ ಸಭೆಗಳನ್ನು ನಡೆಸಿ ಮುಂದಿನ ಯೋಜನೆ ರೂಪಿಸಿದನು
5. ಬ್ರಿಟಿಷರ ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳ ಲೂಟಿ.
6. ಬ್ರಿಟಿಷರು ಸಂಚು ಮಾಡಿ ರಾಯಣ್ಣನನ್ನು ಬಂಧಿಸಿ ನಂದಗಡದಲ್ಲಿ ಗಲ್ಲಿಗೇರಿಸಿದರು.

**5. ಸ್ವಾತಂತ್ರ್ಯ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದಿಂದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ.**

1. ಕೊಡಗಿನ ಶನಿವಾರಸಂತೆಯ ರೈತ. 2. ಬಂಡುಕೋರರನ್ನು ಸಂಘಟಿಸಿ ಜನರನ್ನು ಸಂತೈಸಿದನು.
3. ಸರ್ಕಾರ ಸ್ಥಾಪನೆಯ ನಂತರ ತಂಬಾಕು ಮತ್ತು ಉಪ್ಪಿನ ಸುಂಕ ರದ್ದು ಭರವಸೆ.
4. ಬೆಳ್ಳಾರೆಯಲ್ಲಿ ಸರ್ಕಾರಿ ಕಛೇರಿಯ ವಶ, ಅಧಿಕಾರಿಗಳ ಬಂಧನ.
5. ಸುಳ್ಯದ ಸುತ್ತಮುತ್ತ ಜನರಿಗೆ ಕಿರುಕುಳ ನೀಡುತ್ತಿದ್ದ ಅಮಲ್ದಾರನ ಹತ್ಯೆ.
6. ಪುತ್ತೂರು, ಮಂಗಳೂರುಗಳಲ್ಲಿ ಕಾರ್ಯಾಚರಣೆ, 7. ಬ್ರಿಟಿಷರು ಬಂದಿಸಿ ಗಲ್ಲಿಗೇರಿಸಿದರು.

## ಅಧ್ಯಾಯ – 5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

| ಸಮಾಜ/ಸಂಸ್ಥೆ /ಚಳವಳಿ | ಸಂಸ್ಥಾಪಕರು/ ಆರಂಭಿಸಿದವರು | ಉದ್ದೇಶ/ಕೊಡುಗೆ/ಸುಧಾರಣೆ | ಸಂಸ್ಥಾಪಕರು ಆರಂಭಿಸಿದ/ ರಚಿಸಿದ ಪತ್ರಿಕೆ/ ಶಿಕ್ಷಣ ಸಂಸ್ಥೆ/ ಗ್ರಂಥ/ಘೋಷಣೆ | ವಿಶೇಷತೆಗಳು |
|---|---|---|---|---|
| ಬ್ರಹ್ಮ ಸಮಾಜ ಆತ್ಮೀಯ ಸಭಾ | ರಾಜಾರಾಂ ಮೋಹನ್ ರಾಯ್ | * ಏಕದೇವತಾ ಆರಾಧನೆ * ಸ್ತ್ರೀ ಸಮಾನತೆ<br>* ಅರ್ಥಹೀನ ಅಚರಣೆಗೆ ವಿರೋಧ<br>* ಬಹುಪತ್ನಿತ್ವಕ್ಕೆ ವಿರೋಧ | * ಪತ್ರಿಕೆ–ಸಂವಾದ ಕೌಮುದಿ<br>* ಶಿಕ್ಷಣ ಸಂಸ್ಥೆ– ವೇದಾಂತ ಕಾಲೇಜು | ರಾಜಾರಾಂರನ್ನು ಠಾಗೂರರು ಭಾರತದ ಹರಿಕಾರ, ಪುನರುಜೀವನದ ಜನಕ & ರಾಷ್ಟ್ರೀಯತೆಯ ಪ್ರವಾದಿ ಎಂದಿದ್ದಾರೆ. |
| ಆರ್ಯ ಸಮಾಜ ಶುದ್ಧಿ ಚಳವಳಿ | ದಯಾನಂದ ಸರಸ್ವತಿ | * ಒಬ್ಬನೇ ದೇವರಲ್ಲಿ ನಂಬಿಕೆ<br>* ಸ್ತ್ರೀ–ಪುರುಷ ಸಮಾನತೆ<br>* ಜಾತಿ ಪದ್ಧತಿಗೆ ವಿರೋಧ<br>* ಬಹುಪತ್ನಿತ್ವ & ಬಾಲ್ಯವಿವಾಹ ಪದ್ಧತಿ ತಿರಸ್ಕಾರ | * ಗ್ರಂಥ–ಸತ್ಯಾರ್ಥ ಪ್ರಕಾಶ<br>* ಘೋಷಣೆ– ವೇದಗಳಿಗೆ ಮರಳಿ<br>* ಶಿಕ್ಷಣ ಸಂಸ್ಥೆ– ದಯಾನಂದ ಅಂಗ್ಲೋ–ವೇದಿಕ್–ಕಾಲೇಜು | * ಶುದ್ಧಿ ಚಳವಳಿ– ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಾದವರನ್ನು ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವುದು |
| ಪ್ರಾರ್ಥನಾ ಸಮಾಜ | ಆತ್ಮಾರಾಮ್ ಪಾಂಡುರಂಗ | * ಸ್ತ್ರೀ ಶಿಕ್ಷಣ ಮತ್ತು ವಿಧವಾ ಪುನರ್ ವಿವಾಹಕ್ಕೆ ಪ್ರೋತ್ಸಾಹ * ಬಾಲ್ಯವಿವಾಹದ ವಿರುದ್ಧ ಹೋರಾಟ | – | – |
| ಸತ್ಯಶೋಧಕ ಸಮಾಜ | ಜ್ಯೋತಿ ಬಾ ಫುಲೆ | * ಸ್ತ್ರೀಯರಿಗೆ ಸಮಾನತೆಯ ಹಕ್ಕು ದೊರಕಿಸುವುದು<br>* ಹೆಣ್ಣು ಮಕ್ಕಳಿಗೆ ವಸತಿನಿಲಯ ಸ್ಥಾಪನೆ<br>* ಸಮಾನತೆಯ ಆಶಯದ ಮೇಲೆ ಹೊಸ ಸಮಾಜ ನಿರ್ಮಾಣ | ಗ್ರಂಥ– 'ಗುಲಾಮಗಿರಿ' ಶೇಟ್ಜಾರ್ಯಜಾ ಅಸೂದ್ | * ಫುಲೆಯವರ ಆಶಯಗಳಿಂದ ಪ್ರೇರಣೆ ಪಡೆದವರು –ಅಂಬೇಡ್ಕರ್ |
| ಆಲಿಘರ್ ಚಳವಳಿ | ಸಯ್ಯದ್ ಅಹ್ಮದ್ ಖಾನ್ | * ಸಂಪ್ರದಾಯ, ಅಜ್ಞಾನ ಮತ್ತು ಮೌಢ್ಯದ ವಿರುದ್ಧ ಹೋರಾಟ * ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ<br>* ಹಿಂದೂ ಮತ್ತು ಮುಸ್ಲಿಂ ಐಕ್ಯತೆ<br>* ಪರದಾ ಮತ್ತು ಬಹುಪತ್ನಿತ್ವಕ್ಕೆ ವಿರೋಧ | * ಶಿಕ್ಷಣ ಸಂಸ್ಥೆ– ಅಂಗ್ಲೋ–ಓರಿಯಂಟಲ್ ಕಾಲೇಜು | – |
| ರಾಮಕೃಷ್ಣ ಮಿಷನ್ | ಸ್ವಾಮಿ ವಿವೇಕಾನಂದ | * ರಾಮಕೃಷ್ಣರ ಚಿಂತನೆ ಮತ್ತು ಆಶಯಗಳನ್ನು ಜನರಿಗೆ ತಲಿಪಿಸುವ ಉದ್ದೇಶ<br>* ಜನರನ್ನು ವಿದ್ಯಾವಂತರನ್ನಾಗಿ ಮಾಡುವುದು<br>* ಪಾಶ್ಚಿಮಾತ್ಯರ ಅಂಧಾನುಕರಣೆಯನ್ನು ಬಿಡಬೇಕು.<br>* ಧರ್ಮದ ಹೆಸರಲ್ಲಿ ನಡೆಸುತ್ತಿದ್ದ ಶೋಷಣೆಗೆ ವಿರೋಧ<br>* ಶೋಷಣೆ ಮುಕ್ತ ಸಮಾಜ ನಿರ್ಮಾಣ | | * 1893ರ ಚಿಕಾಗೋ ವಿಶ್ವ ಧಾರ್ಮಿಕ ಸಮ್ಮೇಳನದಲ್ಲಿ ಭಾರತದ ಸಾಂಸ್ಕೃತಿಕ ಹಿರಿಮೆಯ ಪರಿಚಯ.<br>* ಪ್ಯಾರಿಸನಲ್ಲಿ ನಡೆದ **'ಕಾಂಗ್ರೆಸ್ ಆಫ್ ರಿಲಿಜಿಯನ್ಸ್'**ನಲ್ಲಿ ಭಾಷಣ |
| ಥಿಯೋಸಾಫಿಕಲ್ ಸೊಸೈಟಿ | ಮೇಡಂ ಬ್ಲವಾಟ್ ಸ್ಕೆ ಮತ್ತು ಕರ್ನಲ್ ಅಲ್ಕಾಟ್ | * ಭಾರತೀಯ ಸಂಸ್ಕೃತಿ ಶ್ರೇಷ್ಠವಾದದ್ದು<br>* ಹಿಂದೂ ಮತ್ತು ಬೌದ್ಧಧರ್ಮಗಳ ಅಧ್ಯಯನ<br>* ಅನಿಬೆಸೆಂಟ್ 'ಭಗದ್ಗೀತೆ' ಇಂಗ್ಲೀಷಿಗೆ ಅನುವಾದಿಸಿ 'ಶ್ವೇತ ಸರಸ್ವತಿ' ಎನಿಸಿಕೊಂಡರು *ಸರ್ವರಿಗೂ ಶಿಕ್ಷಣ | * ಘೋಷಣೆ–ಮನುಷ್ಯನಿಗೆ ವಿಶ್ವಭ್ರಾತೃತ್ವ ಪ್ರಜ್ಞೆ ಮುಖ್ಯ.<br>* ಸೆಂಟ್ರಲ್ ಹಿಂದೂ ಕಾಲೇಜ್<br>* ಪತ್ರಿಕೆ– ನ್ಯೂ ಇಂಡಿಯಾ & ಕಾಮನ್ ವ್ಹೀಲ್ | * ಅನಿಬೆಸೆಂಟ್ ಭಾರತ ರಾಷ್ಟ್ರೀಯ ಮಹಿಳಾ ಕಾಂಗ್ರೆಸಿನ ಮೊದಲ ಮಹಿಳಾ ಅಧ್ಯಕ್ಷರಾಗಿದ್ದರು |
| ಹೋಂರೂಲ್ | ಅನಿಬೆಸೆಂಟ್ | | | |

| ಸಮಾಜ/ ಚಳವಳಿ | ಸಂಸ್ಥಾಪಕರು/ ಆರಂಭಿಸಿದವರು | ಉದ್ದೇಶ/ಕೊಡುಗೆ/ಸುಧಾರಣೆ | ಸಂಸ್ಥಾಪಕರು ಆರಂಭಿಸಿದ/ ರಚಿಸಿದ ಪತ್ರಿಕೆ/ ಶಿಕ್ಷಣ ಸಂಸ್ಥೆ/ ಗ್ರಂಥ/ಘೋಷಣೆ | ವಿಶೇಷತೆಗಳು |
|---|---|---|---|---|
| ಧರ್ಮ ಪರಿಪಾಲನಾ ಯೋಗಂ | ಶ್ರೀ ನಾರಾಯಣ ಗುರು | * ಹಿಂದುಳಿದ ಮತ್ತು ಶೋಷಿತ ಸಮುದಾಯದ ಸಬಲೀಕರಣ * ಒಂದೇ ಧರ್ಮ ಮತ್ತು ಒಬ್ಬನೇ ದೇವರು * ವೈಕಂ ಸತ್ಯಾಗ್ರಹ–ದೇವಾಲಯ ಪ್ರವೇಶ | | ವೈಕಂ ಸತ್ಯಾಗ್ರಹ–ದೇವಾಲಯ ಪ್ರವೇಶ ಚಳವಳಿಯಲ್ಲಿ ಗಾಂಧೀಜಿ ಹಾಗೂ ಪೆರಿಯಾರ್ ಭಾಗವಹಿಸಿದ್ದರು |
| ಆತ್ಮಗೌರವ ಹಾಗೂ ಪೆರಿಯಾರ್ | ಇ.ವಿ. ರಾಮಸ್ವಾಮಿ ನಾಯ್ಕರ್ | * ಜನಾಂಗೀಯ ಶ್ರೇಷ್ಠತೆ ತಿರಸ್ಕಾರ * ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ವಿರೋಧ * ತಮಿಳು ದ್ರಾವಿಡರ ಭಾಷೆ * ಜಾತಿ, ಲಿಂಗ ತಾರತಮ್ಯಕ್ಕೆ ವಿರೋಧ * ಸರ್ವಧರ್ಮಸಹಿಷ್ಣುತೆಯ ಸಮಾಜ ನಿರ್ಮಾಣ * ಸಮಾನತೆಯ ಆಶಯ | * ಪತ್ರಿಕೆ– ಜಸ್ಟೀಸ್ | * ಬ್ರಾಹ್ಮಣೇತರ ಚಳವಳಿಯನ್ನು ಪೆರಿಯಾರರು ಸಾಂಸ್ಕೃತಿಕ ಚಳವಳಿಯಾಗಿ ಪರಿವರ್ತನೆ * ಜಸ್ಟೀಸ್ ಪಕ್ಷದ ಅಧ್ಯಕ್ಷರು ಮತ್ತು ದ್ರಾವಿಡ ಕಳಗಂ ಸಂಘಟನೆ ಆರಂಭ |
| ಯುವ ಬೆಂಗಾಲಿ | ಹೆನ್ರಿ ವಿವಿಯನ್ ಡಿರೋಜಿಯೋ | * ಯುರೋಪಿನ ಪುನರುಜ್ಜೀವನ ಚಳವಳಿಯ ಪ್ರಭಾವ * ಹೊಸ ಶಿಕ್ಷಣ ಕ್ರಮ ಜಾರಿ * ವೈಜ್ಞಾನಿಕ ದೃಷ್ಟಿಕೋನ ಬೆಳವಣಿಗೆ * ಮಹಿಳಾ ಹಕ್ಕುಗಳ ಪ್ರತಿಪಾದನೆ | | 'ಅಕಾಡೆಮಿಕ್ ಅಸೋಸಿಯೇಷನ್' ಚರ್ಚಾ ವೇದಿಕೆ ಆರಂಭ |

***ವಿ.ಸೂಚನೆ : ಈ ಮೇಲಿನ ಪಟ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಅಭ್ಯಾಸ ಪ್ರಶ್ನೆಗಳನ್ನು ಶಿಕ್ಷಕರೇ ರಚಿಸಿ ಅಭ್ಯಾಸ ಮಾಡಿಸುವುದು.***

## ಅಧ್ಯಾಯ – 6. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**I.ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ಯಾರು? **– ಮಂಗಲ್ ಪಾಂಡೆ**
2. 1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು ಏನೆಂದು ಕರೆದಿದ್ದಾರೆ? **– ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ**
3. 1857ರ ದಂಗೆಯ ಸಮಯದಲ್ಲಿ ಕಾನ್ಪುರದಲ್ಲಿ ದಂಗೆಯ ನೇತೃತ್ವವನ್ನು ವಹಿಸಿದವರು ಯಾರು? **– ನಾನಾ ಸಾಹೇಬ**
4. ನಾನಾ ಸಾಹೇಬನ ಸಹಾಯಕನ ಹೆಸರೇನು? **– ತಾತ್ಯಾಟೋಪೆ**

**II.ಈ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**1. 1857ರ ದಂಗೆಯ ರಾಜಕೀಯ ಕಾರಣಗಳು ಯಾವುವು? ಅಥವಾ**
**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿ.**

1. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ದೇಶಿಯ ಸಂಸ್ಥಾನಗಳ ವಶ. 2. ಸತಾರಾ ,ಝಾನ್ಸಿ, ಉದಯಪುರ, ಜೈಪುರ ಬ್ರಿಟಿಷರ ವಶವಾದವು.
3. ತಾಂಜಾವೂರು & ಕಾರ್ನಾಟಿಕ್ ರಾಜರ ಪದವಿಗಳ ರದ್ದು. 4. ಮೊಘಲ್ ಚಕ್ರವರ್ತಿ & ಔದ್‌ನ ನವಾಬರ ಪದಚ್ಯುತಿ.
5. ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು 6. 1857ರ ದಂಗೆಗೆ ಪ್ರೇರಣೆ

**2. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳಾವುವು?**

1. ಕಾನೂನಿನ ವಿಚಾರದಲ್ಲಿ ಇಂಗ್ಲಿಷರು & ಭಾರತೀಯರ ಮಧ್ಯೆ ತಾರತಮ್ಯ.
2. ಬ್ರಿಟಿಷ್ ನ್ಯಾಯಾದೀಶರು ಇಂಗ್ಲಿಷರ ಪರವಾಗಿ ನ್ಯಾಯ ನೀಡುತ್ತಿದ್ದರು. 3. ಆಂಗ್ಲ ಭಾಷೆ ನ್ಯಾಯಾಲಯದ ಭಾಷೆಯಾಯಿತು.
4. ಹೊಸ ಕಾನೂನಿನ ಆಶಯಗಳು ಜನರಿಗೆ ಅರ್ಥವಾಗಲಿಲ್ಲ. 5. ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳ ಜಾರಿ.

**3. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?**

1. ಸೈನಿಕರಿಗೆ ಹೊಸ ತರಹದ **ಎನ್‌ಫೀಲ್ಡ್** ಬಂದೂಕು ನೀಡಿದರು.
2. ತೋಟಾಗಳಿಗೆ ದನದ ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆ ಎಂಬ ವದಂತಿ.
3. ಹಿಂದೂ & ಮುಸ್ಲಿಂ ಸೈನಿಕರಿಗೆ ತೀವ್ರ ಕೋಪ.
4. ಬ್ಯಾರಕ್‌ಪುರದ ಸೈನಿಕರಿಗೆ ತುಪಾಕಿಗಳನ್ನು ಬಳಸುವಂತೆ ಆದೇಶಿಸಿದಾಗ ಸೈನಿಕರ ದಂಗೆ.

**4. 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?**

1. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು.
2. ರಾಯಲ್ ಎನ್‌ಫೀಲ್ಡ್ ತುಪಾಕಿಗಳಿಗೆ ಹಂದಿ & ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ.

**III. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.**

1. ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದ ಭಾರತದ ದೇಶೀಯ ಕೈಗಾರಿಕೆಗಳ ಅವನತಿ.
2. ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು 3. ಗೃಹ ಕೈಗಾರಿಕೆಗಳ ನಾಶ.
4. ಭಾರತದ ವಸ್ತುಗಳಿಗೆ ದುಬಾರಿ ಸುಂಕ ಹೇರಿದರು. 5. ಜಮಿನ್ದಾರಿ ಪದ್ಧತಿಯಿಂದ ರೈತರ ಶೋಷಣೆ.
6. ಇನಾಂ ಭೂಮಿ ವಾಪಾಸ್ ಪಡೆಯಲಾಯಿತು. 7. ಕೃಷಿಕರು ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು.

**2. ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.**

1. ದಂಗೆ ದೇಶದಾದ್ಯಂತ ವ್ಯಾಪಿಸಿರಲಿಲ್ಲ 2. ಸೂಕ್ತ ಸೇನಾ ನಾಯಕತ್ವ ಕೊರತೆ. 3. ಸಿಪಾಯಿಗಳಿಗೆ ನಿಶ್ಚಿತ ಗುರಿ ಇರಲಿಲ್ಲ.
4. ದಂಗೆಗೆ ಸೂಕ್ತ ಮಾರ್ಗದರ್ಶನ ಮತ್ತು ಸಂಘಟನೆ ಕೊರತೆ. 5. ಕೆಲವು ದೇಶಿಯ ರಾಜರುಗಳಿಂದ ಬ್ರಿಟಿಷರಿಗೆ ಬೆಂಬಲ
6. ಇಂಗ್ಲಿಷರಲ್ಲಿದ್ದ ಒಗ್ಗಟ್ಟು ಭಾರತೀಯ ಸಿಪಾಯಿಗಳಲ್ಲಿರಲಿಲ್ಲ. 7. ಸಿಪಾಯಿಗಳಿಗೆ ದೇಶದ ಹಿತಕ್ಕಿಂತ ಸ್ವಹಿತಾಸಕ್ತಿ ಹೆಚ್ಚಾಗಿತ್ತು.
8. ಸಿಪಾಯಿಗಳು ಅನೇಕ ಕಡೆ ಲೂಟಿ, ದರೋಡೆ ಮಾಡಿ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡರು.

**3. 1857ರ ದಂಗೆಯ ಪರಿಣಾಮಗಳು ಯಾವುವು?**

1. ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯಗೊಂಡಿತು. 2. ಭಾರತ ಬ್ರಿಟನ್ ರಾಣಿಯ ನೇರ ಆಳ್ವಿಕೆಗೆ ಒಳಪಟ್ಟಿತು.
3. ಭಾರತದ ವ್ಯವಹಾರ ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿ ಅಧೀನಕ್ಕೆ.
4. ಭಾರತೀಯರ ಪ್ರೀತಿ, ವಿಶ್ವಾಸ ಗಳಿಸದಿದ್ದರೆ ಶಾಂತಿಯಿಂದ ಆಳುವುದು ಕಷ್ಟ ಎಂದು ಬ್ರಿಟಿಷರು ತಿಳಿದರು.
5. ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿ ಜಾರಿ. 6. ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿ.

**4.1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?**

1. ಕಂಪನಿಯು ದೇಶಿಯರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳ ಅಂಗೀಕಾರ.
2. ಪ್ರಾದೇಶಿಕ ವಿಸ್ತರಣೆ ಕೈಬಿಡುವುದು. 3. ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು
4. ಕಾನೂನಿನ ಮುಂದೆ ಸಮಾನತೆ 5. ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಬ್ರಿಟಿಷ್ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ.

**5. 1857ರ ದಂಗೆಯ ಹರಡುವಿಕೆಯನ್ನು ವಿವರಿಸಿ.**

1. ಮೀರತ್‌ನಲ್ಲಿ ಭಾರತೀಯ ಸಿಪಾಯಿಗಳಿಗೆ ತುಪಾಕಿಗಳನ್ನು ಬಳಸಲು ಆದೇಶ. ಸಿಪಾಯಿಗಳಿಂದ ನಿರಾಕರಣೆ.
2. ಸೆರಮನೆಯಲ್ಲಿ ಬಂಧಿತರಾಗಿದ್ದ ಭಾರತೀಯ ಸಿಪಾಯಿಗಳ ಬಿಡುಗಡೆ.
3. ಎರಡನೇ ಬಹದ್ದೂರ ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಣೆ.
4. ಎಲ್ಲಾ ಕಡೆಗಳಿಂದ ಸಿಪಾಯಿಗಳು ದೆಹಲಿಗೆ ಬಂದರು. 5. ಪ್ರತಿಭಟನೆ ದೆಹಲಿ, ಕಾನ್ಪುರ ಮತ್ತು ಝಾನ್ಸಿಗಳಲ್ಲಿ ಹರಡಿತು
6. ಕಾನ್ಪುರದಲ್ಲಿ ನಾನಾಸಾಹೇಬ, ತಾತ್ಯಾ ಟೋಪೆ ಮತ್ತು ಝಾನ್ಸಿಯಲ್ಲಿ ರಾಣಿ ಲಕ್ಷ್ಮಿಬಾಯಿ ದಂಗೆಯೆದ್ದರು.

## ಅಧ್ಯಾಯ – 7. ಸ್ವಾತಂತ್ರ್ಯ ಹೋರಾಟ

**I. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ಯಾವ ವರ್ಷ ಸ್ಥಾಪಿಸಲಾಯಿತು? **– 1885**
2. **ಸಂಪತ್ತಿನ ಸೋರುವಿಕೆ ಸಿದ್ಧಾಂತವನ್ನು** ತಿಳಿಸಿದವರು ಯಾರು? **– ದಾದಾಬಾಯಿ ನವರೋಜಿ**
3. ಭಾರತದಲ್ಲಿದ್ದ ರಹಸ್ಯ ಕ್ರಾಂತಿಕಾರಿ ಸಂಘಟನೆಗಳಾವುವು? **– ಅನುಶೀಲನ ಸಮಿತಿ ಮತ್ತು ಅಭಿನವ ಭಾರತ**
4. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧ್ಯಕ್ಷರು ಯಾರು? **–W.C. ಬ್ಯಾನರ್ಜಿ**
5. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು ಯಾರು? **–ಎ.ಓ.ಹ್ಯೂಂ**
6. ಬಂಗಾಳದ ವಿಭಜನೆಯನ್ನು ಮಾಡಿದವರು ಯಾರು? **–ಲಾರ್ಡ್ ಕರ್ಜನ್**
7. **ಬಂಗಾಳದ ವಿಭಜನಗೆ ಮುಖ್ಯ ಕಾರಣವೇನು?**
   – ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಬಂಗಾಳವನ್ನುಆಡಳಿತದ ನೆಪವೊಡ್ಡಿ ವಿಭಜನೆ
8. **ಕ್ರಾಂತಿಕಾರಿ ನಾಯಕರುಗಳನ್ನು ಹೆಸರಿಸಿ.**
   – ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್, ರಾಜಗುರು, ಭಗತ್ ಸಿಂಗ್, ಚಂದ್ರಶೇಖರ ಅಜಾದ್. ಖುದಿರಾಮ್ ಬೋಸ್,

**II.ಈ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರ ಬರೆಯಿರಿ**

**1. ಬ್ರಿಟಿಷ್ ಸರ್ಕಾರದ ಮುಂದಿಟ್ಟ ಮಂದಗಾಮಿಗಳ ಬೇಡಿಕೆಗಳಾವುವು?**

1. ದೇಶದ ಕೈಗಾರಿಕೆಗಳ ಅಭಿವೃದ್ಧಿ 2. ಸೈನಿಕ ವೆಚ್ಚ ಕಡಿಮೆ ಮಾಡುವುದು
3. ಉತ್ತಮ ಶಿಕ್ಷಣ ಕೊಡುವುದು 4. ಬಡತನದ ಬಗ್ಗೆ ಅಧ್ಯಯನ
5. ಪರಿಹಾರ ಕಾರ್ಯಕ್ರಮಗಳನ್ನು ಬ್ರಿಟಿಷ್‌ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸುವುದು

**2. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.**

1. ರಾಷ್ಟ್ರೀಯ ಕಾಂಗ್ರಸ್‌ನ ಆರಂಭದ 20 ವರ್ಷ ಮಂದಗಾಮಿ ಯುಗ
2. ನಾಯಕರು – ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ
3. ಬ್ರಿಟಿಷರ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ. 4. ಸಂವಿಧಾನಿಕ ಚೌಕಟ್ಟಿನಲ್ಲಿ ಸಮಸ್ಯೆಯ ಪರಿಹಾರಕ್ಕೆ ಯತ್ನ.
5. ಸೈನಿಕ ವೆಚ್ಚ ಕಡಿಮೆ ಮಾಡುವುದು. 6. ಭಾರತದ ಕೈಗಾರಿಕೆಗಳ ಅಭಿವೃದ್ಧಿ.
7. ಬಡತನದ ಬಗ್ಗೆ ಅಧ್ಯಯನ ನಡೆಸಲು ಒತ್ತಾಯ 8. ಭಾರತೀಯರಿಗೆ ಉತ್ತಮ ಶಿಕ್ಷಣ ಕೊಡುವುದು.

**3. ಸ್ವಾತಂತ್ರ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.**

1. **ತಿಲಕರು ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ** ಎಂದು ಘೋಷಿಸಿದರು.
2. ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರ ಸಂಘಟನೆ. 3. **ಕೇಸರಿ** ಮತ್ತು **ಮರಾಠ** ಪತ್ರಿಕೆಗಳ ಪ್ರಾರಂಭ.
4. **ಗಣೇಶ, ಶಿವಾಜಿ, ದುರ್ಗಾ** ಉತ್ಸವಗಳ ಮೂಲಕ ಜನರನ್ನು ಹೋರಾಟಕ್ಕೆ ಪ್ರೇರೇಪಿಸಿದರು.
5. ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು.
6. ಕ್ರಾಂತಿಕಾರಕ ಬರವಣಿಗೆ ಜನರನ್ನು ಕೆರಳಿಸಿದವು. 7. ಬ್ರಿಟಿಷರಿಂದ ತಿಲಕರ ಬಂಧನ. 8. **ಗೀತಾರಹಸ್ಯ** ಗ್ರಂಥ ರಚನೆ.

**4. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳಗಳ ಪಾತ್ರವನ್ನು ವಿವರಿಸಿ.**

1. ಮಂದಗಾಮಿಗಳ ಮೃದುಧೋರಣೆಯನ್ನು ಟೀಕಿಸುತ್ತ ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸಿದ ಬಣ.
2. ನಾಯಕರು – ಲಾಲ ಲಜಪತ್ ರಾಯ್, ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಅರಬಿಂದೋ ಘೋಷ್
3. ಬಂಗಾಳದ ವಿಭಜನೆಗೆ ವಿರೋಧ. 4. ಸ್ವದೇಶಿ ಚಳುವಳಿ ಪ್ರಾರಂಭಿಸಿದರು.
5. **ತಿಲಕರು ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ** ಎಂದು ಘೋಷಿಸಿದರು.
6. ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟನೆ. 7. **ಕೇಸರಿ** ಮತ್ತು **ಮರಾಠ** ಪತ್ರಿಕೆಗಳ ಪ್ರಾರಂಭ.
8. **ಗಣೇಶ, ಶಿವಾಜಿ, ದುರ್ಗಾ** ಉತ್ಸವಗಳ ಮೂಲಕ ಜನರನ್ನು ಹೋರಾಟಕ್ಕೆ ಪ್ರೇರೇಪಿಸಿದರು.

**5. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿಗಳ ಹೋರಾಟದ ವಿಧಾನವನ್ನು ವಿವರಿಸಿ.**

1. ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಓಡಿಸಬಹುದು ಎಂಬ ನಂಬಿಕೆ.
2. ರಹಸ್ಯಸಂಘಗಳ ಮೂಲಕ ಭಾರತ ಮತ್ತು ವಿದೇಶಗಳಲ್ಲಿ ಸಂಘಟನೆ. 3. ಹಣಕಾಸು, ಶಸ್ತ್ರಾಸ್ತ್ರಗಳ ಸಂಗ್ರಹ.
4.ಇಂಗ್ಲೆಂಡಿನಲಿ **ಲೋಟಸ್ & ಡಾಗರ್** ಮತ್ತು ಅಮೇರಿಕದಲ್ಲಿ **ಗದ** ಗುಪ್ತ ಸಂಘಟನೆ.
5. ಭಾರತದಲ್ಲಿ **ಅನುಶೀಲನ ಸಮಿತಿ** ಮತ್ತು **ಅಭಿನವ ಭಾರತ** ರಹಸ್ಯ ಸಂಘಟನೆ.
6. ಬಾಂಬು ಮತ್ತು ಬಂದೂಕುಗಳ ಪ್ರಯೋಗ. 7. ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಬಂಧನ.

**6. ಬಂಗಾಳ ವಿಭಜನೆಯನ್ನು ಹಿಂಪಡೆಯಲು ಕಾರಣಗಳೇನು?**

1. ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧ. 2. ಸ್ವದೇಶಿ ಚಳವಳಿ ಆರಂಭ.
3. ವಿದೇಶಿ ವಸ್ತುಗಳು ಮತ್ತು ಅದನ್ನು ಪ್ರೋತ್ಸಾಹಿಸುವ ಸಂಸ್ಥೆಗಳ ಬಹಿಷ್ಕಾರ.
4. ಭಾರತೀಯರ ತೀವ್ರ ಪ್ರತಿಭಟನೆಯಿಂದ ವಿಭಜನೆ ರದ್ದು. (1911)

**7. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ.**

– ದಾದಾಬಾಯಿ ನವರೋಜಿಯವರಿಂದಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ ಎಂಬುದನ್ನು ಅಂಕಿ–ಅಂಶಗಳೊಂದಿಗೆ ವಿವರಣೆ.

**ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದು ಹೋಗಲು ಕಾರಣಗಳು :**

1. ಆಮದು ಹೆಚ್ಚಿಸಿ ರಪ್ತು ಕಡಿಮೆ ಮಾಡಿದ್ದರಿಂದ 2. ಬ್ರಿಟಿಷ್ ಅಧಿಕಾರಿಗಳಿಗೆ ನೀಡುತ್ತಿದ್ದ ವೇತನ,
3. ನಿವೃತ್ತಿ ವೇತನ 4. ಆಡಳಿತಾತ್ಮಕ ವೆಚ್ಚವನ್ನು ಭಾರತವೇ ಭರಿಸಬೇಕಾಗಿತ್ತು.

## ಅಧ್ಯಾಯ – 8. ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

**I. ಈ ಪ್ರಶ್ನೆಗಳಿಗೆ 8 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1. ಅಸಹಕಾರ ಚಳವಳಿಯ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ.**

1. ಶಾಲಾ ಕಾಲೇಜು ಮತ್ತು ನ್ಯಾಯಾಲಯ ಬಹಿಷ್ಕಾರ 2. ಪ್ರಾಂತೀಯ ಶಾಸನ ಸಭೆಗಳ ಚುನಾವಣೆ ಬಹಿಷ್ಕಾರ
3. ಸರ್ಕಾರಿ ಕಾರ್ಯಕ್ರಮಗಳ ಬಹಿಷ್ಕಾರ 4. ವಿದೇಶಿ ವಸ್ತುಗಳ ಬಹಿಷ್ಕಾರ
5. ಬ್ರಿಟಿಷರು ನೀಡಿರುವ ಗೌರವ ಪದವಿಗಳನ್ನು ಹಿಂತಿರುಗಿಸುವುದು.
6. ಸ್ಥಳೀಯ ಸಭೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜೀನಾಮೆ ನೀಡುವುದು.
7. ಕೈಮಗ್ಗದ ನೇಕಾರಿಕೆ ಉತ್ತೇಜಿಸಿ ಖಾದಿ ತಯಾರಿಕೆ. 8. ರಾಷ್ಟ್ರೀಯ ಶಾಲೆಗಳ ಪ್ರಾರಂಭ 9. ಹಿಂದೂ ಮುಸ್ಲಿಂ ಐಕ್ಯತೆ.

**2. ಅಸಹಕಾರ ಚಳವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳು ಯಾವುವು?**

1. ಸಿ.ಆರ್. ದಾಸ್, ಮೋತಿಲಾಲ್ ನೆಹರೂ ಮೊದಲಾದವರು ವಕೀಲ ವೃತ್ತಿಯನ್ನು ಬಿಟ್ಟರು.
2. ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ತೊರೆದರು. 3. ಕಾಂಗ್ರೆಸ್‌ನಿಂದ ಪ್ರಾಂತ್ಯಗಳಿಗೆ ನಡೆದ ಚುನಾವಣೆ ಬಹಿಷ್ಕಾರ.
4. ರವಿಂದ್ರನಾಥ ಠಾಗೂರರಿಂದ ನೈಟ್ ವುಡ್ ಪದವಿ ವಾಪಸ್ಸು. 5. ಕಾಶಿ, ಗುಜರಾತ್, ಬಿಹಾರದಲ್ಲಿ ವಿದ್ಯಾಪೀಠ ಸ್ಥಾಪನೆ.
6. ಮಹಿಳೆಯರು, ಜನಸಾಮಾನ್ಯರಿಂದ ಕಾಂಗ್ರೆಸ್ ಹೋರಾಟಕ್ಕೆ ದೇಣಿಗೆ.
7. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು 8. **ಪ್ರಿನ್ಸ್ ಆಫ್ ವೇಲ್ಸ್** ರಾಜಕುಮಾರನ ಕಾರ್ಯಕ್ರಮಕ್ಕೆ ವಿರೋಧ

**3. ಅಸಹಕಾರ ಚಳವಳಿಯ ಪರಿಣಾಮಗಳನ್ನು ವಿವರಿಸಿ.**

1. ರಾಷ್ಟ್ರೀಯ ಹೋರಾಟ ಜನರ ಹೋರಾಟವಾಗಿ ರೂಪಾಂತರವಾಯಿತು.
2. ಕಾಂಗ್ರೆಸ್ ಪ್ರೇರಿತ ಚಳವಳಿಯು ಕ್ರಾಂತಿಕಾರಕ ಆಯಾಮಗಳನ್ನು ಪಡೆಯಿತು.
3 .ಹಿಂದೂ – ಮುಸ್ಲಿಂ ಭ್ರಾತೃತ್ವವನ್ನು ಸೃಷ್ಟಿಸಿತು. 4. ರಾಷ್ಟ್ರೀಯ ಹೋರಾಟ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿತು.
5. ಅಸ್ಪೃಶ್ಯತೆ ನಿವಾರಣೆ, 6. ಮಹಿಳೆಯರಿಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ.

**4. ಭಾರತದಲ್ಲಿ ಗಾಂಧೀಜಿ ಅವರ ಆರಂಭದ ಹೋರಾಟಗಳನ್ನು ವಿವರಿಸಿ. /ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಅವರ ಪಾತ್ರ ತಿಳಿಸಿ.**

1. ಅಹಮದಾಬಾದ್‌ನಲ್ಲಿ ಸಬರಮತಿ ಆಶ್ರಮ ಸ್ಥಾಪನೆ. 2. ದಂಡಿ ಉಪ್ಪಿನ ಸತ್ಯಾಗ್ರಹ ನಡೆಸಿದರು.
3. ರೈತರ, ದಲಿತರ, ಬುಡಕಟ್ಟು ಜನರ, ಕಾರ್ಮಿಕರ, ಬಡಜನರ ಸಮಸ್ಯೆಗಳನ್ನು ಆಲಿಸಿದರು.
4. ಚಂಪಾರಣ್‌ನಲ್ಲಿ ನೀಲಿ ಬೆಳೆಗಾರರ ಪರ **ಚಳವಳಿ**. 5. ಅಹಮದಾಬಾದ್‌ನ ಹತ್ತಿ ಗಿರಣಿಯ ಕಾರ್ಮಿಕರ ಪರಚಳವಳಿ
6. ಗುಜರಾತ್‌ನ ಖೇಡಾದಲ್ಲಿ ರೈತರ ಪರ ಹೋರಾಟ 7. ಖಿಲಾಫತ್ ಚಳುವಳಿಗೆ ಪ್ರೋತ್ಸಾಹ.
8. ಹೋರಾಟಗಳಲ್ಲಿ ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹದ ಮಾರ್ಗ. 9. ಅಸಹಕಾರ ಚಳುವಳಿ ಪ್ರಾರಂಭ
10. 2ನೇ ದುಂಡುಮೇಜಿನ ಪರಿಷತ್‌ನಲ್ಲಿ ಭಾಗವಹಿಸಿದರು. 11. **ಮಾಡು ಇಲ್ಲವೇ ಮಡಿ** ಘೋಷಣೆ.

**5. ಕ್ವಿಟ್ ಇಂಡಿಯಾ ಚಳುವಳಿಯು ನಡೆದ ರೀತಿಯನ್ನು ವಿವರಿಸಿರಿ.** (1942 ಆಗಸ್ಟ್ 8 ರಂದು)

1. ಕ್ರಿಪ್ಸ್ ಆಯೋಗದ ಸಲಹೆ ವಿರೋಧಿಸಿ **ಬ್ರಿಟಿಷರೆ ಭಾರತ ಬಿಟ್ಟು ತೊಲಗಿ** ಚಳುವಳಿಗೆ ಕರೆ
2. ರಾಷ್ಟ್ರದ ಜನತೆಗೆ ಗಾಂಧೀಜಿಯವರು **ಮಾಡು ಇಲ್ಲವೆ ಮಡಿ** ಕರೆ.
3. ಬ್ರಿಟಿಷರಿಂದ ಗಾಂಧೀಜಿ, ನೆಹರು, ವಲ್ಲಭಭಾಯಿ ಪಟೇಲ್‌ರ ಬಂಧನ 4. ಜನತೆಗೆ ಹೋರಾಟದಲ್ಲಿ ಭಾಗವಹಿಸಲು ಕರೆ
5. ಕಾಂಗ್ರೆಸ್ ಕಚೇರಿಗಳಿಗೆ ಪೋಲಿಸರಿಂದ ಬೀಗ ಮುದ್ರೆ. 6. ಕಾರ್ಮಿಕರಿಗೆ ತರಬೇತಿ
7. ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಚಳುವಳಿ
8. **ದಿ ಫ್ರೀಡಂ ಸ್ಟ್ರಗಲ್ ಫ್ರಾಂಟ್** ದಾಖಲೆ ಮೂಲಕ ಕಾರ್ಯತಂತ್ರ ಅನುಷ್ಠಾನ

**6. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರ & ಕಾರ್ಮಿಕರ ಪ್ರತಿಭಟನೆಗಳ ಪಾತ್ರವನ್ನು ವಿವರಿಸಿ.**

1. ರೈತರು ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಾರ್ಕ್ಸ್‌ವಾದದಿಂದ ಪ್ರಭಾವ. 2. ಕಿಸಾನ್ ಸಭಾದಡಿಯಲ್ಲಿ ರೈತ ಸಂಘಟನೆ.
3. ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ದಂಗೆ.
4. ಚಂಪಾರಣ್ಯ, ಖೇಡಾ, ತೇಭಾಗ, ಮಲಬಾರ್‌ನಲ್ಲಿ ರೈತರ ದಂಗೆ.
5. ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ
6. ತೆಲಂಗಾಣದ ರೈತರಿಂದ ಜಮೀನ್ದಾರರು ಹಾಗೂ ನಿಜಾಮನ ರಜಾಕಾರರ ವಿರುದ್ಧ ಪ್ರತಿಭಟನೆ.
7. ಮಹಾರಾಷ್ಟ್ರದಲ್ಲಿ ರೈತರಿಂದ ಕಡಿಮೆ ಕೂಲಿ ವಿರುದ್ಧ ಚಳುವಳಿ.

**ಕಾರ್ಮಿಕರ ಪ್ರತಿಭಟನೆಗಳ ಪಾತ್ರ:**

1. ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಾಗಿ ಸಂಘಟನೆ. 2. ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಚಳುವಳಿಗೆ ಬೆಂಬಲ
3. ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್ ಬೆಂಬಲ 4. ಬಾಂಬೆಯಲ್ಲಿ ಬಟ್ಟೆ ಗಿರಣಿ ಕಾರ್ಮಿಕರಿಂದ ರಾಷ್ಟ್ರೀಯ ಜಾಗೃತಿ

**7. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯವನ್ನು ವಿವರಿಸಿ.**

1. ಬ್ರಿಟಿಷ್‌ರ ಕಂದಾಯ ಮತ್ತು ಅರಣ್ಯ ನೀತಿಗಳು ದಂಗೆಗೆ ಪ್ರೇರಣೆ.
2. ಸಂತಾಲರು, ಮುಂಡರು ಹಾಗೂ ಹಲಗಲಿಯ ಬೇಡರ ಬಂಡಾಯ.
3. ಜಮಿನ್ದಾರಿ ಪದ್ದತಿಯಿಂದ ಬಂಗಾಳ ಮತ್ತು ಒರಿಸ್ಸಾಗಳ ಸಂತಾಲ ಬುಡಕಟ್ಟು ಜನ ನಿರ್ಗತಿಕರಾದರು.
4. ಬುಡಕಟ್ಟು ಜನರ ಜಮೀನು ಜಮಿನ್ದಾರರ ಕೈಸೇರಿತು. 5. ಸಂತಾಲರಿಂದ ಜಮೀನ್ದಾರರ & ಲೇವಾದೇವಿಗಾರರ ಲೂಟಿ
6. ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ದಂಗೆ ತೀವ್ರತೆ. 7. ಬುಡಕಟ್ಟು ಜನರಿಂದ ಶತ್ರುಗಳ ಹತ್ಯೆ,
8. ಜಮೀನ್ದಾರರು, ಲೇವಾದೇವಿಗಾರರು ಪಲಾಯನ 9. ಬ್ರಿಟಿಷರು ಸೈನ್ಯವನ್ನು ಬಳಸಿ ದಂಗೆ ತಡೆದರು.

**8. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಸ್‌ಚಂದ್ರ ಬೋಸ್‌ರ ಸಾಧನೆಗಳನ್ನು ವಿವರಿಸಿ.**

1. ಇವರನ್ನು **ನೇತಾಜಿ** ಎಂದು ಕರೆಯುತ್ತೇವೆ. 2. ಸರ್ಕಾರದ ಹುದ್ದೆ ತ್ಯಜಿಸಿ ಸ್ವಾತಂತ್ರ ಚಳುವಳಿಗೆ ದುಮುಕಿದರು.
3. ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ. 4. **ಫಾರ್ವರ್ಡ್ ಬ್ಲಾಕ್** ಪಕ್ಷ ಸ್ಥಾಪನೆ.
5. ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ. 6. ಜಪಾನಿನಲ್ಲಿದ್ದ ಯುದ್ಧ ಖೈದಿಗಳ ಸಂಘಟನೆ.
7. **ಇಂಡಿಯನ್ ನ್ಯಾಷಿನಲ್ ಆರ್ಮಿ**ಯ ನೇತೃತ್ವ. 8. **ದೆಹಲಿ ಚಲೋ** ಎಂಬ ಕರೆ
9. **ನನಗೆ ರಕ್ತಕೊಡಿ ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ** ಎಂಬ ಕರೆ.
10. ರಂಗೂನಿನ ಮೂಲಕ ಯುದ್ಧ ತಂತ್ರ 11. ಬರ್ಮಾದ ಗಡಿಯಲ್ಲಿ ಯುದ್ಧ. 12. ವಿಮಾನ ಅಪಘಾತದಲ್ಲಿ ಹುತಾತ್ಮರಾದರು.

**9. ನೆಹರು ಅವರು ಪ್ರಧಾನಮಂತ್ರಿಯಾದ ಮೇಲೆ ದೇಶಕ್ಕೆ ನೀಡಿದ ಕೊಡುಗೆಗಳನ್ನು ತಿಳಿಸಿ.**

1. ಭಾರತದ ಮೊದಲ ಪ್ರಧಾನ ಮಂತ್ರಿ 2. ದೇಶಿ ಸಂಸ್ಥಾನಗಳ ವಿಲೀನಿಕರಣ
3. ಭಾಷಾವಾರು ಪ್ರಾಂತ್ಯಗಳ ರಚನೆ 4. ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ತಳಹದಿ
5. ಮಿಶ್ರ ಆರ್ಥಿಕ ನೀತಿಯ ಜಾರಿ 6. ಬೃಹತ್ ಕೈಗಾರಿಕೆಗಳ ಸ್ಥಾಪನೆ
7. ಪಂಚವಾರ್ಷಿಕ ಯೋಜನೆಗಳ ಅಳವಡಿಕೆ 8. ಅಲಿಪ್ತ ನೀತಿ & ಪಂಚಶೀಲತತ್ವಗಳ ಜಾರಿ.
9. ವಿದೇಶಾಂಗ ನೀತಿಯ ಶಿಲ್ಪಿ 10. ಅಣುಶಕ್ತಿ ಉತ್ಪಾದನೆಗೆ ಅಡಿಪಾಯ.

**10. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಧನೆಗಳನ್ನು ವಿವರಿಸಿ.**

1. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಪ್ರತಿಪಾಧನೆ 2. ಜಾತಿ ವ್ಯವಸ್ಥೆಯ ವಿರುದ್ದ ಹೋರಾಟ
3. **ಮಹದ್** ಮತ್ತು **ಕಾಲಾರಾಂ** ಚಳುವಳಿಗಳು 4. **ಬಹಿಷ್ಕೃತ ಹಿತಕಾರಿಣಿ ಸಭಾ** ಸಂಘಟನೆ
5. **ಪ್ರಭುದ್ಧ ಭಾರತ, ಜನತಾ, ಮೂಕನಾಯಕ & ಬಹಿಷ್ಕೃತ ಭಾರತ** ಪತ್ರಿಕೆಗಳು 6. ಮೊದಲ ಕಾನೂನು ಮಂತ್ರಿ
7. ಕೃಷಿ ಕಾರ್ಮಿಕರ ಏಳಿಗೆಗಾಗಿ ಹೋರಾಟ 8. ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪನೆ. 9. ಭಾರತ ರತ್ನ ಪ್ರಶಸ್ತಿ
10. ದುಂಡುಮೇಜಿನ ಪರಿಷತ್‌ಗಳಲ್ಲಿ ಅಸ್ಪೃಶ್ಯರ ಅಭಿವೃದ್ಧಿಗೆ ಬೇಡಿಕೆ. 11. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು

**11. ಮಹಮದ್ ಅಲಿ ಜಿನ್ನಾ ಅವರ ಸಾಧನೆಗಳನ್ನು ವಿವರಿಸಿ.**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. 2. ದಾದಾಬಾಯಿ ನವರೋಜಿಯವರ ಕಾರ್ಯದರ್ಶಿಯಾಗಿ ಕೆಲಸ.
3. ನ್ಯಾಯಾಲಯದಲ್ಲಿ ತಿಲಕರ ಪರ ವಾದ. 4. ಹೋಂ ರೂಲ್ ಲೀಗ್ ಸೇರಿದರು.
5. ಹಿಂದೂ–ಮುಸ್ಲಿಂ ಏಕತೆ ಅಗತ್ಯ ಎಂದರು. 6. ಕೇಂದ್ರಿಯ ಶಾಸನ ಸಲಹಾ ಸಮಿತಿಗೆ ರಾಜೀನಾಮೆ.
7. ದುಂಡು ಮೇಜಿನ ಪರಿಷತ್‌ನಲ್ಲಿ ಭಾಗವಹಿಸಿದರು. 8. ದೇಶ ವಿಭಜಿಸಿ ಪಾಕಿಸ್ತಾನ ಪಡೆದರು.

**12. ಭಾರತದ ವಿಭಜನೆಯನ್ನು ವಿವರಿಸಿ.**

1. ರಾಷ್ಟ್ರೀಯ ಕಾಂಗ್ರೆಸ್ ಅಖಂಡ ರಾಷ್ಟ್ರದ ಕಲ್ಪನೆ. 2. ಮಹಮದ್ ಅಲಿ ಜಿನ್ನಾರಿಂದ ಪ್ರತ್ಯೇಕ ರಾಷ್ಟ್ರದ ಬೇಡಿಕೆ.
3. ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಲು ಸಾಧ್ಯವಿಲ್ಲವೆಂದರು.
4. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಧ್ಯಂತರ ಸರ್ಕಾರ ರಚಿಸುವಲ್ಲಿ ಭಿನ್ನತೆ.
5. ಮುಸ್ಲಿಂ ಲೀಗ್‌ನಿಂದ ಪ್ರತ್ಯೇಕ ರಾಷ್ಟ್ರಕ್ಕಾಗಿ ನೇರ ಕಾರ್ಯಾಚರಣೆ ದಿನಕ್ಕೆ ಕರೆ. 6. ದೇಶಾದ್ಯಂತ ಕೋಮುಗಲಭೆ.
7. ಸಂವಿಧಾನ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ 8. ಬ್ರ್ಯಾಟನ್‌ರಿಂದ ಭಾರತದ ವಿಭಜನೆ.

**13. ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳ ಫಲಿತಾಂಶವೇನು?**

1. ಮೊದಲನೇ ಪರಿಷತ್‌ನಲ್ಲಿ ಡೊಮಿನಿಯನ್ ಸ್ಟೇಟಸ್, ಜವಬ್ದಾರಿಯುತ ಸರ್ಕಾರ ಮತ್ತು ಮತೀಯ ಪ್ರಾತಿನಿಧ್ಯಗಳಿಗೆ ಸಮ್ಮತಿ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾಗವಹಿಸದ ಕಾರಣ ವಿಫಲ.
2. ಎರಡನೇ ಪರಿಷತ್‌ನಲ್ಲಿ ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆ.
3. ಇದನ್ನು ಗಾಂಧೀಜಿಯವರು ಒಪ್ಪಲಿಲ್ಲ. 4. ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯ.
5. 2ನೇ ಪರಿಷತ್ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯ. 6. ಬ್ರಿಟಿಷರಿಂದ ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ ಘೋಷಣೆ.
7. 3ನೇ ಪರಿಷತ್‌ನಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಭಾಗವಹಿಸಲಿಲ್ಲ. 8. 1935ರ ಶಾಸನ ಜಾರಿ.

## ಅಧ್ಯಾಯ – 9. ಸ್ವಾತಂತ್ರ್ಯೋತ್ತರ ಭಾರತ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಎಷ್ಟನೇ ತಿದ್ದುಪಡಿಯ ಮೂಲಕ ಸಂವಿಧಾನಕ್ಕೆ **ಸಮಾಜವಾದಿ** ಮತ್ತು **ಜಾತ್ಯತೀತ** ಎಂಬ ಪದಗಳನ್ನು ಸೇರಿಸಲಾಗಿದೆ.? **–42ನೇ**

**2. ಭಾರತದ ಉಕ್ಕಿನ ಮನುಷ್ಯ** ಎಂದು ಯಾರನ್ನು ಕರೆಯುತ್ತಾರೆ? **– ಸರ್ದಾರ್ ವಲ್ಲಭ ಭಾಯಿ ಪಟೇಲ್**

**3. 1947ರ ವಿಲೀನ ಕಾಯ್ದೆಯ ಪ್ರಕಾರ ಭಾರತದ ಒಕ್ಕೂಟ ಸೇರಿದ ಸಂಸ್ಥಾನಗಳಿಗೆ ನೀಡಿದ ಸವಲತ್ತುಗಳೇನು?**

– ರಾಜ್ಯಾದಾಯವನ್ನು ಆಧರಿಸಿ ರಾಜಧನ ನಿಗದಿ. ಜೊತೆಗೆ ಸವಲತ್ತು ಮತ್ತು ಸ್ಥಾನಮಾನ ನೀಡಿಕೆ.

**4. ಜುನಾಗಢದ ಪ್ರಜೆಗಳು ನವಾಬನ ವಿರುದ್ಧ ದಂಗೆಯೇಳಲು ಕಾರಣವೇನು?**

– ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದರಿಂದ.

5. ಜಮ್ಮು–ಕಾಶ್ಮೀರದ ರಾಜ ಹರಿಸಿಂಗ್ ಭಾರತ ಒಕ್ಕೂಟ ಸೇರಲಿಲ್ಲ ಏಕೆ? – **ಸ್ವತಂತ್ರವಾಗಿರಲು ನಿರ್ಧರಿಸಿ**

6. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು ಏನೆಂದು ಕರೆಯುತ್ತಾರೆ? **– ಪಾಕ್ ಆಕ್ರಮಿತ ಕಾಶ್ಮೀರ**

7. ಪಾಂಡಿಚೇರಿಯು ಎಷ್ಟರಲ್ಲಿ ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು? **– 1963ರಲ್ಲಿ**

8. ಗೋವಾ ವಿಮೋಚನೆಗೊಂಡ ವರ್ಷ ಯಾವುದು? – **1961.**

9. ಆಂಧ್ರ ಪ್ರದೇಶದ ರಚನೆಗಾಗಿ ಉಪವಾಸ ಸತ್ಯಾಗ್ರಹ ನಡೆಸಿ ಮರಣ ಹೊಂದಿದವರು ಯಾರು?– **ಪೊಟ್ಟಿ ಶ್ರೀರಾಮುಲು.**

10. ಭಾರತದಲ್ಲಿ ರಚನೆಯಾದ ಮೊದಲ ಭಾಷಾವಾರು ರಾಜ್ಯ ಯಾವುದು? – **ಆಂಧ್ರ ಪ್ರದೇಶ.**

11. ವಿಶಾಲ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿದ್ದು ಎಷ್ಟರಲ್ಲಿ? **– 1956 ನವಂಬರ್ 1**

12. ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಿದ ವರ್ಷ ಯಾವುದು? **– 1973 ನವಂಬರ್ 1**

13. ರಾಜ್ಯ ಪುನರ್ವಿಂಗಡನಾ ಆಯೋಗದ ಅಧ್ಯಕ್ಷರು ಯಾರಾಗಿದ್ದರು? – **ಫಜಲ್ ಅಲಿ**
14. **ಸರ್ಧಾರ್ ವಲ್ಲಭಬಾಯಿ ಪಟೇಲ್‌ರನ್ನು** ಭಾರತದ ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ ಏಕೆ?
  – ದೇಶೀಯ ಸಂಸ್ಥಾನಗಳ ವಿಲೀನಿಕರಣ ಯಶಸ್ವಿಯಾಗಿ ಪೂರ್ಣಗೊಳಿಸಿದ್ದರಿಂದ
15. ಪಾಂಡಿಚೇರಿ ಭಾರತಕ್ಕೆ ಯಾವಾಗ ಸೇರ್ಪಡೆಗೊಂಡಿತು? **– 1954**
16. ರಾಜ್ಯ ಪುನರ್ವಿಂಗಡಣಾ ಕಾನೂನು ಎಷ್ಟರಲ್ಲಿ ಜಾರಿಗೆ ಬಂದಿತು? **– 1956**

**II. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.**

**1. ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು?**

1. ಲಕ್ಷಾಂತರ ನಿರಾಶ್ರಿತರ ಸಮಸ್ಯೆ, 2. ದೇಶೀಯ ಸಂಸ್ಥಾನಗಳ ವಿಲೀನಿಕರಣ, 3. ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಸಮಸ್ಯೆ, 4. ಸಂವಿಧಾನ ರಚಿಸಿಕೊಳ್ಳುವ ಸಮಸ್ಯೆ 5. ದೇಶದ ರಕ್ಷಣೆಯ ಸಮಸ್ಯೆ 6. ಜಾತಿ, ಲಿಂಗ ಇತ್ಯಾದಿ ಅಸಮಾನತೆಗಳು 7. ಹೊಸ ಹಣಕಾಸು ವ್ಯವಸ್ಥೆ, 8. ವಿದೇಶಾಂಗ ನೀತಿಯ ಸ್ವರೂಪ.

**2. ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಿಗೊಳಿಸಿದ ರೀತಿಯನ್ನು ತಿಳಿಸಿ.**

ಸ್ವಾತಂತ್ರ್ಯ ನಂತರವೂ ಫ್ರೆಂಚರ ಹಿಡಿತದಲ್ಲಿದ್ದ ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್,ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದ ಹೋರಾಟದ ಫಲವಾಗಿ 1954 ರಲ್ಲಿ ಭಾರತಕ್ಕೆ ಸೇರ್ಪಡೆ.

**3. ಭಾಷಾವಾರು ಪ್ರಾಂತ್ಯಗಳನ್ನು ಹೇಗೆ ರಚಿಸಲಾಯಿತು?**

1. ಸ್ವತಂತ್ರಾನಂತರ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು.
2. ವಿಶಾಲಾಂಧ್ರ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಉಪವಾಸ ಮಾಡಿ ಅಸುನೀಗಿದರು.
3. 1953ರಲ್ಲಿ ರಾಜ್ಯಗಳ ಪುನರ್ ವಿಂಗಡನೆಗೆ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿ ಆಯೋಗ ರಚನೆ.
4. 1956ರಲ್ಲಿ **ರಾಜ್ಯ ಪುನರ್ವಿಂಗಡಣಾ ಕಾನೂನು** ಜಾರಿ.

**4. ಗೋವಾವನ್ನು ಪೋರ್ಚಗೀಸರಿಂದ ಹೇಗೆ ಮುಕ್ತಿಗೊಳಿಸಲಾಯಿತು?**

1. ಗೋವಾ ಭಾರತಕ್ಕೆ ಸೇರಬೇಕೆಂದು ಚಳುವಳಿ 2. ಪೋರ್ಚಗೀಸರಿಂದ ಚಳುವಳಿಗಾರರನ್ನು ಹತ್ತಿಕ್ಕಲು ಕ್ರಮ 3 ಜನರಿಂದ ಗೋವಾ ವಿಮೋಚನೆಗಾಗಿ ಹೋರಾಟ 4. 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶ ಗೋವಾದ ವಶ.

**5. ದೇಶೀಯ ಸಂಸ್ಥಾನಗಳ ವಿಲೀನೀಕರಣವನ್ನು ಸರ್ಧಾರ ವಲ್ಲಭಬಾಯಿ ಪಟೇಲರು ಹೇಗೆ ನಿಭಾಯಿಸಿದರು?**

1. ಸ್ವಾತಂತ್ರ್ಯ ಬಂದಾಗ 562 ಸಂಸ್ಥಾನಗಳಿದ್ದವು.
2. ಸಂಸ್ಥಾನಗಳಿಗೆ ಭಾರತ, ಪಾಕಿಸ್ತಾನಕ್ಕೆ ಸೇರುವ ಅಥವಾ ಸ್ವತಂತ್ರವಾಗಿರುವ ಆಯ್ಕೆ.
3. ದೇಶಿಯ ಸಂಸ್ಥಾನಗಳಿಗೆ ಭಾರತ ಒಕ್ಕೂಟಕ್ಕೆ ಸೇರಲು ಆಹ್ವಾನ.
4. ವಿಲೀನಗೊಂಡವರಿಗೆ ರಾಜಧನ, ಸವಲತ್ತು & ಸ್ಥಾನಮಾನ.
5. ಜುನಾಗಡ್, ಹೈದ್ರಾಬಾದ್ ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳಿಂದ ಪ್ರತಿರೋಧ.
6. ಸೈನಿಕ ಕಾರ್ಯಾಚರಣೆ ಮೂಲಕ ವಿಲೀನ.

**6. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

1. ದೇಶವಿಭಜನೆಯಿಂದ ಪಾಕಿಸ್ತಾನ ಬಿಟ್ಟುಭಾರತಕ್ಕೆ ಬಂದ ನಿರಾಶ್ರಿತರ ಸಂಖ್ಯೆ 6 ಮಿಲಿಯನ್.
2. ಇವರ ಸಮಸ್ಯೆಯನ್ನು 1951ರ ವೇಳೆಗೆ ಪರಿಹರಿಸಲಾಯಿತು.
3. ಬಾಂಗ್ಲಾ ವಿಮೋಚನೆಯಿಂದ 10 ಲಕ್ಷ ನಿರಾಶ್ರಿತರು ಭಾರತಕ್ಕೆ ಬಂದರು.
4. ಭಾರತ ಸರಕಾರ, ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳಿಂದ ಆಶ್ರಯ.
5. ಟಿಬೆಟ್‌ನಿಂದ ನಿರಾಶ್ರಿತರಾಗಿ ಒಂದು ಲಕ್ಷ ಇಪ್ಪತ್ತು ಸಾವಿರ ಜನರು ಬಂದರು.
6. ಬೈಲಕುಪ್ಪೆಯಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ 3000 ಎಕರೆಗಳ ಜಮೀನು ಮಂಜೂರು.

**7. ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಹೇಗೆ ವಿಲೀನಗೊಳಿಸಲಾಯಿತು?**

1. ಇದು ನಿಜಾಮನ ಅಧೀನದಲ್ಲಿತ್ತು. 2. ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಣೆ. 3. ಕಮ್ಯುನಿಸ್ಟರ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟ. 4. ನಿಜಾಮನ ರಜಾಕರರ ಬಗ್ಗೆ ಜನರಿಂದ ಪ್ರತಿರೋಧ. 5. ಸೈನಿಕ ಕಾರ್ಯಾಚರಣೆ ನಡೆಸಿ ಹೈದರಾಬಾದ್ ಸಂಸ್ಥಾನ ವಿಲೀನ.

**8. ಜಮ್ಮು & ಕಾಶ್ಮೀರದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

1. ರಾಜ ಹರಿಸಿಂಗ್ ಭಾರತದ ಒಕ್ಕೂಟ ಸೇರುವಲ್ಲಿ ವಿಳಂಬ.
2. ಪಾಕಿಸ್ತಾನದಿಂದ ದಾಳಿ,ರಾಜ ಹರಿಸಿಂಗ್ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಸಹಿ.
3. ಭಾರತದಿಂದ ವಿಶ್ವಸಂಸ್ಥೆಯಲ್ಲಿ ದಾವೆ. 4. ವಿಶ್ವಸಂಸ್ಥೆ ಕದನ ವಿರಾಮಕ್ಕೆ ಆದೇಶ.
5. ಕಾಶ್ಮಿರದ ವಾಯುವ್ಯ ಭಾಗ ಪಾಕಿಸ್ತಾನದ ಬಳಿ ಉಳಿಯಿತು. 6. **ಪಾಕ್ ಆಕ್ರಮಿತ ಕಾಶ್ಮೀರ** ಇಂದಿಗೂ ಸಮಸ್ಯೆ.

# ಅಧ್ಯಾಯ –10. **20ನೆಯ ಶತಮಾನದ ರಾಜಕೀಯ ಆಯಾಮಗಳು**

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಕದನ ಬಾಂಧವ್ಯತ್ರಯ ರಾಷ್ಟ್ರಗಳಾವುವು? – **ಬ್ರಿಟನ್, ಫ್ರಾನ್ಸ್, ರಷ್ಯಾ**
2. ಕದನ ಸೌಹಾರ್ದತ್ರಯ ರಾಷ್ಟ್ರಗಳಾವುವು? – **ಜರ್ಮನಿ, ಆಸ್ಟ್ರಿಯಾ–ಹಂಗೇರಿ, ಇಟಲಿ**
3. ಮಾನವ ಸಹಿತ ಉಪಗ್ರಹವನ್ನು ಉಡಾವಣೆ ಮಾಡಿದ ಜಗತ್ತಿನ ಮೊದಲ ದೇಶ ಯಾವುದು? – **ರಷ್ಯಾ**
4. ಪ್ರಪಂಚದ ಮೊದಲ ಗಗನಯಾತ್ರಿ ಯಾರು? – **ಯೂರಿಗಗಾರಿನ್**
5. **ಹೊಲೊಕಾಸ್ಟ್ ಎಂದರೇನು**? – ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆಗಳು.
6. ಆಕ್ಸಿಸ್(Axis) ಬಣದಲ್ಲಿದ್ದ ರಾಷ್ಟ್ರಗಳಾವುವು? – **ಜರ್ಮನಿ, ಇಟಲಿ, ಜಪಾನ್**
7. ಆಲೀಸ್(Allies) (ಅಲೈಸ್)ಬಣದಲ್ಲಿದ್ದ ರಾಷ್ಟ್ರಗಳಾವುವು? – **ಬ್ರಿಟನ್, ಫ್ರಾನ್ಸ್, ರಷ್ಯಾ**
8. ಜಗತ್ತಿನ ಮೊದಲ ಅಣುಬಾಂಬನ್ನು ಯಾವ ನಗರದ ಮೇಲೆ ಹಾಕಲಾಯಿತು? – **ಹಿರೋಷಿಮಾ ನಗರ (ಜಪಾನ್ ದೇಶ)**
9. **ಕಾರ್ಲ್‌ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದ ಚಿಂತನೆಯನ್ನು ಪ್ರಾಯೋಗಿಕವಾಗಿ ಮೊದಲು ಜಾರಿಗೊಳಿಸಿದವನು ಯಾರು?–ಲೆನಿನ್**
10. **ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು**? –ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ
11. ರಷ್ಯಾವು ಮೊದಲನೇ ಮಹಾಯುದ್ಧದಿಂದ ಹಿಂದೆ ಸರಿಯಲು ಕಾರಣವೇನು?–**1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ**
12. ರಷ್ಯಾದಲ್ಲಿ ಝಾರ್‌ಶಾಹಿಯನ್ನು **ರಾಷ್ಟ್ರೀಯತೆಯ ಜೈಲು** ಎಂದು ಕರೆಯಲಾಗುತ್ತಿತ್ತು ಏಕೆ?
**–ಝಾರ್ ದೊರೆಗಳಿಂದ ರೈತರು, ಬಡವರ ಶೋಷಣೆ. ಬಂಡವಾಳಗಾರರಿಂದ ಕಾರ್ಮಿಕರ ಶೋಷಣೆ.** ಇದರಿಂದ ಜನತೆ ಬೇಸತ್ತಿದ್ದರು.
13. **1905ರಲ್ಲಿ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧ ಉಂಟಾಗಲು ಕಾರಣವೇನು**?
– 1905ರಲ್ಲಿ ಜಪಾನ್ ದೇಶ ರಷ್ಯಾವನ್ನು ಸೋಲಿಸಿದ್ದರಿಂದ
14. **ಗೋಬೆಲ್ಸ್ ಎಂದರೆ ಯಾರು**? – ಹಿಟ್ಲರ್ ಜನಾಂಗೀಯ ದ್ವೇಷ ಪ್ರಸಾರ ಮಾಡಲು ನೇಮಿಸಿದ ಮಂತ್ರಿ.
15. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?– **ಹಿಟ್ಲರ್ 1939 ಸೆಪ್ಟಂಬರ್ 1 ರಂದು ಪೋಲೆಂಡಿನ ಮೇಲೆ ದಾಳಿ**
16. ಅಣುಬಾಂಬ್ ದಾಳಿಗೆ ತುತ್ತಾದ ಜಪಾನ್‌ನ ಎರಡು ನಗರಗಳಾವುವು? – **ಹಿರೋಷಿಮಾ ಮತ್ತು ನಾಗಸಾಕಿ.**
17. ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಟ ಪ್ರಯೋಗ ಯಾವುದು? –ಚೀನಾದ ಕಮ್ಯುನಿಸ್ಟರ **ದೀರ್ಘ ಪಯಣ**
18. **ಶೀತಲ ಸಮರ ಎಂದರೇನು**?
– ಅಮೇರಿಕಾದ ಬಂಡವಾಳಶಾಹಿ ದೇಶಗಳ ಬಣ ಮತ್ತು ಸೋವಿಯತ್ ರಷ್ಯಾದ ಸಮಾಜವಾದಿ ದೇಶಗಳ ಬಣಗಳ ನಡುವಿನ ಅಘೋಷಿತ ಸಮರ.
19. ಅಮೇರಿಕಾದ ನೇತೃತ್ವದಲ್ಲಿ ರಚಿಸಿಕೊಂಡ ಮಿಲಿಟರಿ ಮೈತ್ರಿಕೂಟಗಳನ್ನು ಹೆಸರಿಸಿ. – **ನ್ಯಾಟೋ, ಸಿಯಾಟೋ ಮತ್ತು ಸೆಂಟೋ**
20. ರಷ್ಯಾದ ನೇತೃತ್ವದಲ್ಲಿ ರಚಿಸಿಕೊಂಡ ಮಿಲಿಟರಿ ಮೈತ್ರಿಕೂಟ ಯಾವುದು? – **ವಾರ್ಸಾಕೂಟ**
21. ಜಪಾನ್ ದಾಳಿಗೆ ತುತ್ತಾದ ಅಮೇರಿಕಾದ ನೌಕಾ ನೆಲೆ ಯಾವುದು? – **ಪರ್ಲ್‌ಹಾರ್ಬರ್**.
22. **ಅಮೆರಿಕ ಮೊದಲನೇ ಮಹಾ ಯುದ್ಧದಲ್ಲಿ ಭಾಗವಹಿಸಲು ಕಾರಣವೇನು**?
– ಜರ್ಮನಿಯ ಜಲಾಂತರ್ಗಾಮಿ ನೌಕೆಯು ಅಮೇರಿಕಾದ ಹಡಗನ್ನು ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿಸಿದ್ದರಿಂದ.
23. **ಅಮೇರಿಕ ಎರಡನೇ ಜಾಗತಿಕ ಮಹಾಯುದ್ದದಲ್ಲಿ ಭಾಗವಹಿಸಲು ಕಾರಣವೇನು**?
– ಜಪಾನ್ ದೇಶವು ಅಮೇರಿಕಾದ ನೌಕಾ ನೆಲೆ **ಪರ್ಲ್ ಹಾರ್ಬರ್** ಮೇಲೆ ಬಾಂಬ್ ದಾಳಿ ಮಾಡಿದ್ದರಿಂದ.
24. **ಕಾನ್ಸೆಂಟ್ರೇಷನ್ ಕ್ಯಾಂಪ್ಸ್** ಎಂದರೇನು? – **ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವುದು.**

**II. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.**

**1. ಪ್ರಥಮ ಮಹಾಯುದ್ಧಕ್ಕೆ ಕಾರಣಗಳೇನು**?
1. ರಾಷ್ಟ್ರೀಯ ಮನೋಭಾವ, 2. ಪ್ರತಿಸ್ಪರ್ಧೆಯ ಮೈತ್ರಿಕೂಟಗಳ ಪೈಪೋಟಿ, 3. ಶಸ್ತ್ರಾಸ್ತ್ರಗಳ ಪೈಪೋಟಿ 4. ತತ್‌ಕ್ಷಣದ ಕಾರಣ

**2. ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಗಲು ಕಾರಣವೇನು**?
– ಗೋರ್ಬಚೆವ್ ಜಾರಿ ಮಾಡಿದ **ಗ್ಲಾಸ್‌ನೋಸ್ತ್** (ಮುಕ್ತತೆ) ಮತ್ತು **ಪೆರೆಸ್ತ್ರೋಯಿಕ** (ಪುನರ್‌ಸಂಘಟನೆ) ಎಂಬ ಸುಧಾರಣೆಗಳು

**3. ರಷ್ಯಾ ಕ್ರಾಂತಿಯಲ್ಲಿ ಲೇನಿನ್‌ನ ಪಾತ್ರವೇನು**?
1. ಝಾರ್ ದೊರೆಗಳ ವಿರುದ್ದ ಕಾರ್ಮಿಕರು, ರೈತರು ಜನಸಾಮಾನ್ಯರು ದಂಗೆ.
2. ಲೇನಿನ್ ತರುಣ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಗುಂಪು ರಚಿಸಿಕೊಂಡು ಹೋರಾಟ.
3. **ಶಾಂತಿ, ಆಹಾರ, ಭೂಮಿ** ಎಂಬ ಜನಪರ ಘೋಷಣೆ.
4. ಕ್ರಿ .ಶ 1917ರಲ್ಲಿ ಲೆನಿನ್ ರಷ್ಯಾದ ಅಧ್ಯಕ್ಷನಾಗಿ ಭೂಮಿಯನ್ನು ರೈತರಿಗೆ ನೀಡಿದನು.
5. ರಷ್ಯನ್ನರಿಗೆ ಉಚಿತ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ಯೋಜನೆಯ ಜಾರಿ.

**4. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವವು**?
1. ಪಂಚವಾರ್ಷಿಕ ಯೋಜನೆಗಳ ಜಾರಿ 2. ಕೈಗಾರಿಕೆಗಳನ್ನು ವಿಸ್ತರಿಸಿದನು.
3. ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವಸಹಿತ ಉಪಗ್ರಹ ಉಡಾವಣೆ
4. ಸೇನಾಬಲ ಬೆಳಸಿ ರಷ್ಯಾವನ್ನು ಅಮೆರಿಕಕ್ಕೆ ಸರಿಸಮವಾದ ದೇಶವಾಗಿ ಮಾಡಿದನು.

**5. ಪ್ರಥಮ ಮಹಾಯುದ್ದದಿಂದ ಆದ ಪರಿಣಾಮಗಳೇನು? ಅಥವಾ ವರ್ಸೈಲ್ಸ್ ಒಪ್ಪಂದದ ಫಲಿತಾಂಶಗಳೇನು?**

1. ಆಸ್ಟ್ರೋ–ಹಂಗೇರಿ ಮತ್ತು ಆಟೋಮನ್ ಸಾಮ್ರಾಜ್ಯಗಳು ತಮ್ಮ ಅಸ್ತಿತ್ವ ಕಳೆದುಕೊಂಡವು.
2. ಯುರೋಪಿನ ಭೂಪಟವೇ ಬದಲಾಗಿ ಹೋಯಿತು. 3. ಹಲವಾರು ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು.
4. ರಾಷ್ಟ್ರ ಸಂಘ ಸ್ಥಾಪಿಸಲಾಯಿತು. 5. ಸೋತ ರಾಷ್ಟ್ರಗಳಲ್ಲಿ ಬೆಳೆದ ಅವಮಾನಕರ ಭಾವನೆ ಉಗ್ರ ರಾಷ್ಟ್ರೀಯತೆಗೆ ಕಾರಣ.
6. ಹಿಟ್ಲರ್ ಮತ್ತು ಮುಸೋಲಿನಿಯಂತಹ ಸವಾಧಿಕಾರಿಗಳ ಏಳಿಗೆ.

**6. ನಾಜಿ ಸಿದ್ಧಾಂತವು ಜರ್ಮನಿಯನ್ನು ನಾಶ ಮಾಡಿತು ಹೇಗೆ?**

1. ಆರ್ಯ ಜನಾಂಗದ ಶ್ರೇಷ್ಠತೆ 2. ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗ ಆರ್ಯ ಜನಾಂಗ.
3. ಜರ್ಮನ್ನರು ಮಾತ್ರ ಜಗತ್ತನ್ನು ಆಳಲು ಯೋಗ್ಯರು 4. ಗೋಬೆಲ್ಸ್ ಮಂತ್ರಿಯ ನೇಮಕ
5. ಸಾಮೂಹಿಕ ಕಗ್ಗೊಲೆಗಳು. 6. ಬೂದು ಅಂಗಿ ದಳ ಕಾರ್ಯಪಡೆಯ ರಚನೆ.
7. ಕಾನ್ಸಂಟ್ರೇಷನ್ ಕ್ಯಾಂಪ್‌ಗಳು 8. 2ನೇ ಮಹಾಯುದ್ಧಕ್ಕೆ ಕಾರಣವಾದ ಹಿಟ್ಲರ್‌ನ ಮಹತ್ವಾಕಾಂಕ್ಷೆ

**7. ಅಮೇರಿಕಾದಲ್ಲಾದ ಆರ್ಥಿಕ ಮಹಾಕುಸಿತದ ಪರಿಣಾಮಗಳೇನು?**

1. ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳ ಉತ್ಪಾದನೆ ಕುಸಿತ. 2. ನಿರುದ್ಯೋಗದ ಹೆಚ್ಚಳ.
3. ಗಣಿಗಾರಿಕೆ, ಹಡಗು ಕಟ್ಟುವಿಕೆ ಗೃಹಬಳಕೆ ವಸ್ತುಗಳ ಉತ್ಪಾದನೆಗೆ ಹಿನ್ನಡೆ. 4. ಜನರ ಜೀವನಮಟ್ಟ ಕುಸಿಯಿತು.

**8. ಅಮೇರಿಕಾ ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರಬಂದಿತು?**

1. ಜನತೆಯನ್ನು ಸೈನ್ಯವಾಗಿ ಯುದ್ಧಕ್ಕೆ ಸಿದ್ಧಗೊಳಿಸಿದರು 2. ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರಗಳಲ್ಲಿ ದುಡಿಯಲು ಪ್ರೋತ್ಸಾಹ

**9. ಚೀನಾ ಕಮ್ಯುನಿಸ್ಟ್ ರಾಷ್ಟ್ರವಾಗಿ ಉದಯವಾದ ನಂತರ ಜಾರಿಗೆ ತಂದ ಸುಧಾರಣೆಗಳಾವುವು?**
**ಅಥವಾ ಚೀನಾ ಕ್ರಾಂತಿಯ ನಂತರ ಚೀನಾ ಹೇಗೆ ಅಭಿವೃದ್ಧಿ ಹೊಂದಿತು? /ಚೀನಾ ಕಾಂತಿಯ ಪರಿಣಾಮಗಳಾವುವು?**

1. ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿ ಜಾರಿ 2. ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ
3. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಹತ್ವ 4. **ಮುನ್ನೆಡೆಯ ಮಹಾಜಿಗಿತ** ಯೋಜನೆ
5. ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು. 6. ಸಾಂಸ್ಕೃತಿಕ ಕ್ರಾಂತಿಯ ಜಾರಿ
7. ಮಾವೋತ್ಸೆತುಂಗ್ ನಾಯಕತ್ವದಲ್ಲಿ ಕಮ್ಯುನಿಸ್ಟ್ ಆಳ್ವಿಕೆ ಆರಂಭ.

**10. ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?**

1. ಜರ್ಮನಿ ಹಾಗೂ ಇಟಲಿ ದೇಶಗಳ ವಿಸ್ತರಣಾವಾದ ಮತ್ತು ಸಾಮ್ರಾಜ್ಯವಾದ.
2. ರಾಷ್ಟ್ರಸಂಘ ವಿಸ್ತರಣಾವಾದಿಗಳ ಆಕ್ರಮಣಶೀಲತೆ ತಡೆಯಲು ವಿಫಲ.
3. ಹಿಟ್ಲರ್ & ಮುಸ್ಸಲೋನಿಯರ ಆಕ್ರಮಣಗಳ ವಿರುದ್ಧ ಯಾರು ಶಿಸ್ತಿನ ಕ್ರಮ ಕೈಗೊಳ್ಳಲು ಮುಂದಾಗಲಿಲ್ಲ.
4. ಜರ್ಮನಿಯ ಪೋಲೆಂಡ್ ಮೇಲಿನ ದಾಳಿ 5. ವರ್ಸೇಲ್ ಒಪ್ಪಂದ.

**11. ಎರಡನೇ ಮಹಾಯುದ್ಧದ ಪರಿಣಾಮಗಳು ಯಾವುವು?**

1. ಅಪಾರ ಸಾವು ನೋವು ಸಂಭವಿಸಿತು . 2. ವಿಶ್ವಸಂಸ್ಥೆಯ ಸ್ಥಾಪನೆ
3. ಏಷ್ಯಾ ಮತ್ತು ಆಫ್ರಿಕಾದ ದೇಶಗಳು ಸ್ವಾತಂತ್ರ್ಯ ಪಡೆದವು. 4. ಶೀತಲ ಸಮರಕ್ಕೆ ನಾಂದಿ
5. ಯೂರೋಪಿಯನ್ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಕಳೆದುಕೊಂಡವು. 6. ಅಣ್ವಸ್ತ್ರಗಳ ಪೈಪೋಟಿಗೆ ದಾರಿ

**12 ಫ್ಯಾಸಿಸ್ಟ್‌ವಾದದ ಲಕ್ಷಣಗಳು ಯಾವುವು?**

1. ಉಗ್ರ ರಾಷ್ಟ್ರೀಯವಾದ 2. ಪರಕೀಯ ಶಕ್ತಿಗಳ ನಾಶ 3. ಹಿಂಸೆಯ ವೈಭವೀಕರಣ
4. ಜನಾಂಗೀಯ ಶ್ರೇಷ್ಠತೆ 5. ಸಾಮ್ರಾಜ್ಯವಾದದ ವಿಸ್ತರಣೆ 6. ನರಮೇಧಗಳಿಗೆ ಬೆಂಬಲ

**13. ಶೀತಲ ಸಮರ ಜಗತ್ತಿನಲ್ಲಿ ಯುದ್ಧದ ಆತಂಕವನ್ನು ಸೃಷ್ಟಿಸಿತು ಈ ಹೇಳಿಕೆಯನ್ನು ಸಮರ್ಥಿಸಿ.**

1. ಎರಡೂ ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ತೀವ್ರಗೊಂಡಿತು. 2. ಜಗತ್ತಿನಾದ್ಯಂತ ಶಸ್ತ್ರಾಸ್ತ್ರಗಳ ವ್ಯಾಪಕ ಮಾರಾಟ.
3. ಮಿಲಿಟರಿ ಮೈತ್ರಿಕೂಟಗಳ ರಚನೆ 4. ಯುದ್ಧಾಸ್ತ್ರಗಳ ಕಾರ್ಖಾನೆಗಳು ಬೆಳೆದವು.
5. ಗೂಢಚರ್ಯೆ ವ್ಯಾಪಕವಾಯಿತು. 6. ಹಲವು ರಾಷ್ಟ್ರಗಳ ನಡುವೆ ಯುದ್ಧಗಳು ಸಂಭವಿಸಿದವು.

**14. ಹಿಟ್ಲರ್ ಕುರಿತು ಟಿಪ್ಪಣಿ: ದೇಶ** :ಜರ್ಮನಿ, **ಬಿರುದು :** ಫ್ಯೂಹ್‌ರರ್**ಪಕ್ಷ** :ನಾಜಿ ಪಕ್ಷ, **ಸೇನೆ** :ಬೂದು ಅಂಗಿದಳ,
**ಹುದ್ದೆ :** ಜರ್ಮನಿಯ ಛಾನ್ಸಲರ್ ಆಗಿ ನೇಮಕ.ಅಧ್ಯಕ್ಷ ಹಿಂಡೆನ್‌ಬರ್ಗ್‌ನ ನಿಧನದ ನಂತರ ಜರ್ಮನಿಯ ಸರ್ವಾಧಿಕಾರಿ.

**15. ಮುಸೋಲಿನಿ ಕುರಿತು ಟಿಪ್ಪಣಿ**

**ದೇಶ :** ಇಟಲಿ **ಪಕ್ಷ :** ಫ್ಯಾಸಿಸ್ಟ್ ಪಕ್ಷ, **ಹುದ್ದೆ** :ಇಟಲಿಯ ಪ್ರಧಾನ ಮಂತ್ರಿ, ನಂತರ ಸವಾಧಿಕಾರಿ.

## ರಾಜ್ಯಶಾಸ್ತ್ರ

## ಅಧ್ಯಾಯ – 1. ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ನಿರುದ್ಯೋಗ ಎಂದರೇನು? – **ಕೆಲಸ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗೆ ಉದ್ಯೋಗ ದೊರೆಯದಿರುವ ಪರಿಸ್ಥಿತಿ.**
2. ಭ್ರಷ್ಟಾಚಾರ ಎಂದರೇನು? – **ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರಕ್ರಮಕ್ಕೆ ಪ್ರಚೋದನೆ.**
3. ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ಉದ್ದೇಶದಿಂದ ಸಂವಿಧಾನದ ಯಾವ ವಿಧಿಗೆ ತಿದ್ದುಪಡಿ ಮಾಡಲಾಗಿದೆ? **–371ನೇ ವಿಧಿಗೆ**

4. ಕರ್ನಾಟಕದಲ್ಲಿನ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಿದ ವಿಧಿ ಯಾವುದು? **–371'ಜೆ'ವಿಧಿ**

**5. ಕೋಮುವಾದ ಅಥವಾ ಮತೀಯವಾದ ಎಂದರೇನು?**

– ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿ ಬೆಳಸಿಕೊಳ್ಳುವುದು.

6. ಸ್ತ್ರೀಶಕ್ತಿ ಕಾರ್ಯಕ್ರಮದ ಉದ್ದೇಶವೇನು? **– ಗ್ರಾಮಾಂತರ ಮಹಿಳೆಯರ ವಿಕಾಸ**

**7. ಕಾರ್ಪೊರೇಟ್ ತಂತ್ರಗಾರಿಕೆ ಎಂದರೇನು?**

– ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪೆನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನ

8. 2001ರ ಡಿ.ಎಂ. ನಂಜುಂಡಪ್ಪ ಸಮಿತಿಯ ಉದ್ದೇಶವೇನು? **– ಪ್ರಾದೇಶಿಕ ಅಸಮತೋಲನ ನಿವಾರಣೆ**

9. ಭ್ರಷ್ಟಾಚಾರ ನಿಯಂತ್ರಣಕ್ಕೆ ಸ್ಥಾಪಿಸಿರುವ ಸಂಸ್ಥೆಗಳು ಯಾವುವು? **– ಲೋಕಪಾಲ ಮತ್ತು ಲೋಕಾಯುಕ್ತ**

10. ನಿರುದ್ಯೋಗಕ್ಕೆ ಮುಖ್ಯ ಕಾರಣಗಳು ಯಾವುವು? **– ಮಿತಿಮೀರಿದ ಜನಸಂಖ್ಯೆ ಮತ್ತು ಹೆಚ್ಚಾದ ತಂತ್ರಜ್ಞಾನದ ಬಳಕೆ**

**11. ಭಯೋತ್ಪಾದಕತೆ ಎಂದರೇನು?**

– ಉಗ್ರಗಾಮಿ ಸಂಘಟನೆಗಳ ಉದ್ದೇಶ ಈಡೇರಿಕೆಗಾಗಿ ಹಾಗೂ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ.

12. ಕಾರ್ಪೊರೇಟ್ ತಂತ್ರಗಾರಿಕೆಯ ಮುಖ್ಯ ಉದ್ದೇಶವೇನು? **– ಲಾಭವನ್ನು ಪಡೆಯುವುದು.**

**13. ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ಹೇಗೆ ಎಡೆಮಾಡಿಕೊಡುತ್ತದೆ?**

– ಸಾರ್ವಜನಿಕ ಸೇವೆಯ ಕ್ಷೇತ್ರಗಳಲ್ಲಿ ಅಧಿಕಾರಶಾಹಿಯಲ್ಲಿ ಒದಗುವ ಲೋಪದೋಷಗಳಿಗೆ, ವಂಚನೆಗಳಿಗೆ ಅನುವು.

**II. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ.**

**1. ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?**

1. 2001ರಲ್ಲಿ **ಡಿ.ಎಂ. ನಂಜುಂಡಪ್ಪ ಸಮಿತಿ** ರಚನೆ. 2. ಸಂವಿಧಾನಕ್ಕೆ ವಿಧಿ **371 (ಜೆ)** ಸೇರ್ಪಡೆ.

**2. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ?**

1. ಸಾಮಾಜಿಕ ಭಿನ್ನತೆ, ಅಪನಂಬಿಕೆ ಹಾಗೂ ಭಯದ ವಾತಾವರಣ ಸೃಷ್ಟಿ. 2. ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಭಂಗ.
3. ಗುಂಪುಗಾರಿಕೆ ಮತ್ತು ರಾಜಕೀಯ ಪೈಪೋಟಿಗೆ ಕಾರಣ. 4. ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ.
5. ವ್ಯಕ್ತಿಗಳ ಜೀವನ ಮತ್ತು ಸೊತ್ತುಗಳ ನಾಶ.

**3. ಕೋಮುವಾದದ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

1. ಏಕರೂಪದ ನಾಗರೀಕ ಸಂಹಿತೆ 2. ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ನೋಡುವುದು.
3. ಜ್ಯಾತ್ಯತೀತ ಮನೋಭಾವಕ್ಕೆ ಪ್ರಾಶಸ್ತ್ಯ. 4. ರಾಷ್ಟ್ರೀಯ ಚಿಂತನೆಗೆ ಒತ್ತು.

**4. ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?**

1. ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ, 2. ಬಾಲ್ಯವಿವಾಹ, ವರದಕ್ಷಿಣೆ, ಬಹುಪತ್ನಿತ್ವ ನಿಷೇಧ ಕಾಯ್ದೆ ಜಾರಿ.
3. ಸ್ತ್ರೀಶಕ್ತಿ ಕಾರ್ಯಕ್ರಮ, ಸ್ತ್ರೀಶಕ್ತಿ ಸಂಘಗಳು 4. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಾರಂಭ.
5. ಮಹಿಳಾ ಸ್ವಸಹಾಯ ಸಂಘಗಳ ಸ್ಥಾಪನೆ. 6. ರಾಜ್ಯ ಮತ್ತು ರಾಷ್ಟ್ರೀಯ ಮಹಿಳಾ ಆಯೋಗಗಳ ರಚನೆ.
7. ಸರ್ಕಾರಿ ಉದ್ಯೋಗ ಹಾಗೂ ರಾಜಕೀಯದಲ್ಲಿ ಮೀಸಲಾತಿ

**5. ನಿರುದ್ಯೋಗಕ್ಕೆ ಕಾರಣಗಳಾವುವು?**

1. ಮಿತಿಮೀರಿದ ಜನಸಂಖ್ಯೆ 2. ಹೆಚ್ಚಾದ ತಂತ್ರಜ್ಞಾನದ ಬಳಕೆ 3. ನೈಸರ್ಗಿಕ ಸಂಪನ್ಮೂಲಗಳ ಕೊರತೆ,
4. ಕೃಷಿಯ ಮೇಲಿನ ಅಧಿಕ ಅವಲಂಬನೆ, 5. ಗೃಹ ಕೈಗಾರಿಕೆಗಳ ನಾಶ, 6. ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ

**6. ನಿರುದ್ಯೋಗ ನಿವಾರಣೆಗೆ ಕೈಗೊಂಡ ಕ್ರಮಗಳು ಯಾವುವು?**

1. ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ ನೀಡಿಕೆ, 2. ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ನೀಡುವುದು
3. ಕರಕುಶಲ ಕಸುಬುಗಳಿಗೆ ಪ್ರೋತ್ಸಾಹ. 4. ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುವುದು
5. ವೃತ್ತಿಶಿಕ್ಷಣಕ್ಕೆ ಪ್ರೋತ್ಸಾಹ. 6. ಉದ್ಯೋಗ ಖಾತರಿ ಯೋಜನೆಗಳು

**7. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು?**

1. ವ್ಯಕ್ತಿಗಳಿಗೆ & ಆಸ್ತಿ–ಪಾಸ್ತಿಗಳಿಗೆ ಹಾನಿ 2. ಸಾಮಾಜಿಕ ಸಂಸ್ಕೃತಿಗೆ, ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ.
3. ನಿರ್ದಿಷ್ಟ ಭಾಷೆ, ಧರ್ಮ, ಜನಾಂಗದವರಿಗೆ ತೊಂದರೆ. 4. ಭಯದ ವಾತಾವರಣ ಸೃಷ್ಟಿ.
5. ರಸ್ತೆ ಸಾರಿಗೆ, ರೈಲ್ವೆ, ವಿಮಾನ, ಸರ್ಕಾರಿ ಕಛೇರಿಗಳು, & ಮಾರುಕಟ್ಟೆ ಪ್ರದೇಶಗಳ ನಾಶ 6. ಅಪಾರ ಸಾವು ನೋವು.

**8. ಭಯೋತ್ಪಾದಕತೆಯ ನಿಗ್ರಹಕ್ಕೆ/ನಿಯಂತ್ರಣಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?**

1. ಭಯೋತ್ಪಾದನೆ ನಿಗ್ರಹಿಸಲು ವಿಶೇಷ ಪರಿಣಿತಿ ಪಡೆದ ಪಡೆಗಳ ರಚನೆ.
2. ಭಯೋತ್ಪಾದನೆ ನಿಗ್ರಹಕ್ಕೆ ರಕ್ಷಣಾ ಪಡೆಗಳ ಬಳಕೆ. 3. ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಪ್ರಯತ್ನ.

**9. ಭ್ರಷ್ಟಾಚಾರ ನಿರ್ಮೂಲನೆಗೆ ಕೈಗೊಂಡಿರುವ ಕ್ರಮಗಳಾವುವು?**

* ಉತ್ತಮ ರಾಜಕೀಯ ಇಚ್ಛಾಶಕ್ತಿ. * ಉತ್ತಮ ಅಧಿಕಾರಿ ವರ್ಗ. * ಸಾರ್ವಜನಿಕರ ಸಹಕಾರ
* ಪೌರರಿಗೆ ರಾಜಕೀಯ ಅರಿವು. * ಸರ್ಕಾರಿ ಕಛೇರಿಗಳಲ್ಲಿ ಸಿಸಿ ಕ್ಯಾಮೆರ ಅಳವಡಿಕೆ.

* ಕಛೇರಿಯ ಕಾರ್ಯನಿರ್ವಹಣೆಯ ವೇಗ ಹೆಚ್ಚಿಸುವುದು   * ಭ್ರಷ್ಟಾಚಾರದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ.

**10. ಭಾರತ ಸರ್ಕಾರ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳಾವುವು?**

1. ಮಹಿಳೆಯರಿಗೆ ಶಿಕ್ಷಣ,   2. ಉದ್ಯೋಗಗಳಲ್ಲಿ ಮೀಸಲಾತಿ   3. ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ
4. ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ50 ರಷ್ಟು ಮೀಸಲಾತಿ.

## ಅಧ್ಯಾಯ – 2.ಭಾರತದ ವಿದೇಶಾಂಗ ನೀತಿ

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಭಾರತದ ವಿದೇಶಾಂಗ ನೀತಿಯ ಶಿಲ್ಪಿ ಎಂದು ಯಾರನ್ನು ಕರೆಯುತ್ತಾರೆ? **– ಜವಾಹರ ಲಾಲ್ ನೆಹರು**
2. ಎರಡನೇ ಮಹಾಯುದ್ಧದ ನಂತರ ಯಾವ ಬಣಗಳ ನಡುವೆ ಶೀತಲ ಯುದ್ದ ಆರಂಭವಾಯಿತು? **– ಅಮೇರಿಕಾ & ರಷ್ಯಾ**
3. ಮಾನವ ಹಕ್ಕುಗಳ ಉಲ್ಲಂಘನೆ ಯಾವುದಕ್ಕೆ ಮಾರಕವಾಗುತ್ತದೆ? **– ವಿಶ್ವಶಾಂತಿ & ಸಹಬಾಳ್ವೆಗೆ**
4. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಟ ನಡೆಸಿದವರು ಯಾರು? **– ನೆಲ್ಸನ್ ಮಂಡೇಲಾ**
5. **ಅಲಿಪ್ತ ನೀತಿ ಎಂದರೇನು?** – ವಿಶ್ವದ ಯಾವುದೇ ಬಣಕ್ಕೆ ಸೇರದೇ ತಟಸ್ಥವಾಗಿರುವ ನೀತಿ.
6. **ಸಾರ್ವಭೌಮ ರಾಷ್ಟ್ರವೆಂದರೇನು?**
– ಯಾವುದೇ ರಾಷ್ಟ್ರ ಆಂತರಿಕವಾಗಲೀ, ಬಾಹ್ಯವಾಗಿಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆಸ್ವತಂತ್ರವಾಗಿರುವುದು.
7. ನಿಶ್ಯಸ್ತ್ರೀಕರಣ ಎಂದರೇನು? **ಕೆಲವು ನಿರ್ದಿಷ್ಟ ಬಗೆಯ ಅಥವಾ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದು.**
8. **ವಿದೇಶಾಂಗ ನೀತಿ ಎಂದರೇನು?** – ಒಂದು ರಾಷ್ಟ್ರ ಅನ್ಯರಾಷ್ಟ್ರದೊಂದಿಗೆ ವ್ಯವಹರಿಸುವಾಗ ಅನುಸರಿಸುವ ನೀತಿ.
9. **ವರ್ಣಭೇದ ನೀತಿ ಎಂದರೇನು?** – ಜನಸಮುದಾಯ ಅಥವಾ ವರ್ಣದ ಆಧಾರದ ಮೇಲೆ ತಾರತಮ್ಯ ಮಾಡುವ ನೀತಿ.
10. **ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಸಂವಿಧಾನದ 51ನೇ ವಿಧಿಯು ಏನು ಹೇಳುತ್ತದೆ?**
– ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ತಂದುಕೊಡುವ ವಿದೇಶಾಂಗ ನೀತಿ.

**II. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಭಾರತದ ವಿದೇಶಾಂಗ ನೀತಿಯು ರೂಪುಗೊಳ್ಳಲು ಪ್ರಭಾವ ಬೀರಿದ ಅಂಶಗಳನ್ನು ತಿಳಿಸಿ.**

1. ರಾಷ್ಟ್ರೀಯ ಹಿತಾಸಕ್ತಿಗಳು   2. ಭೌಗೋಳಿಕ ಅಂಶಗಳು   3. ರಾಜಕೀಯ ಪರಿಸ್ಥಿತಿ.   4. ಆರ್ಥಿಕ ವ್ಯವಸ್ಥೆ
5. ರಕ್ಷಣಾ ಸಾಮರ್ಥ್ಯ   6. ಜನಾಭಿಪ್ರಾಯ   7. ಅಂತರರಾಷ್ಟ್ರೀಯ ಪರಿಸರ.

**2. ಭಾರತದ ವಿದೇಶಾಂಗ ನೀತಿಯ ಉದ್ದೇಶ ಅಥವಾ ಗುರಿಗಳಾವವು?**

1. ರಾಷ್ಟ್ರದ ಭದ್ರತೆ  2. ರಾಷ್ಟ್ರದ ಆರ್ಥಿಕ ಸಂವರ್ಧನೆ. 3.ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರ.
4. ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಬಂದಿಸುವುದು.   5. ವಿಶ್ವಶಾಂತಿ ಹಾಗೂ ಸಹಬಾಳ್ವೆ.

**3. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು?**

1. ಪಂಚಶೀಲ ತತ್ವಗಳು   2. ಅಲಿಪ್ತ ನೀತಿ   3. ವಸಾಹತುಶಾಹಿತ್ವಕ್ಕೆ ವಿರೋಧ
4. ವರ್ಣಭೇದ ನೀತಿಗೆ ವಿರೋಧ   5. ನಿಶ್ಯಸ್ತ್ರೀಕರಣ

**4. ಪಂಚಶೀಲ ತತ್ವಗಳಾವವು?**

ಕ್ರಿ.ಶ 1954 ರಲ್ಲಿ ಚೀನಾದ ಪ್ರಧಾನಿ ಚೌ ಎನ್‌ಲಾಯ್ ಮತು ಪಂಡಿತ್ ನೆಹರುರವರು ಮಾಡಿಕೊಂಡ ಒಪ್ಪಂದ.

1. ಪರಸ್ಪರರ ಪರಮಾಧಿಕಾರ ಮತ್ತು ಪ್ರಾದೇಶಿಕ ಐಕ್ಯತೆಗೆ ಗೌರವ  2. ಪರಸ್ಪರರ ಮೇಲೆ ಆಕ್ರಮಣ ಮಾಡದಿರುವುದು.
3. ಬೇರೆ ದೇಶಗಳ ಒಳಾಡಳಿತದಲ್ಲಿ ಹಸ್ತಕ್ಷೇಪ ಮಾಡದಿರುವುದು.
4. ಸಮಾನತೆ ಮತ್ತು ಪರಸ್ಪರ ಹಿತಸಾಧನೆ   5. ಶಾಂತಿಯುತ ಸಹಜೀವನ.

**5. ವಸಾಹತುಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?**

1 ಬೇರೆ ದೇಶಗಳ ಪರಮಾಧಿಕಾರದ ದಕ್ಕೆಗೆ ಭಾರತದ ವಿರೋಧ.
2. ಇದು ಒಂದು ದೇಶವನ್ನು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಪಡಿಸುತ್ತದೆ.
3. ಒಂದು ದೇಶದ ಧಾರ್ಮಿಕ ಮತ್ತು ಸಾಮಾಜಿಕ ಹಿತಾಸಕ್ತಿಗೆ ಧಕ್ಕೆ. 4. ಭಾರತವು ವಸಾಹತುಶಾಹಿತ್ವ ನೀತಿಗೆ ಒಳಗಾದ ರಾಷ್ಟ್ರ
5. ಪ್ರಪಂಚದ ಯಾವುದೇ ಮೂಲೆಯಲ್ಲೂ ವಸಾಹತುಶಾಹಿತ್ವ ಇರಕೂಡದೆಂಬ ನಿಲುವನ್ನು ಪ್ರತಿಪಾದಿಸುತ್ತಿದೆ.

**6. ಪ್ರಚಲಿತ ಜಗತ್ತಿಗೆ ನಿಶಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಏಕೆ ಪ್ರತಿಪಾದಿಸುತ್ತಿದೆ? ವಿವರಿಸಿ.(ಏಪ್ರಿಲ್ 2017)**

1. ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ, ಮಾರಾಟ, ಸಂಗ್ರಹಣೆಯ ಪೈಪೋಟಿಯ ಭೀತಿ.
2. ಮೂರನೇ ಮಹಾಯುದ್ಧದ ಆತಂಕ   3. ಅಣ್ವಸ್ತ್ರಗಳನ್ನು ತಯಾರಿಸಿ ಬಳಸುವ ಭೀತಿ.
4. ಶಸ್ತ್ರಾಸ್ತ್ರಗಳನ್ನು ಹಂತ ಹಂತವಾಗಿ ಇಲ್ಲವಾಗಿಸುವುದು.   5. ಭಾರತ ಶಾಂತಿ ಸೌಹಾರ್ಧತೆಗೆ ಒತ್ತು ನೀಡುವ ದೇಶ
6. ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿ ಹೊಂದಿದೆ.

**7. ಭಾರತವು ಪ್ರಭಾವಶಾಲಿ ರಾಷ್ಟ್ರವಾಗಿ ವಿಶ್ವಮಾನ್ಯ ಪಡೆದಿದೆ. ಹೇಗೆ?**

1. ಭಾರತವು ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದೆ.   2. ವಿಪುಲ ಜನಸಂಖ್ಯೆ
3. ಅಪಾರ ನೈಸರ್ಗಿಕ ಸಂಪತ್ತು   4. ಬೌದ್ಧಿಕ ಮತ್ತು ಔದ್ಯೋಗಿಕ ಸಾಮರ್ಥ್ಯ 5. ಬಲಾಢ್ಯ ಸೈನಿಕ ಬಲ ಹೊಂದಿದೆ.

## ಅಧ್ಯಾಯ – 3. ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**I. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?**

1. ರಾಷ್ಟ್ರವು ಬೇರೆ ರಾಷ್ಟ್ರಗಳ ಜೊತೆಗೆ ವ್ಯವಹರಿಸದೆ, ಉತ್ತಮ ಸಂಬಂಧವನ್ನು ಹೊಂದದೆ ಅಭಿವೃದ್ಧಿ ಸಾಧ್ಯವಿಲ್ಲ.
2. ಜಾಗತೀಕರಣ ಮತ್ತು ಆಧುನೀಕರಣದ ಯುಗದಲ್ಲಿ ಇತರೆ ರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧ ಅನಿವಾರ್ಯ
3. ಗಡಿ ಭದ್ರತೆಗಾಗಿ. 4. ವಿದೇಶಿ ವ್ಯಾಪರ ಅಭಿವೃದ್ಧಿಗಾಗಿ. 5 ಆರ್ಥಿಕ ಲಾಭಕ್ಕಾಗಿ. 6 ಶಾಂತಿ ಸೌಹಾರ್ದತೆಗಾಗಿ.

**2. ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ವಿವರಿಸಿ.**

1. ಸಿಂಧೂ ನಾಗರಿಕತೆ ಕಾಲದಿಂದಲೂ ಸಂಬಂಧವಿದೆ. 2. ಭಾರತದ ಭೌದ್ಧ ಧರ್ಮ ಚೀನಾದಲ್ಲಿ ಪ್ರಸಾರ.
3. ಎರಡೂ ರಾಷ್ಟ್ರಗಳ ನಡುವೆ ಪಂಚಶೀಲ ಒಪ್ಪಂದವೇರ್ಪಟ್ಟಿದೆ. 4. ಚೀನಾ 1962ರಲ್ಲಿ ಭಾರತದ ಮೇಲೆ ಯುದ್ಧ.
5. ಎರಡೂ ದೇಶಗಳ ಮಧ್ಯೆ ಗಡಿ ಸಮಸ್ಯೆ 6. ಅರುಣಾಚಲ ಪ್ರದೇಶ ತನ್ನದೆಂದು ಚೀನಾದ ವಾದ.
7. 1980ರ ನಂತರ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕ.
8. ಭಾರತ ಮತ್ತು ಚೀನಾಗಳ ಪ್ರಯತ್ನದ ಫಲವಾಗಿ BRICS ರಾಷ್ಟ್ರಗಳ ಗುಂಪು ಪ್ರಾರಂಭ. (2015)

**3. ಭಾರತ ಮತ್ತು ಪಾಕಿಸ್ಥಾನಗಳ ಸಂಬಂಧವನ್ನು ವಿವರಿಸಿ.**

1. ಸ್ವಾತಂತ್ರ್ಯ ಪೂರ್ವದಲ್ಲಿ ಒಂದೇ ರಾಷ್ಟ್ರವಾಗಿದ್ದು ಇಂದು ನೆರೆಯ ರಾಷ್ಟ್ರಗಳಾಗಿವೆ.
2. ಜಮ್ಮು-ಕಾಶ್ಮೀರ, ಭಯೋತ್ಪಾದನೆ, ನೀರಿನ ಸಮಸ್ಯೆ. 3. ಮೂರು ಭಾರಿ ಯುದ್ಧಗಳು ನಡೆದಿವೆ.
4. ತಾಷ್ಕೆಂಟ್ & ಸಿಮ್ಲಾ ಒಪ್ಪಂದ, ಲಾಹೋರ್ ಬಸ್ ಯಾತ್ರೆ, ಆಗ್ರಾ ಶೃಂಗಸಭೆ.
5. 2001ರಲ್ಲಿ ಭಾರತ ಸಂಸತ್ತಿನ ಮೇಲಿನ ದಾಳಿ, 2008ರ ಮುಂಬೈನ ದಾಳಿ, 2016ರ ಪಠಾಣ್ ಕೋಟ್ ದಾಳಿ.
6. ಕ್ರೀಡೆ, ಸಂಸ್ಕೃತಿ ಮತ್ತು ಆರ್ಥಿಕ ವಿಷಯಗಳಲ್ಲಿ ಪರಸ್ಪರ ವಿನಿಮಯ. 7. ವ್ಯಾಪಾರ, ವಾಣಿಜ್ಯ ಮುಂದುವರೆದಿವೆ.

**4. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**

1. ತಾಷ್ಕೆಂಟ್ ಒಪ್ಪಂದಕ್ಕೆ ರಷ್ಯಾ ಸಹಕಾರ 2. ಗೋವಾ ವಿಮೋಚನೆಗೆ ಸಹಕಾರ
3. ಭಾರತದ ಮೇಲೆ ಚೀನಾ ದಾಳಿಯನ್ನು ರಷ್ಯಾ ಖಂಡಿಸಿತು. 4. 20ವರ್ಷಗಳ ಶಾಂತಿ ಸಹಕಾರ ಒಪ್ಪಂದ.
5. ಬಿಲಾಯ್, ಬೊಕಾರೋಗಳ ಉಕ್ಕಿನ ಕಾರ್ಖಾನೆಗೆ ಸಹಾಯ
6. ಭದ್ರತಾ ಸಮಿತಿಯಲ್ಲಿ ಭಾರತದ ಖಾಯಂ ಸದಸ್ಯತ್ವಕ್ಕೆ ಬೆಂಬಲ. 7. ಉತ್ತಮ ರಾಜಕೀಯ, ಆರ್ಥಿಕ ಬಾಂಧವ್ಯ

**5. ಭಾರತ & ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಇವುಗಳ ಪರಸ್ಪರ ಸೌಹಾರ್ಧತೆ ಹೇಗಿದೆ ವಿವರಿಸಿ./**
**1947 ರ ಬಳಿಕ ಭಾರತ ಮತ್ತು ಅಮೇರಿಕಾಗಳ ಸಂಬಂಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಆಧರಿಸಿ ಹಲವಾರು ಸ್ಥಿತ್ಯಂತರಗಳನ್ನು ಕಂಡಿದೆ. ಸಮರ್ಥಿಸಿ.**

1. ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ 2. ಭಾರತದ ಪಂಚವಾರ್ಷಿಕ ಯೋಜನೆಗೆ ಸಹಾಯ
3. ಚೀನಾ ಆಕ್ರಮಣ ಮಾಡಿದಾಗ ಭಾರತಕ್ಕೆ ಸಹಾಯ 4. ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸಮಾನ ಹಿತಾಸಕ್ತಿ
5. ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉತ್ತಮ ಬಾಂಧವ್ಯ 6. ವಿಶ್ವಸಂಸ್ಥೆಯನ್ನು ಬಲಪಡಿಸುವುದು.
7. ಬಾಹ್ಯಾಕಾಶ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ 8. ಜಾಗತಿಕ ಶಾಂತಿ ಕಾಪಾಡುವಲ್ಲಿ ಸಮಾನ ದೋರಣೆ

## ಅಧ್ಯಾಯ – 4.ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಮಾನವ ಹಕ್ಕುಗಳ ದಿನವನ್ನು ಯಾವ ದಿನದಂದು ಆಚರಿಸುತ್ತೇವೆ? **–ಡಿಸೆಂಬರ್ 10**
2. ಮಾನವ ಹಕ್ಕುಗಳ ಪರಿಕಲ್ಪನೆಯನ್ನು ವಿಶ್ವಸಂಸ್ಥೆ ಸಾಮಾನ್ಯ ಸಭೆ ಯಾವಾಗ ಅಂಗೀಕರಿಸಿತು? **– 1948ರ ಡಿಸೆಂಬರ್ 10**
3. ಭಾರತ ಸಂವಿಧಾನದಲ್ಲಿ ಯಾವ ವಿಧಿಗಳಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ? **–12 ರಿಂದ 35**ರವರೆಗಿನ ವಿಧಿ
4. ಶಸ್ತ್ರಾಸ್ತ್ರಗಳ ಪೈಪೋಟಿಯ ಬಗ್ಗೆ ಅಮೇರಿಕಾದ ಅಧ್ಯಕ್ಷ ಐಸಾನ್ ಹೋವರ್‌ನ ಉದ್ಗಾರವೇನು?
**ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಿಲ್ಲ. ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ** ಎಂದು ಉದ್ಗರಿಸಿದರು.

**II. ಈ ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ನೀಡಿದ ಪ್ರಮುಖ ಘಟನೆಗಳಾವುವು?**

1. 1776ರ ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮ, 2. 1789ರ ಫ್ರಾನ್ಸಿನ ಮಹಾಕ್ರಾಂತಿ, 3. 1917ರ ರಷ್ಯಾ ಕ್ರಾಂತಿ,
4. 20ನೇಯ ಶತಮಾನದ ಭಾರತ ಹಾಗೂ ಇತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ,

**2. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟಗಳನ್ನು ವಿವರಿಸಿ.**

1. ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ. 2. ಸಂವಿಧಾನದ 12-35ರವರೆಗಿನ ವಿಧಿಗಳಲ್ಲಿ ಮೂಲಭೂತ ಹಕ್ಕು
3. ವಿಶ್ವಸಂಸ್ಥೆ ಹಾಗೂ ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆ.
4. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ ರಚನೆ.

**3. ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳಾವವು?**
**ಅಥವಾ ಭಾರತವೂ ಸೇರಿದಂತೆ ಎಲ್ಲಾ ರಾಷ್ಟ್ರಗಳು ಪರಸ್ಪರ ನಿಶ್ಚಿತ ನಾಶದ ವಿರುದ್ಧ ಹೋರಾಡಬೇಕು. ಏಕೆ?**

1.'ಅಣ್ವಸ್ತ್ರ ಯುಗದಲ್ಲಿ ನಾವು ಯುದ್ಧವನ್ನು ಕೊನೆಗಾಣಿಸಬೇಕು, ಇಲ್ಲವಾದರೆ ಯುದ್ಧ ನಮ್ಮನ್ನು ಕೊನೆಗಾಣಿಸುತ್ತದೆ.'
2. ಇಂದು ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನವಾಗಿದೆ.
3. ಮನುಕುಲ ನಾಶವಾಗುವ ಭೀತಿ. 4. ಇದರಿಂದ ಶಸ್ತ್ರಾಸ್ತ್ರ ಜಮಾವಣೆ ತಪ್ಪಿಸುವುದು ಅವಶ್ಯಕವಾಗಿದೆ.

**4. ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸುವ ಸಲುವಾಗಿ ಪ್ರಪಂಚದಲ್ಲಿ ಆದ ಪ್ರಮುಖ ಒಪ್ಪಂದಗಳು ಯಾವುವು?**

1. 1963ರ ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದ 2. ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ.
3. ಫಲಿಕ ನಿಷೇಧ ಒಪ್ಪಂದ. 4. ಸಮಗ್ರ ಪರೀಕ್ಷಣ ನಿಷೇಧ ಒಪ್ಪಂದ 5. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ

**5. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವವು?/ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳಾವುವು?**

1. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿದಿವೆ. 2. ಔದ್ಯೋಗಿಕ, ತಂತ್ರಜ್ಞಾನ ಮತ್ತು ವಿಜ್ಞಾನದಲ್ಲಿ ಹಿಂದೆ ಉಳಿದಿವೆ.
3. ಜನರ ಜೀವನಮಟ್ಟ ಕೆಳಮಟ್ಟದಲ್ಲಿದೆ. 4. ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯ ಕಡಿಮೆ
5. ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳಲ್ಲಿ ಸಾಧನೆಗಳಾಗಿಲ್ಲ.

**6. ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡಿರುವ ಸುಧಾರಣಾ ಕ್ರಮಗಳಾವವು?**

1. ಯಾವುದೇ ಷರತ್ತುಗಳಿಲ್ಲದೆ ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡುವುದು
2. ಶ್ರೀಮಂತ ರಾಷ್ಟ್ರಗಳ ಬಂಡವಾಳವು ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನ.
3. ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆ ಪ್ರತಿಪಾದನೆ.

**7. ದ್ವಿತೀಯ ಮಹಾಯುದ್ಧ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?**

1. ಮಾನವ ಹಕ್ಕುಗಳು 2. ಶಸ್ತ್ರಾಸ್ತ್ರಗಳ ಪೈಪೋಟಿ 3. ಆರ್ಥಿಕ ಅಸಮಾನತೆ 4. ವರ್ಣಭೇಧ ನೀತಿ 5. ಭಯೋತ್ಪಾದಕತೆ

## ಅಧ್ಯಾಯ – 5.ಜಾಗತಿಕ ಸಂಸ್ಥೆಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ವಿಶ್ವಸಂಸ್ಥೆಯು ಪ್ರಾರಂಭವಾದ ವರ್ಷ – **ಅಕ್ಟೋಬರ್ 24, 1945.**
2. ವಿಶ್ವಸಂಸ್ಥೆಯ ಮುಖ್ಯ ಕಚೇರಿ ಯಾವ ನಗರದಲ್ಲಿದೆ? – **ನ್ಯೂಯಾರ್ಕ್**
3. **ವಿಶ್ವಸಂಸ್ಥೆಯ ಸಚಿವ ಸಂಪುಟ** ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ ಯಾವುದು? – **ಭದ್ರತಾ ಸಮಿತಿ.**
4. ಅಂತರಾಷ್ಟ್ರೀಯ ನ್ಯಾಯಾಲಯವು ಕೇಂದ್ರ ಕಛೇರಿ ಎಲ್ಲಿದೆ? – ನೆದರಲ್ಯಾಂಡಿನ **ಹೇಗ್** ನಗರದಲ್ಲಿ
5. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು – **ಆಂಟೋನಿಯೊ ಗಟೆರೆಸ್**(ಪೋರ್ಚುಗಲ್ ದೇಶ)
6. ಮೊದಲನೇ ಮಹಾಯುದ್ಧದ ನಂತರ ಜಾಗತಿಕ ಶಾಂತಿಗೆಂದು ಸ್ಥಾಪಿತವಾದ ಸಂಸ್ಥೆ– **ರಾಷ್ಟ್ರಗಳ ಸಂಘ (ಲೀಗ್ ಆಫ್ ನೇಶನ್ಸ್)**
7. ವಿಶ್ವಸಂಸ್ಥೆಯ ಸದಸ್ಯತ್ವವನ್ನು ಹೊಂದಿದ ರಾಷ್ಟ್ರಗಳ ಸಂಖ್ಯೆ – **193**
8. ಕಾಮನ್‌ವೆಲ್ತ್ ಒಕ್ಕೂಟದ ಕೇಂದ್ರ ಕಚೇರಿ ಎಲ್ಲಿದೆ?. – **ಲಂಡನ್**
9. ಸಾರ್ಕ್ ಕೇಂದ್ರ ಕಛೇರಿ ಎಲ್ಲಿದೆ? – **ನೇಪಾಳದ ಕಠ್ಮಂಡು.**

**10. ವಿಶ್ವಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಯಾವುದು?**
– ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ.

**11. ಯುನಿಸೆಫ್ ಸಂಸ್ಥೆ ಸ್ಥಾಪನೆಯ ಮೂಲ ಉದ್ದೇಶವೇನು?**
– ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರ ಒದಗಿಸುವುದು.

**12. ಸಾರ್ಕ್ ಸಂಸ್ಥೆಯ ಪ್ರಗತಿಗೆ ತೊಡಕಾಗಿರುವ ಸೂತ್ರ ಯಾವುದು?**

1. ಸದಸ್ಯ ರಾಷ್ಟ್ರಗಳ ನಡುವಿನ ಪರಸ್ಪರ ಅಪನಂಬಕೆ ಮತ್ತು ವಿವಾದಗಳು
2. ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟ್ರಗಳ ಅವಿರೋಧದ ನೆಲೆಯಲ್ಲೇ ಇರಬೇಕು ಎಂಬ ಸೂತ್ರ.

13. ವಿಟೋ ಅಧಿಕಾರ ಎಂದರೇನು? – **ನಿಷೇಧಾತ್ಮಕ ಮತ ಚಲಾವಣೆಯ ಅಧಿಕಾರ.**

**14. ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಏಕೆ?**
– ಭದ್ರತಾ ಸಮಿತಿಯು ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ.

**15. ದತ್ತಿ ಸಮಿತಿಯ ಕಾರ್ಯಕ್ಷೇತ್ರವು ಏಕೆ ಕಡಿಮೆಯಾಗುತ್ತಿದೆ?**
– ದತ್ತಿ ಸಮಿತಿಯ ಆಶ್ರಿತ ಪ್ರದೇಶಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ.

**16. ಭದ್ರತಾ ಸಮಿತಿಯಲ್ಲಿನ ಖಾಯಂ ಸದಸ್ಯ ರಾಷ್ಟ್ರಗಳುಯಾವವು? (ವಿಟೋ ಅಧಿಕಾರ ಹೊಂದಿರುವ ದೇಶಗಳಾವುವು?)**
– ಫ್ರಾನ್ಸ್, ಅಮೆರಿಕಾ, ಚೀನಾ, ಇಂಗ್ಲೆಂಡ್, ರಷ್ಯಾ **(FACER)**

**17. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲಿರುವ ವಿಷಯಗಳಾವವು?**
– * ಜನಸಂಖ್ಯಾ ಸ್ಫೋಟ ತಡೆಗಟ್ಟುವುದು, * ಪರಿಸರ ಸಂರಕ್ಷಣೆ, * ಹಸಿವು, * ಪೌಷ್ಟಿಕಾಂಶದ ಕೊರತೆ

**18. SAARCಅನ್ನು ವಿಸ್ತರಿಸಿ.**
- SAARC – South Asian Association of Regional co-operation.ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ

**19. ಸಾರ್ಕ ಸಂಸ್ಥೆಯ ಮೂಲ ಉದ್ದೇಶವೇನು?**

– ಪರಸ್ಪರ ಸಹಕಾರದೊಂದಿಗೆ ಆರ್ಥಿಕ ಸಂಬಂಧಗಳ ವೃದ್ಧಿ, ಸಾಮಾಜಿಕ ಪ್ರಗತಿ ಹಾಗೂ ಸಾಂಸ್ಕೃತಿಕ ಬೆಳವಣಿಗೆ.

**II. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ.**

– ಇಂಗ್ಲೆಂಡಿನ ವಿನ್‌ಸ್ಟನ್ ಚರ್ಚಿಲ್, ರಷ್ಯಾದ ಜೋಸೆಫ್ ಸ್ಟಾಲಿನ್ ಹಾಗೂ ಅಮೆರಿಕಾದ ಫ್ರಾಂಕ್ಲಿನ್ ಡಿ ರೂಸವೆಲ್ಟ್

**2. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿ ಮಾಡಿರಿ.**

1. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವುದು. 2. ವಿವಿಧ ರಾಷ್ಟ್ರಗಳಲ್ಲಿ ಸ್ನೇಹ ಸಂಬಂಧ ಬೆಳೆಸುವುದು.
3. ಮಾನವನ ಮೂಲಭೂತ ಹಕ್ಕುಗಳ ರಕ್ಷಣೆ.
4. ಅಂತರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ & ಮಾನವೀಯ ಸಮಸ್ಯೆಗಳಿಗೆ ಪರಿಹಾರ.
5. ಅಂತರಾಷ್ಟ್ರೀಯ ನ್ಯಾಯ ಹಾಗೂ ಒಪ್ಪಂದಗಳ ಷರತ್ತುಗಳಿಗೆ ಗೌರವ.
6. ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಣೆ.

**3. ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾವವು?**

1. ಸಾಮಾನ್ಯ ಸಭೆ 2. ಭದ್ರತಾ ಸಮಿತಿ 3. ಸಾಮಾಜಿಕ ಹಾಗೂ ಆರ್ಥಿಕ ಸಮಿತಿ
4. ಧರ್ಮದರ್ಶಿ ಸಮಿತಿ 5. ಸಚಿವಾಲಯ 6. ಅಂತರಾಷ್ಟ್ರೀಯ ನ್ಯಾಯಾಲಯ

**4. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ರಚನೆಯನ್ನು ವಿವರಿಸಿ.**

1. ಈ ಸಮಿತಿಯು 15 ಪ್ರತಿನಿಧಿಗಳಿಂದ ಕೂಡಿದ್ದು, 2. ಐದು ಖಾಯಂ ಸದಸ್ಯರು ಹಾಗೂ 10 ಹಂಗಾಮಿ ಸದಸ್ಯರು.
3. ಇಂಗ್ಲೆಂಡ್, ಅಮೇರಿಕಾ, ರಷ್ಯಾ, ಫ್ರಾನ್ಸ್, ಚೀನಾ ಖಾಯಂ ಸದಸ್ಯರು. 4. ಖಾಯಂ ಸದಸ್ಯರಿಗೆ **ವಿಟೋ** ಅಧಿಕಾರವಿದೆ.

**5. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳು ಯಾವುವು?**

1. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುತ್ತದೆ.
2. ಸಾಮಾನ್ಯ ಸಭೆಗೆ ನೂತನ ಸದಸ್ಯರ ಶಿಫಾರಸ್ಸು ಮಾಡುವ ಅಥವಾ ತಿರಸ್ಕರಿಸುವ ಆಧಿಕಾರ.
3. ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಅಭ್ಯರ್ಥಿ ಸೂಚಿಸುತ್ತದೆ 4. ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಆಯ್ಕೆ.

**6. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಕಾರ್ಯಗಳು ಯಾವುವು?**

1. ಪ್ರತಿ ವರ್ಷ ಸೆಪ್ಟಂಬರ್ ತಿಂಗಳಲ್ಲಿ ಅಧಿವೇಶನ. 2. ಪ್ರಮುಖ ವಿಷಯಗಳನ್ನು ಬಹುಮತದಿಂದ ನಿರ್ಧಾರ
3. ಆಯವ್ಯಯ ಪಟ್ಟಿಗೆ ಅನುಮೋದನೆ. 4. ಪ್ರತಿಯೊಂದು ರಾಷ್ಟ್ರದ ಚಂದಾಹಣ ನಿಗದಿ.

**7. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ.**

1. ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ 2. ಆರೋಗ್ಯ ಸಂರಕ್ಷಣೆ. 3. ಉತ್ತಮ ಜೀವನ ಮಟ್ಟ.
4. ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ. 5. ಕನಿಷ್ಠ ವೇತನ ಜಾರಿ. 6. ವಸತಿ ನಿರ್ಮಾಣ.

**8. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್‌ನ ಪಾತ್ರವನ್ನು ವಿಶ್ಲೇಷಿಸಿ.**

1. ಅಂತರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನ. 2. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ ಸಹಕಾರ.
3. ಆರ್ಥಿಕ ಸ್ಥಿರತೆಗೆ ಸಹಕಾರ. 4. ವಿದೇಶಿ ಪಾವತಿ ಸಮತೋಲನಕ್ಕೆ ಸಹಕಾರ
5. ವಿಶ್ವದ ಕೇಂದ್ರ ಬ್ಯಾಂಕು 6. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಸಹಕಾರ.

**9. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ.**

1. ಪ್ರಜಾತಂತ್ರವನ್ನು ಎತ್ತಿಹಿಡಿಯುವುದು. 2. ಸ್ವಾತಂತ್ರ್ಯದ ಸಂರಕ್ಷಣೆ 3. ಬಡತನ ನಿರ್ಮೂಲನೆಗೆ ಕ್ರಮ.
4. ವಿಶ್ವಶಾಂತಿಯನ್ನು ನೆಲೆಗೊಳಿಸುವುದು. 5. ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆಗೆ ಪ್ರೋತ್ಸಾಹ.

**10. ಆಹಾರ & ಕೃಷಿ ಸಂಸ್ಥೆ ಸ್ಥಾಪನೆಯ ಉದ್ದೇಶಗಳಾವುವು? ಅಥವಾ**
**ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಆಹಾರ ಮತ್ತು ಕೃಷಿ ಸಂಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ?**

1. ಪೌಷ್ಟಿಕ ಆಹಾರ ಒದಗಿಸುವದು. 2. ಹಸಿವೆಯಿಂದ ಜನಸಮುದಾಯದ ವಿಮುಕ್ತಿ.
3. ಕೃಷಿ ಕ್ಷೇತ್ರದ ಅಭಿವೃದ್ಧಿ. 4. ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆ.

**11. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಗಳಾವುವು?**

1. ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ರೋಗಗಳನ್ನು ತಡೆಗಟ್ಟುವುದು.
2. ಏಡ್ಸ್, ಕ್ಯಾನ್ಸರ್ ರೋಗಗಳಿಂದ ಮುಕ್ತಿಗೆ ಯತ್ನ. 3. ಸಿಡುಬು ರೋಗ ಸಂಪೂರ್ಣ ನಿವಾರಣೆ
4. ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ ಇದರ ಕಾರ್ಯ ಸೂಚಿ.

**12. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವವು?**

1. ಆರ್ಥಿಕ, ಸಾಮಾಜಿಕ ಹಾಗೂ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ.
2. ನಿರಾಶ್ರಿತರು, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆಗಳ ನಿವಾರಣೆ.
3. ಎಲ್ಲರಿಗೂ ಮಾನವ ಹಕ್ಕುಗಳು & ಮೂಲಭೂತ ಸ್ವಾತಂತ್ರ್ಯವನ್ನು ಒದಗಿಸುವುದು.
4. ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣದ ಬಗ್ಗೆ ಅಂತರಾಷ್ಟ್ರೀಯ ಸಮ್ಮೇಳನ ಸಂಘಟನೆ.
5. ILO, FAO & WHO ಸಂಸ್ಥೆಗಳ ಕಾರ್ಯಗಳನ್ನು ಸಮನ್ವಯಗೊಳಿಸುವುದು.

**13. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ'ಹೇಗೆ?**

**ಅಥವಾ ವಿಶ್ವ ಸಂಸ್ಥೆಯ ಸಾಧನೆಗಳಾವುವು?**

**ಅ) ಶಾಂತಿ ಸ್ಥಾಪನಾ ಕಾರ್ಯಗಳು:** * ಸೂಯೆಜ್ ಕಾಲುವೆ ಬಿಕ್ಕಟ್ಟು ನಿವಾರಣೆ. * ಇರಾಕ್ ಸಂಘರ್ಷ ಅಂತ್ಯ.
* ಕಾಶ್ಮೀರ ಸಮಸ್ಯೆ ನಿವಾರಣೆಗೆ ಪ್ರಯತ್ನ.* ಪ್ಯಾಲೆಸ್ಟನ್ ವಿಮೋಚನೆ. * ನಿಶ್ಯಸ್ತ್ರೀಕರಣ ಜಾರಿಗೆ.

**ಆ) ಆರ್ಥಿಕ ಮತ್ತು ಹಣಕಾಸಿನ ಸಾಧನೆಗಳು :** * ಸುಂಕ ಮತು ವ್ಯಾಪಾರದ ಸಾಮಾನ್ಯ ಒಪ್ಪಂದ.
* ವಿಶ್ವ ಸಂಸ್ಥೆಯ ಪ್ರಗತಿ ಯೋಜನೆ. * ವಿಶ್ವ ಬ್ಯಾಂಕ್ ಮತ್ತು ಐ.ಎಮ್.ಎಫ್ ನೊಂದಿಗೆ ಉತ್ತಮ ಸಾಧನೆ.

**ಇ) ಸಾಮಾಜಿಕ ಸಾಧನೆಗಳು :** * 1948ರ ಮಾನವ ಹಕ್ಕುಗಳ ಘೋಷಣೆ. * ವರ್ಣಬೇಧನೀತಿ ನಿರ್ಮೂಲನೆ.
* 1948ರ ಮಾನವ ಹಕ್ಕುಗಳ ಘೋಷಣೆ. * ಸಾಮ್ರಾಜ್ಯ ಮತ್ತು ವಸಾಹತುಶಾಹಿತ್ವ ಕೊನೆಗೊಳಿಸುವುದು.

**14. ಸಾರ್ಕ್ ಸಂಸ್ಥೆಯಲ್ಲಿ ಇರುವ ಸದಸ್ಯ ರಾಷ್ಟ್ರಗಳು ಯಾವುವು?**

– ಭಾರತ, ಪಾಕಿಸ್ತಾನ, ಅಫಘಾನಿಸ್ತಾನ ನೇಪಾಳ, ಮಾಲ್ಡೀವ್ಸ್, ಬಾಂಗ್ಲಾದೇಶ, ಭೂತಾನ್, ಶ್ರೀಲಂಕಾ. (A PIN MBBS)

**15. ಯುರೋಪಿಯನ್ ಯೂನಿಯನ್‌ನ ತನ್ನ ಸದಸ್ಯ ರಾಷ್ಟ್ರಗಳಿಗೆ ನೀಡಿರುವ ಅವಕಾಶಗಳಾವುವು?**

1. ಸಮಾನ ಏಕ ಮಾರುಕಟ್ಟೆ, 2. ಒಂದೇ ಚಲಾವಣೆಯ ಕರೆನ್ಸಿ, 3. ಸಮಾನ ಕೃಷಿ ಹಾಗೂ ವ್ಯಾಪಾರ ಧೋರಣೆ.

| ಸಂಸ್ಥೆ | ವಿಶೇಷತೆ/ಉದ್ದೇಶ | ಕಾರ್ಯಗಳು/ಸಾಧನೆ | ಕೇಂದ್ರ ಕಛೇರಿ |
|---|---|---|---|
| ಅಂತರಾಷ್ಟ್ರೀಯ ನ್ಯಾಯಾಲಯ | ನ್ಯಾಯಾಧೀಶರ ಸಂಖ್ಯೆ: 15<br>ಅಧಿಕಾರಾವಧಿ: 9ವರ್ಷ | | ನೆದರ್‌ಲ್ಯಾಂಡ್‌ನ ಹೇಗ್ |
| ಸಚಿವಾಲಯ | | ದಿನನಿತ್ಯದ ಆಡಳಿತಾತ್ಮಕ ಕಾರ್ಯ ಯೋಜನೆ ಹಾಗೂ ಸಾಂಸ್ಥಿಕ ಕಾರ್ಯ | ನ್ಯೂಯಾರ್ಕ್ |
| ಆಹಾರ ಮತ್ತು ಕೃಷಿ ಸಂಸ್ಥೆ | ಜಗತ್ತಿನ ಹಸಿವು, ಬಡತನ ಹಾಗೂ ಅಪೌಷ್ಟಿಕತೆ ವಿರುದ್ಧ ಹೋರಾಟ | | ರೋಮ್ |
| ವಿಶ್ವ ಆರೋಗ್ಯ ಸಂಸ್ಥೆ | ಮಾನವರ ಆರೋಗ್ಯ ಸುಧಾರಣೆ | ಸಿಡುಬು ರೋಗದ ನಿವಾರಣೆ | ಜಿನೇವಾ |
| ಯುನೆಸ್ಕೋ | ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ ಸಂಸ್ಕೃತಿಗೆ ಪ್ರೋತ್ಸಾಹ | | ಪ್ಯಾರಿಸ್ |
| ಯೂನಿಸೆಫ್ | ಮಕ್ಕಳ ಕ್ಷೇಮಾಭಿವೃದ್ಧಿ<br>1965ರಲ್ಲಿ ನೋಬೆಲ್ ಪ್ರಶಸ್ತಿ ಪಡೆದಿದೆ. | ಶುಭಾಶಯ ಪತ್ರಗಳ ಮಾರಾಟದ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ಬಳಸುವುದು. | |
| ಐ ಎಮ್ ಎಫ್ | ಆರ್ಥಿಕ ಸಮಸ್ಯೆಗಳಿಗೆ ಪರಿಹಾರ & ವಿಶ್ವ ವಾಣಿಜ್ಯ ಬೆಳವಣಿಗೆ | ವಿವಿಧ ದೇಶಗಳ ಕೇಂದ್ರ ಬ್ಯಾಂಕುಗಳಿಗೆ ಕೇಂದ್ರ ಬ್ಯಾಂಕು. | ವಾಷಿಂಗಟನ್ |
| ಐ ಬಿ ಆರ್ ಡಿ | ವಿಶ್ವಬ್ಯಾಂಕು, 2ನೇ ಮಹಾಯುದ್ಧದ ನಂತರ ಆರ್ಥಿಕ ಪುನಶ್ಚೇತನಕ್ಕಾಗಿ. | | ವಾಷಿಂಗಟನ್ |
| ಅಂತರಾಷ್ಟ್ರೀಯ ಕಾರ್ಮಿಕ ಸಂಘ | ಕಾರ್ಮಿಕರ ಕ್ಷೇಮಾಭಿವೃದ್ಧಿ | | ಜಿನೇವಾ |

## ಸಮಾಜಶಾಸ್ತ್ರ

## ಅಧ್ಯಾಯ – 1.ಸಾಮಾಜಿಕ ಸ್ತರವಿನ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾರತದ ಸಂವಿಧಾನದ 86ನೇ ತಿದ್ದುಪಡಿಯ ಮಹತ್ವವೇನು?**

– 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು.

2. **ಸಾಮಾಜಿಕ ಸ್ತರವಿನ್ಯಾಸಎಂದರೇನು?**–ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆ.

3. **ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ**ಈ ಮಾತನ್ನು ಹೇಳಿದವರು ಯಾರು? **– ಮಹಾತ್ಮಾ ಗಾಂಧೀಜಿ**

4. **ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು** ಎಂದು ಪ್ರತಿಪಾದಿಸಿದವರು ಯಾರು? **– ಬಿ.ಆರ್. ಅಂಬೇಡ್ಕರ್**

5. **ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು** ಏನೆಂದು ತಿದ್ದುಪಡಿ ಮಾಡಲಾಗಿದೆ? **– ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ**

**II. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಸಾಮಾಜಿಕ ಅಸಮಾನತೆಗೆ ಕಾರಣಗಳಾವುವು?**

1. ಆದಾಯದ ಮೂಲಗಳು, 2. ಶಿಕ್ಷಣ ಮತ್ತು ವೃತ್ತಿ ಅವಕಾಶಗಳು,
3. ಆರೋಗ್ಯ ಸೌಲಭ್ಯಗಳು 4. ಸಾಮಾಜಿಕ ನ್ಯಾಯಗಳ ಕಡೆಗಣನೆ
5. ರಾಜಕೀಯ ಪ್ರತಿನಿಧಿತ್ವ ಮತ್ತು ಭಾಗವಹಿಸುವಿಕೆ ನಿರಾಕರಣೆ. 6. ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆಗಳ ನಿರಾಕರಣೆ.

**2. ಲಿಂಗತ್ವ ಅಸಮಾನತೆ ಹೇಗೆ ಉಂಟಾಗಿದೆ?**

1. ಮಹಿಳೆಯನ್ನು ಸಮಾಜ ಪರಿಗಣಿಸುವ ರೀತಿ 2. ಮಹಿಳೆಗೆ ಶಿಕಣ್ಣದ ನಿರಾಕರಣೆ 3. ಶಾಲಾ ಭಾಗವಹಿಸುವಿಕೆಯಲ್ಲಿ,
3. ಮನೆಗಳಲ್ಲಿ ಗಂಡುಮಕ್ಕಳಿಗೆ ಹೆಚ್ಚಿನ ಆದ್ಯತೆ. 5. ಆಹಾರ ಮತ್ತು ಆರೋಗ್ಯ ಸೌಲಭ್ಯ ಪಡೆಯುವಲ್ಲಿ ಲಿಂಗ ಅಸಮಾನತೆ.

**3. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ? /ಅಸ್ಪೃಶ್ಯತೆಯ ಸಮಸ್ಯೆಗಳು ಯಾವುವು?**

1. ಅಸ್ಪೃಶ್ಯತೆಯು ಮುಟ್ಟಬಾರದ, ಮುಟ್ಟಲಾಗದ ಎಂಬ ಅರ್ಥದಲ್ಲಿ ಬಳಕೆ.
2. ಸಾಮಾಜಿಕ, ಆರ್ಥಿಕ, ಅಸಮಾನತೆಯ ಮೂಲದಿಂದ ರೂಪಿತಗೊಂಡದ್ದು.
3. ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ 4. ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು
5. ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ 6. ರಾಜಕೀಯ ಭಾಗವಹಿಸುವಿಕೆ ನಿರಾಕರಣೆ

**4. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳಾವುವು?**

1. ಸಾಮಾಜಿಕವಾದದ್ದು 2. ಸರ್ವವ್ಯಾಪಕವಾದದ್ದು 3. ಪುರಾತನವಾದದ್ದು 4. ವಿವಿಧ ರೂಪಗಳಲ್ಲಿದೆ

**5. ಸಾಮಾಜಿಕ ಸ್ತರವಿನ್ಯಾಸದ ಪ್ರಮುಖ ರೂಪಗಳು ಯಾವುವು?**

1. ಆದಿವಾಸಿ ಸಮಾಜ 2. ಗುಲಾಮಗಿರಿ 3. ಎಸ್ಟೇಟ್ಸ್ ಪದ್ಧತಿ 4. ವರ್ಣವ್ಯವಸ್ಥೆ 5. ಜಾತಿವ್ಯವಸ್ಥೆ

**6. ಶೈಕ್ಷಣಿಕ ಸಮಾನತೆಗಾಗಿ/ಅನಕ್ಷರತೆ ಹೋಗಲಾಡಿಸಲು ಕೈಗೊಂಡಿರುವ ಸಂವಿಧಾನಾತ್ಮ ಕ್ರಮಗಳನ್ನು ತಿಳಿಸಿ.**

1. 21'ಎ' ವಿಧಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮೂಲಭೂತ ಹಕ್ಕು (6– 14 ವರ್ಷ)
2. 45ನೇ ವಿಧಿ 6 ವರ್ಷದ ಒಳಗಿನ ಎಲ್ಲಾ ಮಕ್ಕಳ ಶೈಶವಾವಸ್ಥೆಯ ರಕ್ಷಣೆ ಮತ್ತು ಶೈಕ್ಷಣಿಕ ಸೌಲಭ್ಯ.
3. 30ನೇ ವಿಧಿ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗೆ ಅವಕಾಶ ನೀಡಿದೆ
4. 46ನೇ ವಿಧಿ ಸರ್ಕಾರಗಳು ಹಿಂದುಳಿದ, ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ.
5. 29ನೇ ವಿಧಿ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳ ರಕ್ಷಣೆ.
6. 39ನೇ ವಿಧಿ ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿ ಅವಕಾಶ

**7. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವವು?**

1. 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯ ನಿಷೇದ. 2. ಮತದಾನ ಹಾಗೂ ಸಮಾನತೆಯ ಹಕ್ಕನ್ನು ಎಲ್ಲರಿಗೂ ನೀಡಿದೆ.
3. ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಉದ್ಯೋಗದಲ್ಲಿ ಮೀಸಲಾತಿ. 4. 1955ರಲ್ಲಿ **ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ** ಜಾರಿ.
5. 1976ರಲ್ಲಿ **ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ** ಎಂದು ಮಾರ್ಪಾಡು.
6. 1989ರಲ್ಲಿ ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿ ರಾಜ್ಯ ಸರ್ಕಾರಗಳಿಗೆ.

## ಅಧ್ಯಾಯ– 2.ದುಡಿಮೆ

### I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಶ್ರಮ ವಿಭಜನೆಯು ಯಾವುದಕ್ಕೆ ಕಾರಣವಾಗಿದೆ? – **ವಿಶೇಷ ಪರಿಣತಿ**

**2. ಶ್ರಮ ವಿಭಜನೆ ಎಂದರೇನು?**

– ಒಂದು ಕೆಲಸವನ್ನು ಜನರು ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ಪರಿಣತಿ, ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೆ.

**3. ಪ್ಲೇಟೋ ಅವರು ಬರೆದ ಗ್ರಂಥ ಯಾವುದು? – ದಿ ರಿಪಬ್ಲಿಕ್**

4. **ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ** ಎಂದು ಹೇಳಿದವರು ಯಾರು? **–ಕಾರ್ಲ್‌ಮಾರ್ಕ್ಸ್**

5. **ವಿಶೇಷ ಪರಿಣತಿ ಎಂದರೇನು?**– ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ, ತರಬೇತಿ ಅಥವಾ ಕೌಶಲ್ಯ ಗಳಿಕೆ.

**6. ದುಡಿಮೆ ಎಂದರೇನು?**

– ಒಬ್ಬ ವ್ಯಕ್ತಿ ದೈಹಿಕ ಅಥವಾ ಬೌದ್ಧಿಕ ಪರಿಶ್ರಮದಿಂದ ಆರ್ಥಿಕ ಅಥವಾ ವಸ್ತುರೂಪದ ಪ್ರತಿಫಲ ಪಡೆಯುವುದು

**7. ದುಡಿಮೆಯಲ್ಲಿ ಅಸಮಾನತೆ ಎಂದರೇನು?**–ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದುಡಿಮೆ.

**8. ಸಾಮಾಜಿಕ ಭದ್ರತೆ ಎಂದರೇನು?**

– ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ವಸತಿ, ಆರೋಗ್ಯ, ಆಹಾರ, ಕುಡಿಯುವ ನೀರು, ದುಡಿಯುವ ಸಮಾನ ಅವಕಾಶ, ಸಮಾನತೆಯನ್ನು ಒದಗಿಸುವುದು.

### II. ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿರಿ.

**1. ದುಡಿಮೆಯ ತಾರತಮ್ಯತೆಯನ್ನು ವಿವರಿಸಿ.**

1. ಸಮಾನ ಕೆಲಸಕ್ಕೆ ಸಮಾನ ವೇತನದ ನಿಯಮಕ್ಕೆ ವಿರುದ್ಧವಾದ ದುಡಿಮೆ.
2. ಮಹಿಳೆ ಮತ್ತು ಪುರುಷರಿಬ್ಬರೂ ಒಂದೇ ಕೆಲಸ ನಿರ್ವಹಿಸಿದರೂ ಸಂಭಾವನೆ ಸಮವಾಗಿಲ್ಲ.
3. ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಕ್ಕೆ ಹೆಚ್ಚಿನ ಸಂಭಾವನೆ. 4. ಮಹಿಳೆಯರಿಗೆ ಕಡಿಮೆ ಸಂಭಾವನೆ.
5. ಕೃಷಿ ಕುಟುಂಬಗಳಲ್ಲಿ ಹೆಚ್ಚು ಕಂಡುಬರುತ್ತದೆ. 6. ಓದಿದವರು ಮತ್ತು ಓದದವರ ನಡುವೆ ಅಸಮಾನತೆ ಇದೆ.

**2. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?**

1. ನಿಗದಿತ ಕೆಲಸ, ವೇತನ, ಸೌಲಭ್ಯಗಳಾಗಲಿ ಇರುವುದಿಲ್ಲ. 2. ಕನಿಷ್ಠ ವೇತನವೂ ಸಿಗುವುದಿಲ್ಲ. 3. ವಲಸೆಯ ಸಮಸ್ಯೆ
4. ಸಾಮಾಜಿಕ ಅಭದ್ರತೆ 5. ಕಾನೂನಿನ ಚೌಕಟ್ಟು ಇಲ್ಲದಿರುವುದು 6. ದೈಹಿಕ ಮತ್ತು ಮಾನಸಿಕ ದೌರ್ಜನ್ಯ

**3 ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?**

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| 1. ಕಾನೂನಿನ ಚೌಕಟ್ಟಿನಲ್ಲಿ ದುಡಿಮೆ. | 1. ಕಾನೂನಿನ ಚೌಕಟ್ಟು ಇಲ್ಲ |
| 2. ನಿಗದಿತ ಕೆಲಸ, ಉದ್ಯೋಗ ಭರವಸೆ, ವೇತನ ಇದೆ | 2. ನಿಗದಿತ ಕೆಲಸ, ವೇತನ, ಉದ್ಯೋಗ ಭರವಸೆ ಇಲ್ಲ |
| 3. ಉದ್ಯೋಗ ಭದ್ರತೆ, ಕಾನೂನಿನ ಚೌಕಟ್ಟು. | 3. ಉದ್ಯೋಗ ಭದ್ರತೆ ಇಲ್ಲ, ಕಾನೂನಿನ ಚೌಕಟ್ಟುಗಳಿಲ್ಲ |
| 4. ಕನಿಷ್ಠ ವೇತನ ಕಾಯಿದೆ, ಕಾರ್ಖಾನೆ ಕಾಯಿದೆಗಳಿವೆ | 4. ಯಾವುದೇ ಕಾಯ್ದೆಗಳಿಲ್ಲ |
| 5. ವೈದ್ಯಕೀಯ ಸೌಲಭ್ಯಗಳು & ಭತ್ಯೆಗಳಿವೆ | 5. ವೈದ್ಯಕೀಯ ಸೌಲಭ್ಯ, ವಿಶೇಷ ಭತ್ಯೆಗಳಿಲ್ಲ |
| 6. ಶಾಲೆಗಳು, ಆಸ್ಪತ್ರೆಗಳು, ಕೈಗಾರಿಕೆಗಳು, ಸೈನ್ಯ, | 6. ವಾಹನ ರಿಪೇರಿ, ತರಕಾರಿ, ಮೀನು ಮಾರುವುದು, |

**4. ಸಂಭಾವನೆ ಸಹಿತ ದುಡಿಮೆ ಮತ್ತು ಸಂಭಾವನೆ ರಹಿತ ದುಡಿಮೆಯ ವ್ಯತ್ಯಾಸ ತಿಳಿಸಿ.**

| ಸಂಭಾವನೆ ಸಹಿತ ದುಡಿಮೆ | ಸಂಭಾವನೆ ರಹಿತ ದುಡಿಮೆ |
|---|---|
| 1. ಸಂಭಾವನೆ/ಭೌತಿಕ ರೂಪದ ಪ್ರತಿಫಲವಿರುವ ದುಡಿಮೆ | 1. ಸಂಭಾವನೆ /ಭೌತಿಕ ರೂಪದ ಪ್ರತಿಫಲವಿಲ್ಲದ ದುಡಿಮೆ |
| 2. ಹೊಲ ಗದ್ದೆಗಳಲ್ಲಿ ದುಡಿಮೆ, ವ್ಯಾಪಾರ, ವ್ಯವಹಾರ | 2. ಕುಟುಂಬದೊಳಗೆ ಸದಸ್ಯರ ದುಡಿಮೆ, ಸ್ವಯಂ ಪ್ರೇರಣೆಯಿಂದ, |
| 3. ಕಾರ್ಖಾನೆಯಲ್ಲಿ ದುಡಿಮೆ. | 3. ಒತ್ತಾಯ ಪೂರ್ವಕವಾಗಿ ದುಡಿಮೆ, ಪ್ರೀತಿಯಿಂದ ದುಡಿಮೆ |
| 4. ಶಿಕ್ಷಕರು, ಕಟ್ಟಡ ನಿರ್ಮಾಣ, ವಾಹನ ರಿಪೇರಿ | 4. ಸ್ಕೌಟ್ & ಗೈಡ್ಸ್, ಎನ್.ಎಸ್.ಎಸ್‌ಗಳಲ್ಲಿ ವಿದ್ಯಾರ್ಥಿಗಳ ಶ್ರಮ |
| | 5. ಶೈಕ್ಷಣಿಕ ಕೋರ್ಸ್‌ನ ತರಬೇತಿ ಅವಧಿ. |

**5. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ.**

1. ವಸತಿ ಸಮಸ್ಯೆ, 2. ಆರೋಗ್ಯ ಸಮಸ್ಯೆ, 3. ಆಹಾರ ಸಮಸ್ಯೆ,
4. ಶುದ್ಧ ಕುಡಿಯುವ ನೀರಿನ ಸಮಸ್ಯೆ, 5. ದುಡಿಯುವ ಸಮಾನವಕಾಶವಿಲ್ಲ, 6. ಸಮಾನತೆ ಸಮಸ್ಯೆ.

## ಅಧ್ಯಾಯ-03. ಸಾಮಾಜಿಕ ಚಳವಳಿಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಪರಿಸರ ಚಳವಳಿ ಎಂದರೇನು?** – ಪರಿಸರ ಸಂರಕ್ಷಣೆಗಾಗಿ ವೈಜ್ಞಾನಿಕವಾಗಿ ನಡೆದ ಚಳವಳಿ.

2. ಕೈಗಾ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದವರು ಯಾರು? **– ಡಾ. ಶಿವರಾಮ ಕಾರಂತರು**

3. ಮಹಿಳಾ ಚಳವಳಿ ಎಂದರೇನು? **–ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಹೋರಾಟ.**

**4. ಸಾಮಾಜಿಕ ಚಳವಳಿ ಎಂದರೇನು?** –ಮಾನವ ಸಮಾಜದ ಬದಲಾವಣೆ ಮತ್ತು ರೂಪಾಂತರಗಳಿಗೆ ನಡೆಯುವ ಹೋರಾಟ.

**5. ಸಮೂಹ ವರ್ತನೆ ಎಂದರೇನು?**

– ಜನರು ಆಕಸ್ಮಿಕ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಸುವ ಆಲೋಚನೆ, ಭಾವನೆ ಹಾಗೂ ವರ್ತನೆ.

6. ಜನಮಂದೆ ಎಂದರೇನು?**–ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿ.**

**7. ದೊಂಬಿ/ಗಲಭೆ ಎಂದರೇನು?** – ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆ.

**8. ಕೈಗಾ ವಿರೋಧಿ ಚಳವಳಿಯ ಉದ್ದೇಶವೇನು?**

– ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ತಡೆಯಲು ಹಾಗೂ ಜೀವ ಪ್ರಭೇದಗಳ ರಕ್ಷಣೆಗಾಗಿ.

9. ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆ ಮಾಡಿದವರು ಯಾರು? **– ಪ್ರೊ. ಎಂ.ಡಿ. ನಂಜುಂಡಸ್ವಾಮಿ**

10. 1864ರಲ್ಲಿಲಂಡನ್‌ನಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕರ ಸಂಘಟನೆ ಯಾವುದು?

**– ದಿ ಇಂಟರ್‌ನ್ಯಾಷಿನಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಷನ್**

**11. ಕಾರ್ಮಿಕ ಚಳುವಳಿ ಎಂದರೇನು?**

– ಉತ್ತಮ ದುಡಿಯುವ ವಾತಾವರಣ, ಗೌರವಯುತ ನಡವಳಿಕೆ, ಕಾರ್ಮಿಕ ಮತ್ತು ಉದ್ಯೋಗ ಕಾನೂನುಗಳ ಅನುಷ್ಠಾನಕ್ಕೆ ಸರ್ಕಾರಗಳನ್ನುಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಚಳವಳಿ.

12. ಅಸ್ಪೃಶ್ಯತೆ ಆಚರಣೆ ವಿರೋಧಿ ಚಳುವಳಿ ಎಂದರೇನು? **– ಜಾತಿ ಆಧಾರಿತ ಸಾಮಾಜಿಕ ದೌರ್ಜನ್ಯದ ವಿರುದ್ಧ ನಡೆದ ಚಳವಳಿ**

**13. 1980ರ ಜೂನ್ ತಿಂಗಳಲ್ಲಿ ಧಾರವಾಡ ಜಿಲ್ಲೆಯ ನರಗುಂದದಲ್ಲಿ ರೈತ ಬಂಡಾಯ ನಡೆಯಲು ಕಾರಣವೇನು?**

– ರೈತರು ಮತ್ತು ಜನರ ಮೇಲೆ ನಡೆದ ಲಾಠೀ ಚಾರ್ಜು ಮತ್ತು ಗೋಲಿಬಾರ್ ಖಂಡಿಸಿ.

**14. ಜ್ಯೋತಿರಾವ್ ಪುಲೆಯವರು ಆರಂಭಿಸಿದ ಅಸ್ಪೃಶ್ಯತೆ ಆಚರಣೆ ವಿರೋಧಿ ಚಳುವಳಿ ಉದ್ದೇಶವೇನು?**

– ಚಾತುರ್ವರ್ಣ ಆಧಾರಿತ ಮಾನವ ವಿರೋಧಿ ಆಚರಣೆ ಮತ್ತು ಅವುಗಳ ಪ್ರಾಬಲ್ಯ ತಡೆ.

**15. ಚಿಪ್ಕೋ ಚಳವಳಿಯ ಉದ್ದೇಶವೇನು?** – ಅರಣ್ಯ ನಾಶ ಮತ್ತು ಪರಿಸರ ನಾಶ ತಡೆಯುವುದು.

**II. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಸಮೂಹ ವರ್ತನೆಯ ಮಾದರಿಗಳಾವುವು?**

* ಜನಮಂದೆ, * ದೊಂಬಿ, * ಸಾಮಾಜಿಕ ಆಂದೋಲನ, * ಸಾರ್ವಜನಿಕ ಅಭಿಪ್ರಾಯ, * ಕ್ರಾಂತಿ

**2. ಪರಿಸರ ಸಂರಕ್ಷಣೆಗಾಗಿ ನಡೆದ ಚಳುವಳಿಗಳನ್ನು ಪಟ್ಟಿಮಾಡಿ.**

1. ಚಿಪ್ಕೋ ಚಳವಳಿ 2. ಕರ್ನಾಟಕದ ಅಪ್ಪಿಕೋ ಚಳವಳಿ 3. ನರ್ಮದಾ ಬಚಾವೋ ಆಂದೋಲನ
4. ಮೌನ ಕಣಿವೆ ಆಂದೋಲನ 5. ಕರ್ನಾಟಕ ಕರಾವಳಿ ತೀರದ ಪರಿಸರ ಚಳವಳಿ 6.ಕೈಗಾ ಅಣು ಸ್ಥಾವರ ವಿರೋಧಿ ಚಳವಳಿ

**3. ದೊಂಬಿಯ ಪ್ರಮುಖ ಲಕಣ್ಷಗಳಾವುವು?**

1. ಕನಿಷ್ಠ ಮಟ್ಟದ ಉದ್ದೇಶ ಇರುವುದಿಲ್ಲ 2. ಏಕತೆ ಇರುವುದಿಲ್ಲ 3. ಸಿಕ್ಕಿದ್ದೆಲ್ಲವನ್ನು ಹಾಳುಮಾಡುತ್ತಾರೆ
4. ಗೊಂದಲವನ್ನು ಸೃಷ್ಟಿಮಾಡುತ್ತಾರೆ 5. ಆಸ್ತಿ ಪಾಸ್ತಿಗೆ ಹಾನಿ. 6. ಕಾನೂನು ಸುವ್ಯವಸ್ಥೆಗೆ ಸವಾಲು.

**4. ಕರ್ನಾಟಕದ ಅಪ್ಪಿಕೋ ಚಳವಳಿಯನ್ನು ವಿವರಿಸಿ.**

* ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರ ಚಳುವಳಿ.
* ಗುತ್ತಿಗೆದಾರರು ಮರ ಕಡಿಯಲು ಬಂದಾಗ ರೈತರು ಮರಗಳನ್ನು ಅಪ್ಪಿಕೊಂಡು ಪ್ರತಿಭಟನೆ.
* ಮರಗಳ ಕಳ್ಳಸಾಗಾಣಿಕೆ ತಪ್ಪಿಸುವುದು, * ಗಿಡಮರ ಬೆಳೆಸುವುದು ಹಾಗೂ ಪರಿಸರದ ಮಹತ್ವದ ಬಗ್ಗೆ ಜನರಿಗೆ ಅರಿವು.

**5. ನರ್ಮದಾ ಬಚಾವೋ ಆಂದೋಲನವನ್ನು ವಿವರಿಸಿ.**

* ಗುಜರಾತ್ ಸರ್ಕಾರವು ನರ್ಮದಾ ನದಿಗೆ ಅಣೆಕಟ್ಟನ್ನು ನಿರ್ಮಾಣ ಮಾಡಲು ನಿರ್ಧರಿಸಿತು.
* ಅರಣ್ಯ ನಾಶ, ಪರಿಸರ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆಂದು ಮೇಧ ಪಾಟ್ಕರ್ ನೇತೃತ್ವದಲ್ಲಿ ಚಳುವಳಿ.

**6. ಮೌನ ಕಣಿವೆ ಆಂದೋಲನವನ್ನು ವಿವರಿಸಿ.**

1. ಅಣೆಕಟ್ಟು ನಿರ್ಮಾಣದಿಂದ ಪರಿಸರ ನಾಶ, ಜೀವ ಪ್ರಭೇದಗಳಿಗೆ ತೊಂದರೆಯಾಗುತ್ತದೆ ಎಂಬ ಉದ್ದೇಶ
2. ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಮತ್ತು ವನ್ಯಮೃಗ ಆಸಕ್ತರಿಂದ ಚಳವಳಿ.

**7. ಕರ್ನಾಟಕ ರಾಜ್ಯ ರೈತ ಸಂಘದ ಬೇಡಿಕೆಗಳು ಯಾವುವು?**

1. ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ. 2. ಗ್ರಾಮಗಳಿಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ. 3. ಲೆವಿ ಪದ್ಧತಿ ನಿಲ್ಲಬೇಕು
4. ರೈತರ ಸ್ವಾಭಿಮಾನಕ್ಕೆ, ಸ್ವಾತಂತ್ರಕ್ಕೆ ಧಕ್ಕೆತರುವ ಜಪ್ತಿ ನಿಲ್ಲಬೇಕು, 5. ನೈಸರ್ಗಿಕ ಸಂಪತ್ತಿನಲ್ಲಿ ಸ್ಥಳೀಯ ಗ್ರಾಮಗಳಿಗೆ ಪಾಲು.

**8. ಡಿ. ದೇವರಾಜ ಅರಸುರವರು ಜಾರಿಗೆ ತಂದ ಸಾಮಾಜಿಕ ಪರಿವರ್ತನಾ ಕಾರ್ಯಕ್ರಮಗಳಾವುವು?**

1. ಸಾಮಾಜಿಕ ದುರ್ಬಲರ ವಿಮೋಚನೆಗೆ ಶಾಸನಗಳ ಜಾರಿ. 2. ಗೇಣಿದಾರರನ್ನು ಭೂಮಾಲಿಕರ ಹಿಡಿತದಿಂದ ಬಿಡುಗಡೆ
3. ಜೀತಪದ್ಧತಿ ರದ್ಧತಿ, 4. ಬಡವರ ಋಣಪರಿಹಾರ 5. ತಲೆಯ ಮೇಲೆ ಮಲ ಹೊರುವ ಪದ್ಧತಿಯ ನಿರ್ಮೂಲನೆ.

**9. ಮದ್ಯಪಾನ ನಿಷೇಧ ಚಳುವಳಿಯನ್ನು ವಿವರಿಸಿ.**

1. ಮಹಿಳೆಯರು ರೂಪಿಸಿದ ಚಳುವಳಿ. 2. ಚಿಪ್ಕೊ ಚಳವಳಿಯ ಭಾಗವಾಗಿ ರೂಪುಗೊಂಡಿತು.
3. ಕರ್ನಾಟಕದಲ್ಲಿ ಪರಿಸರ ಚಳವಳಿಯ ಭಾಗ. 4. ಕುಸುಮಾ ಸೊರಬ ಸೇರಿದಂತೆ ಹಲವರ ಜೀವದಾನ.
5. ಹಾಸನ, ಕೋಲಾರ, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಮಹಿಳೆಯರಿಂದ ಚಳವಳಿ.

**10. ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯ ಚರಿತ್ರೆಯನ್ನು ವಿವರಿಸಿ. ಅಥವಾ**
**ಅಸ್ಪೃಶ್ಯತೆ ಆಚರಣೆ ವಿರೋಧಿ ಚಳವಳಿಯು ನಡೆದು ಬಂದ ಹಾದಿಯನ್ನು ತಿಳಿಸಿ**

1. 19ನೇ ಶತಮಾನದಿಂದ ಪ್ರಾರಂಭ. 2. ಮಹಾರಾಷ್ಟ್ರದಲ್ಲಿ ಜ್ಯೋತಿರಾವ್ ಪುಲೆಯವರಿಂದ ಪ್ರಾರಂಭ.
3. 1917ರಲ್ಲಿ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ಹುಟ್ಟಿಕೊಂಡಿತು.
4. ಡಾ. ಬಿ.ಆರ್.ಅಂಬೇಡ್ಕರ್‌ರವರ ಹೋರಾಟದೊಂದಿಗೆ ಈ ಚಳವಳಿ ತೀವ್ರ ಸ್ವರೂಪ ಪಡೆಯಿತು.
5. ಅಂಬೇಡ್ಕರ್‌ರವರಿಂದ **'ಮೂಕ ನಾಯಕ'** ಪತ್ರಿಕೆ ಪ್ರಾರಂಭ 6. ಗಾಂಧೀಜಿಯಿಂದ ಅಸ್ಪೃಶ್ಯತೆ ಆಚರಣೆಗೆ ವಿರೋಧ

## ಅಧ್ಯಾಯ– 4. ಸಾಮಾಜಿಕ ಸಮಸ್ಯೆಗಳು

**I.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸಂವಿಧಾನದ ಎಷ್ಟನೇ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ?**– 24ನೇ** ವಿಧಿ
2. **ಬಾಲ್ಯವಿವಾಹ ನಿಷೇಧ ಕಾಯಿದೆ**ಜಾರಿಗೆ ಬಂದ ವರ್ಷ ಯಾವುದು? **– 2006**
3. ಬಾಲಕಾರ್ಮಿಕ ದುಡಿಮೆ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು? **– 1986**
4. **ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ** ಎಷ್ಟರಲ್ಲಿ ಜಾರಿಗೆ ಬಂದಿತು? **– 2012 ಜೂನ್ 19**
5. **ಬಾಲಕಾರ್ಮಿಕರು ಎಂದರೆ ಯಾರು?**
   –14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ.
6. **ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ** ಕಾಯ್ದೆಈ ಕಾಯ್ದೆ ಯಾವಾಗ ಜಾರಿಗೆ ಬಂತು? – 1994
7. ಕಾಣದ ಹಸಿವು ಎಂದರೇನು? **– ಪೋಷಕಾಂಶಗಳ ಅಭಾವವನ್ನು ಕಾಣದ ಹಸಿವು ಎನ್ನುತ್ತಾರೆ**
8. ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಕಳ್ಳ ವ್ಯವಹಾರದ ನಂತರ ಎರಡನೇ ಅತ್ಯಂತ ದೊಡ್ಡ ವ್ಯವಹಾರ ಯಾವುದು? **–ಮಾನವ ಕಳ್ಳ ಸಾಗಾಣಿಕೆ**
9. **ಹೆಣ್ಣುಭ್ರೂಣ ಹತ್ಯೆ ಎಂದರೇನು**? – ತಾಯಿಯ ಗರ್ಭದಲ್ಲಿ ಬೆಳೆದ ಹೆಣ್ಣು ಭ್ರೂಣವನ್ನು ಹತ್ಯೆ ಮಾಡುವುದು.
10. **ಬಾಲ್ಯವಿವಾಹ ಎಂದರೇನು**?
   – 18 ವರ್ಷದೊಳಗಿನ ಹುಡುಗಿಗೆ ಅಥವಾ 21 ವರ್ಷದೊಳಗಿನ ಹುಡುಗನಿಗೆ ಮದುವೆ ಮಾಡುವುದು.

**II. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಭಾರತದ ಸಾಮಾಜಿಕ ಸಮಸ್ಯೆಗಳನ್ನು ಹೆಸರಿಸಿ.**

1. ಬಾಲ ಕಾರ್ಮಿಕತನ 2. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ 3. ಹೆಣ್ಣು ಭ್ರೂಣಹತ್ಯೆ 4. ಹಸಿವು ಮತ್ತು ಅಪೌಷ್ಟಿಕತೆ 5. ಲಿಂಗತಾರತಮ್ಯ 6. ಬಾಲ್ಯ ವಿವಾಹ 7.ಮಕ್ಕಳ ಸಾಗಾಣಿಕೆ ಮತ್ತು ಮಾರಾಟ

**2. ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು?**

1. ಮಕ್ಕಳ ಹಕ್ಕುಗಳ ರಕ್ಷಣೆ ಇಲ್ಲದಿರುವುದು. 2. ಪೋಷಕರ ವಲಸೆ & ದುಶ್ಚಟಗಳು 3. ಬರಗಾಲದಿಂದ ಕೃಷಿ ಸಮಸ್ಯೆ, 4. ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅನುಷ್ಠಾನದ ಕೊರತೆ. 5. ಕುಟುಂಬದ ಆರ್ಥಿಕ ಸ್ಥಿತಿ, 6. ಕನಿಷ್ಠ ಕೂಲಿ,

**3. ಬಾಲಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳು**

1. ಮಕ್ಕಳು ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಒಳಗಾಗುತ್ತಾರೆ. 2. ಶಿಕ್ಷಣದಿಂದ ವಂಚಿತರಾಗುತ್ತಾರೆ. 3. ಮಕ್ಕಳ ಹಕ್ಕು, ಸ್ವಾತಂತ್ರವನ್ನು ಕಸಿದುಕೊಳ್ಳುತ್ತದೆ 4. ಮಕ್ಕಳು ದೌರ್ಜನ್ಯ, ಶೋಷಣೆ.

**4. ಬಾಲಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವುವು?**

1. ಲಿಂಗ ಸಮಾನತೆಯನ್ನು ಕಾಪಾಡುವುದು. 2. ಬಡ ಕುಟುಂಬಗಳ ವಲಸೆ ತಡೆಗಟ್ಟುವುದು.
3. ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ/ಮಾರಾಟ ತಡೆ ಕುರಿತು ಅರಿವು.
4. ಮಕ್ಕಳ ಹಕ್ಕುಗಳನ್ನು ಪಂಚಾಯತಿಗಳು ಜವಾಬ್ದಾರಿಯಿಂದ ನಿರ್ವಹಿಸುವುದು.

**5. ಬಾಲ್ಯವಿವಾಹಕ್ಕೆ ಕಾರಣಗಳು ಯಾವುವು?**

1. ಹೆಣ್ಣು ಮಕ್ಕಳನ್ನು ಬೇಗ ಮದುವೆ ಮಾಡಿ ಕಳುಹಿಸಬೇಕೆಂಬ ನಂಬಿಕೆ. 2. ಶಿಕ್ಷಣ ಇಲ್ಲದಿರುವಿಕೆ, 3. ಬಾಲಕಾರ್ಮಿಕತೆ, 4. ಹೆಣ್ಣು ಮತ್ತು ಗಂಡು ಮಕ್ಕಳ ನಡುವಿನ ಬೇಧಭಾವ 5.ಮಕ್ಕಳ ಸಾಗಾಣಿಕೆ ಮತ್ತು ಮಾರಾಟ 6.ಸಾರ್ವಜನಿಕರ ಅಸಹಕಾರ.

**6. ಬಾಲ್ಯವಿವಾಹದ ಪರಿಣಾಮಗಳು ಯಾವುವು?**

1. ಬೆಳವಣಿಗೆ ಕುಂಠಿತ. 2. ಮಕ್ಕಳ ಹಕ್ಕುಗಳ ಉಲ್ಲಂಘನೆ 3. ದೌರ್ಜನ್ಯ ಮತ್ತು ಶೋಷಣೆ. 4. ಚಿಕ್ಕ ವಯಸ್ಸಿಗೆ ವಿಧವೆಯರಾಗುತ್ತಾರೆ. 5.ಅಪೌಷ್ಟಿಕತೆ, ರಕ್ತಹೀನತೆ, ಅನಾರೋಗ್ಯ, 6.ಗರ್ಭಪಾತ, ಶಿಶುಮರಣ,ತಾಯಿಮರಣ.

**7. ಬಾಲ್ಯವಿವಾಹಕ್ಕೆ ಪರಿಹಾರಗಳು ಯಾವುವು? ಅಥವಾ ಬಾಲ್ಯವಿವಾಹ ತಡೆಗಟ್ಟುವ ಕ್ರಮಗಳು**

1. 18 ವರ್ಷದ ತನಕ ಯಾವ ಮಕ್ಕಳು ಶಾಲೆ/ ಕಾಲೇಜು ಬಿಡದಂತೆ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿ
2. ಶೇಕಡ 100 ಮಕ್ಕಳು ಶಾಲೆಗೆ ದಾಖಲಾಗಬೇಕು. 3. ಎಲ್ಲೇ ಬಾಲ್ಯವಿವಾಹ ನಡೆದರು ತಪ್ಪದೇ ದೂರು ನೀಡುವುದು,
4. ಶೇಕಡ 100 ಜನನ ನೋಂದಣಿ ಮತ್ತು ಪ್ರಮಾಣ ಪತ್ರ ಪಡೆಯುವುದನ್ನು ಕಡ್ಡಾಯ ಮಾಡುವುದು.
5. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು, 6. ಬಾಲಕಿಯರ ಬಲವರ್ಧನೆ ಮತ್ತು ಸಬಲೀಕರಣ ಆದ್ಯತೆ.

**8. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ – 2012ರ** ಪ್ರಮುಖ ಅಂಶಗಳು ಯಾವುವು?

1. ಲೈಂಗಿಕ ದೌರ್ಜನ್ಯ 2. ಬಲಾತ್ಕಾರ & ದುರುಪಯೋಗ 3. ಲೈಂಗಿಕ ಹಲ್ಲೆ& ಕಿರುಕುಳ 4. ತೀವ್ರ ಸ್ವರೂಪದ ಲೈಂಗಿಕ ಹಲ್ಲೆ 5. ಅಶ್ಲೀಲ ಚಿತ್ರ ತಯಾರಿಕೆಗೆ ಮಕ್ಕಳ ಬಳಕೆ 6. ಅಶ್ಲೀಲ ಚಿತ್ರ ಸಂಗ್ರಹ

**9. ಲಿಂಗತಾರತಮ್ಯದ ಪ್ರಕಾರಗಳು ಯಾವುವು? / ಅಮರ್ತ್ಯ ಸೇನ್ ಗುರುತಿಸಿರುವ ಸ್ತ್ರೀ ಪುರುಷರ ನಡುವಿನ ಅಸಮಾನತೆಗಳಾವುವು?**

1. ಜನನ ಪ್ರಮಾಣದಲ್ಲಿ ಅಸಮಾನತೆ 2. ಮೂಲಸೌಕರ್ಯದಲ್ಲಿ ಅಸಮಾನತೆ 3. ಅವಕಾಶಗಳಲ್ಲಿ ಅಸಮಾನತೆ 4. ಒಡೆತನದ ಅಸಮಾನತೆ 5. ಕೌಟುಂಬಿಕ ಅಸಮಾನತೆ

**10. ಹಸಿವಿನ ದುಷ್ಪರಿಣಾಮಗಳಾವುವು?** – 1. ನಿಶ್ಯಕ್ತಿ, 2. ತೀವ್ರ ಅನಾರೋಗ್ಯ, 3. ವಿಕಲಾಂಗತೆ, 4. ಅಕಾಲಿಕ ಮರಣ,

**11. ಹಸಿವಿನ ಸೂಚಕವನ್ನು ಹೇಗೆ ಕಂಡು ಹಿಡಿಯಲಾಗುವುದು?**

1. ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡವಾರು ಪ್ರಮಾಣ.
2. ಸರಾಸರಿ ತೂಕಕ್ಕಿಂತ ಕಡಿಮೆ ತೂಕ ಇರುವ 5 ವರ್ಷದವರೆಗಿನ ಮಕ್ಕಳ ಶೇಕಡವಾರು ಪ್ರಮಾಣ
3. 5 ವರ್ಷದವರೆಗಿನ ಮಕ್ಕಳ ಮರಣದ ಶೇಕಡವಾರು ಪ್ರಮಾಣ

ಈ ಮೂರು ಅಂಶಗಳನ್ನು ಕೂಡಿ ಮೂರರಿಂದ ಭಾಗಿಸಿದರೆ ಬರುವ ಸಂಖ್ಯೆಯೇ ಹಸಿವಿನ ಸೂಚಕ.

**12. ಹೆಣ್ಣು ಭ್ರೂಣಹತ್ಯೆ ಹೆಚ್ಚಾಗುತ್ತಿರಲು ಕಾರಣಗಳಾವುವು?**

1. ಮಗಳ ಮದುವೆ ಖರ್ಚು, 2. ವರದಕ್ಷಿಣೆ, 3. ಗಂಡನ ಮನೆಯವರ ನಿರಂತರ ಶೋಷಣೆ, 4. ಲೈಂಗಿಕ ಶೋಷಣೆ, 5. ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, 6. ಆಸ್ತಿಯ ಹಕ್ಕುದಾರ ಮಗನೇ ಆಗಬೇಕೆಂಬ ಬಯಕೆ

**13. ಹೆಣ್ಣು ಭ್ರೂಣಹತ್ಯೆಯ ಪರಿಣಾಮಗಳಾವುವು? ಅಥವಾ ಹೆಣ್ಣು ಭ್ರೂಣಹತ್ಯೆಯ ದುಷ್ಪರಿಣಾಮಗಳಾವುವು?**

**1.** ಪುರುಷರು ಮತ್ತು ಮಹಿಳೆಯರ ನಡುವೆ ತಾರತಮ್ಯ ಸೃಷ್ಟಿ. 2. ಸಮಾಜದಲ್ಲಿ ಅನೈತಿಕತೆ ಬೆಳೆಯುವುದು 3. ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುವುವು 4. ಮಹಿಳೆಯರ ಅನುಪಾತ ಕುಸಿಯುವುದು

**14. ಮಕ್ಕಳ ಸಾಗಾಣಿಕೆಗೆ ಕಾರಣಗಳು ಯಾವುವು?**

1. ಬಾಲಕಾರ್ಮಿಕತೆ, 2. ಬಾಲ್ಯವಿವಾಹ, 3. ಶಾಲೆಬಿಡುವುದು, 4. ಬಡತನ, 5. ಕುಟುಂಬಗಳಲ್ಲಿ ಮಕ್ಕಳ ಬಗ್ಗೆ ಅಸಡ್ಡೆ, 6. ಜೀತ ಪದ್ದತಿ, 7. ಅನಿಯಮಿತ ವಲಸೆ ಮತ್ತು ಸ್ಥಳಾಂತರ.

**15. ಮಕ್ಕಳ ಸಾಗಾಣಿಕೆಯ ದುಷ್ಪರಿಣಾಮಗಳು ಯಾವುವು?**

1. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಮಾರಕ, 2. ದೈಹಿಕ ಹಾಗೂ ಲೈಂಗಿಕ ಶೋಷಣೆಗೆ ಬಲಿ, 3. ಮಕ್ಕಳ ಸಾವು ಮತ್ತು ಗಂಭೀರ ರೋಗದ ಅಪಾಯ(ಹೆಚ್.ಐ.ವಿ) 4. ಅನಗತ್ಯ ಗರ್ಭಧಾರಣೆ,

5. ಬಲವಂತದ ಗರ್ಭಧಾರಣೆ, 6. ಕೊಲೆ, ಮಾದಕ ವ್ಯಸನಗಳಿಗೆ ಬಲಿ,

**16. ಮಕ್ಕಳ ಸಾಗಾಣಿಕೆಯ ಪರಿಹಾರ ಕ್ರಮಗಳು ಯಾವುವು?**

1. ಶಾಲೆಗಳಲ್ಲಿ ಕಡ್ಡಾಯವಾಗಿ **ಮಕ್ಕಳ ಹಕ್ಕುಗಳ ಕ್ಲಬ್** ರಚನೆ. 2. ಶಾಲೆಗಳಲ್ಲಿ ಕಡ್ಡಾಯವಾಗಿ **ಮಕ್ಕಳ ಸುರಕ್ಷತಾ ಸಮಿತಿ** ರಚನೆ.
3. ಗ್ರಾಮ ಪಂಚಾಯತಿಗಳಲ್ಲಿ **ಮಕ್ಕಳ ಗ್ರಾಮ ಸಭೆ** ನಡೆಸಿ ಮಕ್ಕಳ ಸಮಸ್ಯೆಯ ಪರಿಹಾರ.
4. ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ **ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ** ರಚನೆ
5. ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ **ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ ಸಮಿತಿ**

## ಭೂಗೋಳ

## ಅಧ್ಯಾಯ-1. ಭಾರತದ ಸ್ಥಾನ ಮತ್ತು ವಿಸ್ತೀರ್ಣ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತವು ಭೂಮಿಯ ಯಾವ ಗೋಳಾರ್ಧದಲ್ಲಿದೆ? – **ಉತ್ತರ ಗೋಳಾರ್ಧ ಹಾಗೂ ಪೂರ್ವಗೋಳಾರ್ಧದ ಮಧ್ಯದಲ್ಲಿದೆ.**
2. ಆಗ್ನೇಯ ಏಷಿಯಾದ ಒಂದು ಪ್ರಮುಖ ಪರ್ಯಾಯ ದ್ವೀಪ ಯಾವುದು? – **ಭಾರತ**
3. ಭಾರತದ ಒಟ್ಟು ವಿಸ್ತೀರ್ಣ ಎಷ್ಟು? **–32,87263 ಚ.ಕಿ.ಮೀ (ಪ್ರಪಂಚದ ವಿಸ್ತೀರ್ಣದಲ್ಲಿ ಶೇ.2.42)**
4. ಯಾವ ರೇಖಾಂಶವನ್ನಾಧರಿಸಿ ಭಾರತದ ಪ್ರಮಾಣ ವೇಳೆಯನ್ನು ನಿಗದಿಪಡಿಸಲಾಗಿದೆ? – **82½°**ಡಿಗ್ರಿ **ಪೂರ್ವ** ರೇಖಾಂಶ
5. ಭಾರತದ ಮಧ್ಯ ಭಾಗದಲ್ಲಿ ಯಾವ ಅಕ್ಷಾಂಶವು ಹಾಯ್ದು ಹೋಗಿದೆ. – **ಕರ್ಕಾಟಕ ಸಂಕ್ರಾಂತಿ ವೃತ್ತ** (23½°ಉತ್ತರ ಅಕ್ಷಾಂಶ)
6. ಭಾರತವು ದಕ್ಷಿಣದ ಕನ್ಯಾಕುಮಾರಿ ಭೂಶಿರದಿಂದ ಉತ್ತರದ ಕಾಶ್ಮೀರದವರೆಗೆ ಎಷ್ಟು ಕಿ.ಮೀ ಉದ್ದವಾಗಿದೆ? – **3214** ಕಿ.ಮೀ.
7. ಭಾರತವು ಪೂರ್ವ–ಪಶ್ಚಿಮವಾಗಿ ಎಷ್ಟು ಕಿ.ಮೀ ಅಗಲವಾಗಿದೆ? – **2933** ಕಿ.ಮೀ
8. ಭಾರತದ ಕರಾವಳಿಯು ಎಷ್ಟು ಕಿ.ಮೀ ಉದ್ದವಿದೆ?(ದ್ವೀಪ ಹೊರತುಪಡಿಸಿ)–**6100** ಕಿ.ಮೀ (**ದ್ವೀಪಗಳು ಸೇರಿದಂತೆ 7516.5ಕಿ.ಮೀ**)
9. ಭಾರತದ ಭೂಗಡಿಯು ಎಷ್ಟು ಕಿ.ಮೀ ಉದ್ದವಿದೆ? – **15200** ಕಿ.ಮೀ.
10. ಭಾರತದ ಭೂರಾಶಿಯ ದಕ್ಷಿಣ ತುದಿಯ ಹೆಸರೇನು? – **ಇಂದಿರಾ ಪಾಯಿಂಟ್**
11. ಭಾರತದ ಅತ್ಯಂತ ಉತ್ತರ ತುದಿ ಯಾವುದು? – **ಇಂದಿರಾಕೋಲ್**
9. ಇಂದಿರಾಪಾಯಿಂಟ್ ಯಾವ ದ್ವೀಪದಲ್ಲಿದೆ? – **ಗ್ರೇಟ್ ನಿಕೋಬಾರ್ ದ್ವೀಪ**
10. ಭಾರತವು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರವಾಗಿದೆ? – 7ನೇ ದೊಡ್ಡ ರಾಷ್ಟ್ರ
11. **ಭಾರತದಲ್ಲಿ ಒಟ್ಟು ಎಷ್ಟು ರಾಜ್ಯಗಳು &ಕೇಂದ್ರಾಡಳಿತ ಪ್ರದೇಶಗಳಿವೆ?–29 ರಾಜ್ಯಗಳು&7ಕೇಂದ್ರಾಡಳಿತ ಪ್ರದೇಶಗಳಿವೆ(ದೆಹಲಿ ಸೇರಿ)**
**12. ಭಾರತದ ಅಕ್ಷಾಂಶಿಕ ಸ್ಥಾನವನ್ನು ತಿಳಿಸಿ.** – ಭಾರತವು **8°4'**ಉತ್ತರ ಅಕ್ಷಾಂಶದಿಂದ **37°6'**ಉತ್ತರ ಅಕ್ಷಾಂಶದವರೆಗೆ
**13. ಭಾರತದ ರೇಖಾಂಶಿಕ ಸ್ಥಾನವನ್ನು ತಿಳಿಸಿ – 68°7'**ಪೂರ್ವ ರೇಖಾಂಶದಿಂದ **97°3'**ಪೂರ್ವ ರೇಖಾಂಶದವರೆಗೆ ಹಬ್ಬಿದೆ.
14. ಶ್ರೀಲಂಕ ಭಾರತದಿಂದ ಹೇಗೆ ಪ್ರತ್ಯೇಕಗೊಂಡಿದೆ? – **ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ**
15. ಭಾರತದ ದೊಡ್ಡ ರಾಜ್ಯ ಯಾವುದು?–**ರಾಜಸ್ತಾನ**
16. ಭಾರತದ ಚಿಕ್ಕ ರಾಜ್ಯ ಯಾವುದು? –ಗೋವಾ
17. ಭಾರತದಲ್ಲಿ ಇತ್ತೀಚೆಗೆ ರಚನೆಯಾದ ಹೊಸ ರಾಜ್ಯ ಯಾವುದು? – **ತೆಲಂಗಾಣ**
18. ಪ್ರಪಂಚದ ಏಳು ದೊಡ್ಡ ರಾಷ್ಟ್ರಗಳನ್ನು ಹೆಸರಿಸಿ.
   **– ರಷ್ಯಾ, ಕೆನಡ, ಚೀನ, ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರೆಜಿಲ್ ಮತ್ತು ಆಸ್ಟ್ರೇಲಿಯ,ಭಾರತ(RCCUBAI)**

## ಅಧ್ಯಾಯ –2. ಭಾರತದ ಮೇಲ್ಮೈ ಲಕ್ಷಣಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಹಿಮಾಲಯ ಪರ್ವತಗಳ ಮಧ್ಯದಲ್ಲಿರುವ ಅವಿರತ ಮತ್ತು ಅತಿ ಎತ್ತರವಾದ ಸರಣಿ ಯಾವುದು? – **ಮಹಾಹಿಮಾಲಯ**
2. ಪ್ರಪಂಚದಲ್ಲೇ ಎತ್ತರದ ಶಿಖರ ಯಾವುದು? – **ಮೌಂಟ್ ಎವರೆಸ್ಟ್** (8848 ಮೀ)
**3. ಮಹಾಹಿಮಾಲಯವನ್ನು ಹಿಮಾದ್ರಿ ಎಂದು ಕರೆಯುವರು.ಏಕೆ?** – ವರ್ಷವೆಲ್ಲಾ ಹಿಮದಿಂದ ಆವೃತವಾಗಿರುವುದರಿಂದ
4. ಭಾರತದ ಎತ್ತರವಾದ ಶಿಖರ ಯಾವುದು? – **k2 ಅಥವಾ ಗಾಡ್ವಿನ್ ಆಸ್ಟಿನ್**
5. ಹಿಮಾಲಯದ ಹೊರಗಿನ ಅಥವಾ ಪಾದಭಾಗದ ಸರಣಿಗಳನ್ನು ಏನೆಂದು ಕರೆಯುವರು? – **ಶಿವಾಲಿಕ್ ಬೆಟ್ಟಗಳು**
**6. 'ಡೂನ್ಸ್' ಎಂದರೇನು?** – ಶಿವಾಲಿಕ್ ಬೆಟ್ಟಗಳ ಸಮತಟ್ಟಾದ ತಳವುಳ್ಳ ಕಣಿವೆಗಳನ್ನು ಡೂನ್ಸ್ ಎನ್ನುವರು. ಉದಾ: ಡೆಹ್ರಾಡೂನ್.
7. ದಕ್ಷಿಣ ಭಾರತದಲ್ಲಿ ಅತಿ ಎತ್ತರವಾದ ಶಿಖರ ಯಾವುದು? – **ಅಣೈಮುಡಿ (2695 ಮೀ)**
8. ಪೂರ್ವಘಟ್ಟಗಳು ಪಶ್ಚಿಮ ಘಟ್ಟಗಳನ್ನು ಎಲ್ಲಿ ಸಂಧಿಸುತ್ತವೆ? – **ನೀಲಗಿರಿ ಬೆಟ್ಟಗಳು**
9. ಮಹಾಹಿಮಾಲಯದ ಶಿಖರಗಳನ್ನು ಹೆಸರಿಸಿ.
   **– ಮೌಂಟ್ ಎವರೆಸ್ಟ್ , ಕಾಂಚನಜಂಗ , ಮಾಕಲು , ಧವಳಗಿರಿ , ಮಾನಸ್ಲು , ನಂದಾದೇವಿ**
10. ಮಹಾಹಿಮಾಲಯದ ಘಾಟಿಗಳನ್ನು ಹೆಸರಿಸಿ. – **ಬುರ್ಜಿಲ್, ಜೋಜಿಲಾ, ಶಿಪ್ಕಿಲಾ**
11. ಒಳ ಹಿಮಾಲಯದ ಕಣಿವೆಗಳನ್ನು ಹೆಸರಿಸಿ. – **ಕಾಶ್ಮೀರ, ಕಾಂಗ್ರ , ಕುಲು**
12. ಒಳ ಹಿಮಾಲಯದ ಗಿರಿಧಾಮಗಳನ್ನು ಹೆಸರಿಸಿ. – **ಶಿಮ್ಲಾ, ರಾಣಿಕೇಟ್, ಮುಸ್ಸೋರಿ, ನೈನಿತಾಲ್ ಮತ್ತು ಡಾರ್ಜಲಿಂಗ್.**

**13. ಉತ್ತರದ ಮೈದಾನ ಹೇಗೆ ನಿರ್ಮಿತಗೊಂಡಿದೆ?**
– ಸಟ್ಲೇಜ್, ಗಂಗ ಮತ್ತು ಬ್ರಹ್ಮಪುತ್ರ ನದಿಗಳ ಸಂಚಯನ ಕಾರ್ಯದಿಂದ.

14. **ಭಾರತದ ಪ್ರಾಕೃತಿಕ ವಿಭಾಗಗಳಲ್ಲಿ ಅತ್ಯಂತ ವಿಶಾಲವಾದುದು ಯಾವುದು? –ಪರ್ಯಾಯ ಪ್ರಸ್ಥಭೂಮಿ** (ಗೊಂಡ್ವಾನ ಭೂಭಾಗಕ್ಕೆಸೇರಿದ್ದು)

15. ಅರಾವಳಿ ಸರಣಿಯ ಎತ್ತರದ ಪರ್ವತ ಯಾವುದು? **– ಗುರುಶಿಖರ (1772 ಮೀ)**

16. ಪೂರ್ವ ಘಟ್ಟಗಳಲ್ಲೇ ಎತ್ತರವಾದ ಶಿಖರ ಯಾವುದು? **– ಅರ್ಮಕೊಂಡ ಶಿಖರ**

17. ಪೂರ್ವಕರಾವಳಿಯಲ್ಲಿನ ಲಗೂನ್ ಸರೋವರಗಳನ್ನು ಹೆಸರಿಸಿ. **– ಚಿಲ್ಕ, ಪುಲಿಕೇಟ್ ಮತ್ತು ಕೊಲ್ಲೇರು ಸರೋವರಗಳು.**

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

1. ಹಿಮಾಲಯ ಪರ್ವತಗಳಲ್ಲಿನ ಮೂರು ಸಮಾನಾಂತರ ಸರಣಿಗಳನ್ನು ಹೆಸರಿಸಿ.
**– 1. ಮಹಾ ಹಿಮಾಲಯ(ಹಿಮಾದ್ರಿ) 2. ಒಳ ಹಿಮಾಲಯ (ಹಿಮಾಚಲ್) 3. ಶಿವಾಲಿಕ್ ಬೆಟ್ಟಗಳು.**

**2. ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?**
1.ಉತ್ತರದ ಪರ್ವತಗಳು. 2.ಉತ್ತರದ ಮೈದಾನಗಳು. 3.ಪರ್ಯಾಯ ಪ್ರಸ್ಥಭೂಮಿ 4.ಕರಾವಳಿ ಮೈದಾನ ಮತ್ತು ದ್ವೀಪಗಳು.

**3. ಪೂರ್ವಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.**

| ಪಶ್ಚಿಮ ಘಟ್ಟಗಳು | ಪೂರ್ವಘಟ್ಟಗಳು |
|---|---|
| ತಾಪಿನದಿ ಕಣಿವೆಯಿಂದ ಕನ್ಯಾಕುಮಾರಿವರೆಗೆ | ಮಹಾನದಿ ಕಣಿವೆಯಿಂದ ನೀಲಗಿರಿ ಬೆಟ್ಟಗಳವರೆಗೆ |
| ಸಮುದ್ರಕ್ಕೆ ಹತ್ತಿರ ಇವೆ | ಸಮುದ್ರದಿಂದ ದೂರ ಇವೆ |
| ಎತ್ತರವಾಗಿವೆ | ಎತ್ತರವಾಗಿಲ್ಲ |
| ನಿರಂತರವಾಗಿವೆ | ನಿರಂತರವಾಗಿಲ್ಲ |
| ಕಣಿವೆಗಳಿಂದ ಪ್ರತ್ಯೇಕಗೊಂಡಿಲ್ಲ | ಕಣಿವೆಗಳಿಂದ ಪ್ರತ್ಯೇಕಗೊಂಡಿವೆ. |

**4. ಉತ್ತರದ ಪರ್ವತಗಳ ಪ್ರಾಮುಖ್ಯತೆಯನ್ನು ತಿಳಿಸಿ.ಅಥವಾ**
**ಉತ್ತರದ ಪರ್ವತಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವ ಬೀರುತ್ತವೆ.** ಎಂದು ಹೇಗೆ ಹೇಳುವಿವರಿ?
1. ವಿದೇಶಿಯರ ದಾಳಿಯಿಂದ ರಕ್ಷಣೆ. 2. ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಯಿಂದ ರಕ್ಷಣೆ.
3. ನದಿಗಳ ಉಗಮ ಪ್ರದೇಶವಾಗಿವೆ. 4. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಪೂರಕ.
5. ಮಳೆ ಮಾರುತಗಳನ್ನು ತಡೆದು ಮಳೆ ಸುರಿಸುತ್ತವೆ 6. ನೆಡುತೋಪುದ ಬೆಳೆಗಳಿಗೆ ಸೂಕ್ತ. 7. ಖನಿಜಗಳ ಉಗ್ರಾಣ.

**5. ಉತ್ತರದ ಮೈದಾನ ಪ್ರಾಮುಖ್ಯತೆಯನ್ನು ವಿವರಿಸಿ.**
1. ವಿಶಾಲವಾದ ಮೈದಾನ 2. ಫಲವತ್ತಾಗಿದೆ 3. ಸರ್ವಕಾಲಿಕ ನದಿಗಳು ಹರಿಯುತ್ತವೆ. 4. ಕೃಷಿಗೆ ಉಪಯುಕ್ತ.
5. ರಸ್ತೆ, ರೈಲುಮಾರ್ಗ & ಸಂಪರ್ಕಕ್ಕೆ ಅನುಕೂಲ. 6. ಕೈಗಾರಿಕೀಕರಣ, ನಗರೀಕರಣಕ್ಕೆ ಪೂರಕ 7. ಅನೇಕ ಯಾತ್ರಾಸ್ಥಳಗಳಿವೆ.

**6. ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ**
**ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ ಹೇಗೆ?**
1. ಸಮೃದ್ಧ ಖನಿಜಗಳಿವೆ. 2. ದಟ್ಟ ಕಾಡುಗಳು ಹಾಗೂ ಜೈವಿಕ ವೈವಿಧ್ಯತೆ.
3. ಕಪ್ಪು ಮಣ್ಣಿನಿಂದ ಕೂಡಿದ್ದು ಕೃಷಿಗೆ ಪೂರಕ. 4. ನೈರುತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ.
5. ಜಲಶಕ್ತಿ ತಯಾರಿಕೆಗೆ ಉಪಯುಕ್ತ. 6. ಅನೇಕ ನದಿಗಳಿಗೆ ಉಗಮ ಸ್ಥಾನ.

**7. ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.**

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಇದೆ | ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ಇದೆ |
| ಕಛ್‌ನಿಂದ ಕನ್ಯಾಕುಮಾರಿವರೆಗೆ | ಸುವರ್ಣರೇಖಾ ನದಿಯ ಉತ್ತರದಿಂದ ಕನ್ಯಾಕುಮಾರಿವರೆಗೆ |
| ಕಿರಿದಾಗಿವೆ | ಅಗಲವಾಗಿದೆ, |
| ಶಿಲಾಮಯವಾಗಿದೆ. | ನದಿ ಮುಖಜ ಭೂಮಿಗಳಿವೆ |
| ಕೊಂಕಣತೀರ, ಕರ್ನಾಟಕ ತೀರ, ಮಲಬಾರ್ ತೀರ | ಉತ್ತರ ಸರ್ಕಾರ್ ಮತ್ತು ಕೋರಮಂಡಲ ತೀರ |

**8. ಭಾರತದ ಕರಾವಳಿ ಮೈದಾನಗಳ ಪ್ರಾಮುಖ್ಯತೆಯನ್ನು ವಿವರಿಸಿ.**
1. ನೈಸರ್ಗಿಕ ಬಂದರುಗಳಿಗೆ ಪೂರಕ. 2. ವಿದೇಶ ವ್ಯಾಪಾರಾಭಿವೃದ್ಧಿಗೆ ನೆರವು 4. ಕೃಷಿ ಮತ್ತು ಉಪ್ಪು ಉತ್ಪಾದನೆಗೆ ನೆರವು
3. ಮೀನುಗಾರಿಕೆ, ಹಡಗು ನಿರ್ಮಾಣ ಕೈಗಾರಿಕೆಗೆ ಸೂಕ್ತ. 5. ನೌಕಾಯಾನಕ್ಕೆ ಅನುಕೂಲ. 6. ಪ್ರವಾಸೋದ್ಯಮ ಅಭಿವೃದ್ಧಿ.

**9. ಭಾರತದ ದ್ವೀಪಗಳನ್ನು ವಿವರಿಸಿ.**
1. ಭಾರತದಲ್ಲಿ 247 ದ್ವೀಪಗಳಿವೆ. 2. ಬಂಗಾಳಕೊಲ್ಲಿಯಲ್ಲಿ 204 ದ್ವೀಪಗಳಿವೆ
3. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಬಂಗಾಳಕೊಲ್ಲಿಯಲ್ಲಿವೆ 4. ಅರಬ್ಬಿ ಸಮುದ್ರದಲ್ಲಿ 43 ದ್ವೀಪಗಳವೆ
5. ಲಕ್ಷದ್ವೀಪಗಳು ಅರಬ್ಬಿ ಸಮುದ್ರದಲ್ಲಿದ್ದು. ಹವಳ ದ್ವೀಪಗಳಾಗಿವೆ.

# ಅಧ್ಯಾಯ-3. ಭಾರತದ ವಾಯುಗುಣ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತವು ಯಾವ ಬಗೆಯ ವಾಯುಗುಣವನ್ನು ಹೊಂದಿದೆ? – **ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣ.**

2. ದೇಶದಲ್ಲಿಯೇ ಅತಿ ಹೆಚ್ಚು ಉಷ್ಣಾಂಶ ಹೊಂದಿರುವ ಸ್ಥಳ ಯಾವುದು? – **ರಾಜಸ್ತಾನದ ಗಂಗಾನಗರ (49.4 ಡಿಗ್ರಿ ಸೆ)**

3. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಸ್ಥಳ ಯಾವುದು? – **ರಾಜಸ್ತಾನದ ರೂಯ್ಲಿ. (8.3 ಸೆಂ.ಮೀ.)**

4. ಭಾರತದಲ್ಲಿಯೇ ಅತಿ ಹೆಚ್ಚು ಮಳೆಯಾಗುವ ಸ್ಥಳ ಯಾವುದು? – **ಮಾಸಿನ್‌ರಾಮ್ (ಮೇಘಾಲಯ)**

**5. ಅಕ್ಟೋಬರ್ ತಿಂಗಳಲ್ಲಿ ಉಷ್ಣಾಂಶವು ಉತ್ತರಾರ್ಧಗೋಳದಲ್ಲಿ ಕಡಿಮೆಯಾಗಲು ಕಾರಣವೇನು?**

– ಸೂರ್ಯನ ಕಿರಣಗಳು ದಕ್ಷಿಣಾರ್ಧ ಗೋಳದ ಮೇಲೆ ನೇರವಾಗಿ ಬೀಳುವುದರಿಂದ.

**6. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಹಿಂದಿರುಗಲು ಪ್ರಾರಂಭಿಸುತ್ತವೆ. ಏಕೆ? /ಕಾರಣ ಕೊಡಿ.**

– ಭಾರತದ ಒಳನಾಡಿನ ಉಷ್ಣಾಂಶ ಕಡಿಮೆಯಾಗಿ ಒತ್ತಡ ಹೆಚ್ಚಾಗಿ ಬಂಗಾಳಕೊಲ್ಲಿಯಲ್ಲಿ ಒತ್ತಡ ಕಡಿಮೆಯಾಗುವುದರಿಂದ.

**7.ಭಾರತವನ್ನು ಪ್ರವೇಶಿಸುವ ನೈರುತ್ಯ ಮಾನ್‌ಸೂನ್ ಮಾರುತಗಳ ಎರಡು ಕವಲುಗಳು ಯಾವುವು?**

– 1. ಅರಬ್ಬಿ ಸಮುದ್ರ ಶಾಖೆ, 2. ಬಂಗಾಳಕೊಲ್ಲಿ ಶಾಖೆ.

**8. ಬೇಸಿಗೆಯ ಕಾಲದಲ್ಲಿ ಭಾರತದ ಉಷ್ಣಾಂಶ ಹೆಚ್ಚಾಗಲು ಕಾರಣವೇನು?**

– ಈ ಕಾಲದಲ್ಲಿ ಸೂರ್ಯನ ನೇರವಾದ ಕಿರಣಗಳು ಉತ್ತರಾರ್ಧಗೋಳದ ಮೇಲೆ ಬೀಳುವುದರಿಂದ.

9. ಭಾರತದ ಅತ್ಯಂತ ಶೀತವಾದ ಮಾಹೆ/ತಿಂಗಳು ಯಾವುದು? – **ಜನವರಿ**

**10. ಭಾರತದಲ್ಲಿ ಉಷ್ಣವಯದ ಮಾನ್ಸೂನ್ ಮಾದರಿ ವಾಯುಗುಣವಿದೆ.ಏಕೆ?**

– ಹೆಚ್ಚು ಭಾಗ ಉಷ್ಣವಯದಲ್ಲಿದೆ ಮತ್ತು ವಾಯುಗುಣವು ಹೆಚ್ಚಾಗಿ ಮಾನ್ಸೂನ್ ಮಾರುತಗಳ ಪ್ರಭಾವಕ್ಕೊಳಗಾಗಿದೆ.

**11. ಚಳಿಗಾಲದಲ್ಲಿ ಭಾರತದಲ್ಲಿ ಕಡಿಮೆ ಉಷ್ಣಾಂಶವಿರುತ್ತದೆಏಕೆ?**

– ಈ ಕಾಲದಲ್ಲಿ ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದ ಮೆಲೆ ಬೀಳುವುದರಿಂದ

12. ಭಾರತದಲ್ಲೇ ಅತಿ ಕಡಿಮೆ ಉಷ್ಣಾಂಶವು ಎಲ್ಲಿ ದಾಖಲಾಗುತ್ತದೆ? – ಕಾರ್ಗಿಲ್ ಸಮೀಪದಲ್ಲಿರುವ **ಡ್ರಾಸ್** (–40ಡಿಗ್ರಿ ಸೆ)

**II.ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

1. ಬೇಸಿಗೆಯ ಅವಧಿಯಲ್ಲಿ ಬೀಳುವ ಪರಿಸರಣ ಮಳೆಯನ್ನು ಯಾವ ಯಾವ ಪ್ರದೇಶಗಳಲ್ಲಿ ಏನೆಂದು ಕರೆಯುತ್ತಾರೆ?

| **ರಾಜ್ಯಗಳು** | **ಪರಿಸರಣ ಮಳೆಯ ಹೆಸರು** |
|---|---|
| ಉತ್ತರ ಪ್ರದೇಶ | ಆಂಧಿಸ್ |
| ಪಶ್ಚಿಮ ಬಂಗಾಳ | ಕಾಲಬೈಸಾಕಿ |
| ಕೇರಳ | ಮಾವಿನ ಹೂಯ್ಲು (ಮಾವಿನ ಬೆಳೆಗೆ ನೆರವಾಗುವುದರಿಂದ) |
| ಕರ್ನಾಟಕ | ಕಾಫಿಯ ಹೂಮಳೆ (ಕಾಪಿ ಬೆಳೆಗೆ ನೆರವಾಗುವುದರಿಂದ) |

**2. ಅರಬ್ಬೀ ಸಮುದ್ರದ ಶಾಖೆಯು ಬಂಗಾಳಕೊಲ್ಲಿಯ ಶಾಖೆಗಿಂತ ಹೇಗೆ ಭಿನ್ನವಾಗಿದೆ / ವ್ಯತ್ಯಾಸಗಳು. ?**

| ಅರಬ್ಬೀ ಸಮುದ್ರದ ಶಾಖೆ | ಬಂಗಾಳಕೊಲ್ಲಿಯಶಾಖೆ |
|---|---|
| **1. ಪಶ್ಚಿಮ ಘಟ್ಟಗಳಿಗೆ ಎದುರಾಗಿ ಬೀಸುತ್ತವೆ** | **1.ಮೇಘಾಲಯ ಮತ್ತು ಅಸ್ಸಾಂನ ಬೆಟ್ಟಗಳಿಂದ ತಡೆಯಲ್ಪಟ್ಟು ಅಧಿಕ ಮಳೆ.** |
| **2. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗಗಳಿಗೆ ಅಧಿಕ ಮಳೆ** | **2. ಮಾಸಿನ್‌ರಾಮ್‌ನಲ್ಲಿ ಅತಿ ಹೆಚ್ಚು ಮಳೆ.** |
| **3. ಪಶ್ಚಿಮ ಘಟ್ಟಗಳ ಪೂರ್ವಭಾಗ ಮಳೆ ನೆರಳಿನ ಪ್ರದೇಶ** | **3. ಪಶ್ಚಿಮದ ಕಡೆಗೆ ಹೋದಂತೆ ಮಳೆಯ ಪ್ರಮಾಣವು ಕಡಿಮೆ.** |

**3. ಭಾರತದಲ್ಲಿ ಮಳೆಯ ಹಂಚಿಕೆಯ ವಿಧಗಳನ್ನು ಹೆಸರಿಸಿ.**

| **ಪ್ರದೇಶ** | **ಮಳೆಯ ಪ್ರಮಾಣ** | **ಹಂಚಿಕೆ** |
|---|---|---|
| ಕಡಿಮೆ ಮಳೆ | 50 ಸೆಂ.ಮೀ.ಗಿಂತ ಕಡಿಮೆ | **ಎ) ಕಛ್‌ನ ಪಶ್ಚಿಮ ಭಾಗ, ರಾಜಸ್ತಾನದ ಥಾರ್ ಮರುಭೂಮಿ.**<br>**ಬಿ) ಪಶ್ಚಿಮದ ಪಂಜಾಬು, ಹರಿಯಾಣ ಮತ್ತು ಗುಜರಾತ್,**<br>**ಸಿ) ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶಗಳು.** |
| ಸಾಧಾರಣ ಮಳೆ | 50 –100 ಸೆಂ.ಮೀ. | **ಎ) ಉತ್ತರ ಪಂಜಾಬಿನಿಂದ ಕನ್ಯಾಕುಮಾರಿವರೆಗೆ**<br>**ಬಿ) ಉತ್ತರದಲ್ಲಿ ಅಗಲವಾಗಿದೆ. ದಕ್ಷಿಣದ ಕಡೆ ಕಿರಿದಾಗಿದೆ.** |
| ಅಧಿಕ ಮಳೆ | 100 –250 ಸೆಂ.ಮೀ. | **ಎ) ಪಶ್ಚಿಮ ಘಟ್ಟಗಳ ಕಿರಿದಾದ ವಲಯ.**<br>**ಬಿ) ಜಮ್ಮು, ಹಿಮಾಚಲಪ್ರದೇಶ, ಉತ್ತರಪ್ರದೇಶದ ಉತ್ತರಭಾಗ, ಬಿಹಾರ ಮತ್ತು ಪಶ್ಚಿಮಬಂಗಾಳ.**<br>**ಸಿ) ಈಶಾನ್ಯ ಭಾರತ. ಡಿ) ಪಶ್ಚಿಮ ಸಮುದ್ರ ತೀರ** |

**5. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

1. ಸ್ಥಾನ 2. ಜಲರಾಶಿಗಳು 3. ಮೇಲ್ಮೈ ಲಕ್ಷಣ 4. ಮಾನ್ಸೂನ್ ಮಾರುತಗಳು

4. ಭಾರತದಲ್ಲಿ ಕಂಡುಬರುವ ವಿವಿಧ ಋತುಮಾನಗಳ ಲಕ್ಷಣಗಳು / ವೈಶಿಷ್ಟ್ಯತೆ / ಪ್ರಮುಖಾಂಶ ಗಳನ್ನು ತಿಳಿಸಿ.

| ಋತುಮಾನ | ತಿಂಗಳು | ಮಳೆ ಪ್ರಮಾಣ | ಲಕ್ಷಣಗಳು / ವೈಶಿಷ್ಟ್ಯತೆ / ಪ್ರಮುಖಾಂಶಗಳು |
|---|---|---|---|
| 1. ಚಳಿಗಾಲ | ಡಿಸೆಂಬರ್– ಫೆಬ್ರವರಿ | 2 % | 1. ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಪ್ರಕಾಶಿಸುತ್ತವೆ<br>2. ಭಾರತದಲ್ಲಿ ಕಿರಣಗಳು ಓರೆಯಾಗಿರುತ್ತವೆ<br>3. ಕಡಿಮೆ ಉಷ್ಣಾಂಶ,ಕಡಿಮೆ ಆರ್ದ್ರತೆ ಮತ್ತು ಮೋಡ ರಹಿತ ಆಕಾಶ<br>4. ಉತ್ತರದಲ್ಲಿ ತಂಪಾದ ಮತ್ತು ದಕ್ಷಿಣದಲ್ಲಿ ಬೆಚ್ಚನೆಯ ಪರಿಸ್ಥಿತಿ |
| 2. ಬೇಸಿಗೆ ಕಾಲ | ಮಾರ್ಚ್– ಮೇ | 10% | 1. ಸೂರ್ಯನ ಲಂಬ ಕಿರಣಗಳು ಉತ್ತರಗೋಳಾರ್ಧದಲ್ಲಿಬೀಳುವುದು.<br>2. ಉಷ್ಣಾಂಶವು ಹೆಚ್ಚು. ಹವಾಗುಣವು ಅತಿಶಾಖ,ಶುಷ್ಕ ಮತ್ತು ಸೆಖೆ<br>3. ಕೆಲವು ಭಾಗಗಳಲ್ಲಿ ಪರಿಸರಣ ಮಳೆ ಬೀಳುತ್ತದೆ. |
| 3. ಮಳೆಗಾಲ | ಜೂನ್– ಸೆಪ್ಟೆಂಬರ್ | 75% | 1. ನೈಋತ್ಯ ಮಾನ್ಸೂನ್ ಮಾರುತಗಳ ಕಾಲ<br>2. ಬೇಸಿಗೆಯ ಕೊನೆಯಲ್ಲಿ ಉಷ್ಣಾಂಶವು ಹೆಚ್ಚಾಗುವುದರಿಂದ ಭಾರತದ ಮಧ್ಯಭಾಗದಲ್ಲಿ ಕಡಿಮೆ ಒತ್ತಡ ಪ್ರದೇಶ ನಿರ್ಮಾಣ<br>3. ಹಿಂದೂ ಮಹಾ ಸಾಗರದಲ್ಲಿ ಅಧಿಕ ಒತ್ತಡವಿರುತ್ತದೆ.<br>4. ತೇವಾಂಶಭರಿತ ಮಾರುತಗಳು ನೈಋತ್ಯದಿಂದ ಭಾರತದ ಕಡೆಗೆ ಬೀಸುತ್ತವೆ. |
| 4. ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ | ಸೆಪ್ಟೆಂಬರ್ ಮಧ್ಯ– ನವೆಂಬರ್ | 13% | 1. ಭೂ ಭಾಗದಲ್ಲಿ ಅಧಿಕ ಒತ್ತಡ ಪ್ರದೇಶವು ನಿರ್ಮಾಣ.<br>2. ಬಂಗಾಳಕೊಲ್ಲಿಯಲ್ಲಿ ಕಡಿಮೆ ಒತ್ತಡ ಪ್ರದೇಶ ನಿರ್ಮಾಣ.<br>3. ನೈಋತ್ಯ ಮಾನ್ಸೂನ್ ಮಾರುತಗಳು ಹಿಂದಿರುಗುತ್ತವೆ.<br>4. ಆವರ್ತಮಾರುತಗಳು(ಸೈಕ್ಲೋನ್ ಬಂಗಾಳಕೊಲ್ಲಿಯಲ್ಲಿ ಸಂಭವಿಸುತ್ತವೆ) |

## ಅಧ್ಯಾಯ–4. ಭಾರತದ ಮಣ್ಣುಗಳು

**I.ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಮಣ್ಣಿನ ಸವೆತಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿ.**

1. ಅರಣ್ಯನಾಶ. 2. ಅತಿಯಾಗಿ ಮೇಯಿಸುವುದು. 3. ವರ್ಗಾವಣೆ ಬೇಸಾಯ ಪದ್ಧತಿ.
4. ಅವೈಜ್ಞಾನಿಕ ಬೇಸಾಯ ಪದ್ಧತಿ. 5. ಮೇಲ್ಪದರದ ಮಣ್ಣನ್ನು ಇಟ್ಟಿಗೆ, ಹೆಂಚು ತಯಾರಿಕೆಗೆ ಬಳಕೆ

**2. ಮಣ್ಣಿನ ಸವೆತದ ಪ್ರಮುಖ ಪರಿಣಾಮಗಳು ಯಾವುವು?**

1. ಮಣ್ಣಿನ ಸಾರವು ಕಡಿಮೆಯಾಗುತ್ತದೆ, 2. ಕೃಷಿ ಉತ್ಪಾದನೆ ಕಡಿಮೆಯಾಗುತ್ತದೆ. 3. ಪ್ರವಾಹ ಉಂಟಾಗುವುದು
4. ನದಿ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು, 5. ನದಿ ಪಾತ್ರದ ಬದಲಾವಣೆ 6. ಅಂತರ್ಜಲದ ಮಟ್ಟದಲ್ಲಿ ಕುಸಿತ

**3. ಮಣ್ಣಿನ ಸಂರಕ್ಷಣೆಯ ವಿಧಾನಗಳು ಯಾವುವು?**

1. ಅರಣ್ಯಪೋಷಣೆ ಮತ್ತು ಮರು ಅರಣ್ಯೀಕರಣ. 2. ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.
3. ಸಮೋನ್ನತಿ ಬೇಸಾಯ. 4. ಚೆಕ್ ಡ್ಯಾಮ್‌ಗಳ ನಿರ್ಮಾಣ.
5. ಬದುಗಳ ನಿರ್ಮಾಣ ಹಾಗೂ 6. ಕೊರಕಲು ನಿಯಂತ್ರಣ ಮತ್ತು ಮೆಟ್ಟಲು ಪಂಕ್ತಿ ಬೇಸಾಯ.

| | |
|---|---|
| ಮೆಕ್ಕಲು ಮಣ್ಣಿನ ಗುಣಲಕ್ಷಣಗಳು<br>1. ಮೆಕ್ಕಲನ್ನೊಳಗೊಂಡ ಮಣ್ಣು ಮೆಕ್ಕಲು ಮಣ್ಣು .<br>2. ನದಿಗಳ ಮೆಕ್ಕಲು ಸಂಚಯನದಿಂದ ಉತ್ಪತ್ತಿ.<br>3. ಸಿಂಧೂ–ಗಂಗಾ, ಇತರೆ ನದಿ ಬಯಲು. ಸಮುದ್ರ ತೀರ ಪ್ರದೇಶದಲ್ಲಿ ನಿರ್ಮಾಣ. 4. ಕೃಷಿಗೆ ಸಹಕಾರಿ<br>5. ಗೋಧಿ, ಭತ್ತ, ಕಬ್ಬು, ಹತ್ತಿ, ಸೆಣಬು, ತರಕಾರಿ. | ಕೆಂಪು ಮಣ್ಣಿನ ಗುಣಲಕ್ಷಣಗಳು<br>1. ಗ್ರಾನೈಟ್, ನೀಸ್ ಮತ್ತು ಸ್ಫಟಿಕ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿ.<br>2. ಕೆಂಪು ಮತ್ತು ಕೆಂಪುಕಂದು ಬಣ್ಣ ಹೊಂದಿದೆ.<br>3. ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ.<br>4. ತೇವಾಂಶ ಸಂಗ್ರಹ ಸಾಮರ್ಥ್ಯ ಕಡಿಮೆ.<br>5. ರಾಗಿ, ತೃಣಧಾನ್ಯ, ಶೇಂಗ, ತಂಬಾಕು, ಆಲೂಗೆಡ್ಡೆ ಬೇಸಾಯಕ್ಕೆ ಸೂಕ್ತ. |
| ಕಪ್ಪು ಮಣ್ಣಿನ ಗುಣಲಕ್ಷಣಗಳು<br>1. ರೀಗರ್ ಮಣ್ಣು ಹಾಗೂ ಕಪ್ಪು ಹತ್ತಿ ಮಣ್ಣು.<br>2. ಬಸಾಲ್ಟ್ ಶಿಲಾಕಣಗಳಿಂದ ಉತ್ಪತ್ತಿ<br>3. ಜೇಡಿ ಮಿಶ್ರಣ ಹೆಚ್ಚು. ಒತ್ತೊತ್ತಾದ ಕಣಗಳಿಂದ ರಚನೆ<br>4.ದೀರ್ಘ ಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವಸಾಮರ್ಥ್ಯ<br>5. ಹತ್ತಿ, ಕಬ್ಬು, ಜೋಳ, ಮೆಕ್ಕೆಜೋಳ, ದ್ವಿದಳಧಾನ್ಯ, ಗೋಧಿ ಬೆಳೆಗೆ ಸೂಕ್ತ. | ಪರ್ವತ ಮಣ್ಣಿನ ಗುಣಲಕ್ಷಣಗಳು<br>1. ಅರಣ್ಯಗಳಿರುವ ಪರ್ವತ ಮತ್ತು ಬೆಟ್ಟಗಳ ಇಳಿಜಾರಲ್ಲಿ ಕಂಡುಬರುತ್ತದೆ<br>2. ಜೈವಿಕ ವಸ್ತುಗಳು ಕೊಳೆಯುವುದರಿಂದ ನಿರ್ಮಾಣ.<br>3. ಸಸ್ಯಾಂಶ ಅಧಿಕವಾಗಿದ್ದು ಫಲವತ್ತಾಗಿರುತ್ತದೆ.<br>4. ನೆಡುತೋಪಟದ ಬೆಳೆಗಳ ಸಾಗುವಳಿಗೆ ಸೂಕ್ತವಾದುದು.<br>ಉದಾ: ಚಹ, ಕಾಫಿ ಮತ್ತು ಹಣ್ಣುಬೆಳೆಗಳು. |
| ಮರುಭೂಮಿ ಮಣ್ಣಿನ ಗುಣಲಕ್ಷಣಗಳು<br>1. ಮರುಭೂಮಿ ಮತ್ತು ಅರೆ ಮರುಭೂಮಿ ಭಾಗದಲ್ಲಿ ಉತ್ಪತ್ತಿ<br>2. ರಾಜಸ್ತಾನದ ಬಹುಭಾಗ, ದಕ್ಷಿಣ ಹರಿಯಾಣ, ಪಂಜಾಬ್ ಮತ್ತು ಗುಜರಾತಿನ ಉತ್ತರ ಭಾಗಗಳು.<br>3. ಸುಲಭವಾಗಿ ಪುಡಿಯಾಗುವ ಗುಣ ಮತ್ತು ಉಪ್ಪಿನ ಅಂಶ ಹೆಚ್ಚು<br>4. ಮರಳು ಹೆಚ್ಚು, ತೇವಾಂಶ ಮತ್ತು ಸಸ್ಯಾಂಶ ಕಡಿಮೆ. | ಲ್ಯಾಟರೈಟ್ ಮಣ್ಣಿನ ಗುಣಲಕ್ಷಣಗಳು<br>1. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಉಷ್ಣವಲಯದ ಭಾಗಗಳಲ್ಲಿ ಉತ್ಪತ್ತಿ.<br>2. ಪಶ್ಚಿಮ ಮತ್ತು ಪೂರ್ವ ಘಟ್ಟಗಳು, ವಿಂಧ್ಯಾ ಮತ್ತು ಸಾತ್ಪುರ ಸರಣಿಗಳಲ್ಲಿ ಹಂಚಿಕೆ<br>3. ಇದು ಜಲವಿಲೀನಿಕರಣಕ್ಕೊಳಪಡುವುದರಿಂದ ಫಲವತ್ತಾದುದಲ್ಲ.<br>4. ಕೃಷಿಗೆ ಅಷ್ಟೊಂದು ಉಪಯುಕ್ತವಲ್ಲ.<br>5. ಗೋಡಂಬಿ, ರಬ್ಬರ್, ಚಹ, ಕಾಫಿ ಮತ್ತು ಭತ್ತ ಬೆಳೆಯಲು ಸೂಕ್ತ |

**I. ಈ ಮೇಲಿನ ಪಟ್ಟಿಯನ್ನು ಓದಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ನದಿಗಳ ಸಂಚಯದಿಂದ ನಿರ್ಮಾಣಗೊಂಡ ಮಣ್ಣಿಗೆ ಏನೆಂದು ಕರೆಯುತ್ತಾರೆ?
2. ಕಪ್ಪು ಮಣ್ಣನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
3. ಅತ್ಯಧಿಕ ಉಷ್ಣಾಂಶ ಮತ್ತು ಮಳೆಯ ಪರಿಸ್ಥಿತಿಯುಳ್ಳ ಉಷ್ಣವಲಯದಲ್ಲಿ ಉತ್ಪತ್ತಿಯಾಗುವ ಮಣ್ಣು ಯಾವುದು?
4. ಪರ್ವತ ಮಣ್ಣು ಯಾವ ಬೆಳೆಗಳ ಬೇಸಾಯಕ್ಕೆ ಸೂಕ್ತವಾಗಿದೆ? 5. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗುತ್ತದೆ?
6. ಕಪ್ಪು ಮಣ್ಣನ್ನು **ಕಪ್ಪು ಹತ್ತಿ ಮಣ್ಣು** ಎಂದು ಏಕೆ ಕರೆಯುವರು? 7. ಕಪ್ಪುಮಣ್ಣು ಹೇಗೆ ಉತ್ಪತ್ತಿಯಾಗಿದೆ?
8. ಕೆಂಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ? 9. ಕೆಂಪು ಮಣ್ಣಿನಲ್ಲಿ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ. ಏಕೆ?
10. ಭಾರತದ ವಾಯವ್ಯ ಭಾಗದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು ಯಾವುದು? 11. ಪರ್ವತ ಮಣ್ಣು ಹೇಗೆ ಉತ್ಪತ್ತಿಯಾಗಿದೆ?
12. ಕಪ್ಪು ಮಣ್ಣಿನಲ್ಲಿ ತೇವಾಂಶ ಸಂಗ್ರಹದ ಸಾಮರ್ಥ್ಯ ಹೆಚ್ಚು. ಏಕೆ?
13. **ಮಣ್ಣಿನ ಸವೆತ ಎಂದರೇನು?** –ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿಹೋಗುವುದು.
14. **ಮಣ್ಣಿನ ಸಂರಕ್ಷಣೆ ಎಂದರೇನು?** –ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತ್ತತೆಯನ್ನು ಕಾಪಾಡುವುದು.

## ಅಧ್ಯಾಯ–5. ಭಾರತದ ಅರಣ್ಯ ಸಂಪತ್ತು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. **ಅರಣ್ಯಗಳೆಂದರೇನು?** – ವೃಕ್ಷ ಮತ್ತು ಇತರೆ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗ.
2. ವಿಶಾಲವಾದ ಅರಣ್ಯ ಪ್ರದೇಶವನ್ನು ಹೊಂದಿದ ರಾಜ್ಯ ಯಾವುದು? – **ಮಧ್ಯಪ್ರದೇಶ**
3. ಯಾವ ರಾಜ್ಯದಲ್ಲಿ ಅತಿ ಕಡಿಮೆ ಅರಣ್ಯ ಪ್ರದೇಶವಿದೆ? – **ಗೋವಾ**
4. ನಾಗಾರ್ಜುನ ಸಾಗರ ವನ್ಯಜೀವಿಧಾಮವು ಯಾವ ರಾಜ್ಯದಲ್ಲಿದೆ? – **ತೆಲಂಗಾಣ**
5. **ಜೀವಿ ಸಂರಕ್ಷಣಾ ವಲಯ ಎಂದರೇನು?**
   – ಸಂರಕ್ಷಿಸಲ್ಪಟ್ಟ ಭೂಪ್ರದೇಶಗಳ ವಿಶೇಷವಾದ ಒಂದು ಭಾಗ ಅಥವಾ ಕರಾವಳಿಯ ಪರಿಸರ.
6. ವನ್ಯ ಜೀವಿಧಾಮಗಳೆಂದರೇನು? – **ವನಜೀವಿಗಳಿಗೆ ರಕ್ಷಣೆ ನೀಡುವ ಸ್ಥಳಗಳು. (523)**

**II. ಈ ಕೆಳಗಿನ ಪಟ್ಟಿಯನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

| ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು | ಉಷ್ಣವಲಯದ ಎಲೆ ಉದುರಿಸುವ ಕಾಡುಗಳು. |
|---|---|
| **1. ವರ್ಷಕ್ಕೆ 250 ಸೆಂ.ಮೀ.ಗಿಂತ ಹೆಚ್ಚು ಮಳೆಯಾಗುವ ಭಾಗಗಳಲ್ಲಿವೆ. 2. ಮರಗಳು ದಟ್ಟ ಮತ್ತು ಎತ್ತರ ಬೆಳೆಯುತ್ತವೆ.<br>3. ಯಾವುದೇ ಒಂದು ಕಾಲಾವಧಿಯಲ್ಲಿ ಎಲೆ ಉದುರಿಸುವುದಿಲ್ಲ. ಸದಾ ಹಸಿರಾಗಿರುತ್ತವೆ.<br>4. ತೇಗ, ಬೀಟೆ, ಎಬೋನಿ, ಮಹೋಗನಿ, ಗುರ್ಜಾನ್ ಮತ್ತು ಚಂಪ ಮರಗಳು.** | **1. ಪರ್ಣಪಾತಿ ಅರಣ್ಯ ಎಂದು ಕರೆಯುವರು.<br>2. ವರ್ಷಕ್ಕೆ 100–200ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿವೆ.<br>3. ವಸಂತ ಋತು & ಬೇಸಿಗೆ ಆರಂಭದಲ್ಲಿ ಎಲೆ ಉದುರಿಸುತ್ತವೆ.<br>4. ಮಾನ್ಸೂನ್ ಕಾಡುಗಳು ಎಂದು ಕರೆಯುತ್ತಾರೆ.<br>5. ತೇಗ, ಸಲೆ, ಶ್ರೀಗಂಧ, ಕೆಂದಾಳ, ತಪಸಿಮರ, ಮತ್ತಿ, ದೊಡ್ಡಬಾಗೆ, ಮಾವು, ಬೇವು, ಹುಣಸೆ ಮರಗಳು.** |
| ಕುರುಚಲು ಸಸ್ಯ ಮತ್ತು ಹುಲ್ಲುಗಾವಲು. | ಮರುಭೂಮಿ ಸಸ್ಯವರ್ಗ |
| **1. 60–100 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿವೆ.<br>2. ಕುರುಚಲು ಗಿಡ ಮರ & ಕುಬ್ಜ ಒರಟಾದ ಹುಲ್ಲು, ಮುಳ್ಳಿನ ಮರ–ಗಿಡಗಳು ಬೆಳೆಯುತ್ತವೆ.<br>3. ಕಛ್ ಮತ್ತು ಥಾರ್ ಮರುಭೂಮಿಯ ಅಂಚಿನ ಭಾಗಗಳಲ್ಲಿವೆ.** | **1. 10–50 ಸೆಂ.ಮೀ. ವಾರ್ಷಿಕ ಮಳೆಯಾಗುವ ಭಾಗಗಳಲ್ಲಿವೆ<br>2. ಮುಳ್ಳಿನ ಗಿಡಗಂಟಿಗಳು, ಕಗ್ಗಲಿ, ಗೊಬ್ಬಳಿ, ಕಳ್ಳಿ, ಖರ್ಜೂರ, ತಾಳೆ ಮರಗಳು 3. ಥಾರ್ ಮರುಭೂಮಿ. ರಾಜಸ್ತಾನ, ಪಂಜಾಬ್ ಮತ್ತು ಹರಿಯಾಣಗಳ ಕೆಲ ಭಾಗಗಳು ಮತ್ತು ದಖನ್ ಪ್ರಸ್ಥಭೂಮಿಯಲ್ಲಿ ಕಂಡುಬರುತ್ತವೆ.** |
| ಪರ್ವತ ಕಾಡುಗಳು. | ಮ್ಯಾಂಗ್ರೋವ್ ಕಾಡುಗಳು. |
| **1. ಪರ್ವತಗಳ ಇಳಿಜಾರುಗಳಲ್ಲಿ ಬೆಳೆಯುವ ಸಸ್ಯ & ಮರಗಳು.<br>2. ಹಿಮಾಲಯ ಪರ್ವತಗಳು ಹಾಗೂ ನೀಲಗಿರಿ ಬೆಟ್ಟಗಳಲ್ಲಿವೆ.<br>3. ಇಲ್ಲಿನ ಮರಗಳು ಓಕ್, ಚೆಸ್ಟನಟ್, ಆಶ್, ಬೀಚ್, ಪೈನ್, ಸಿಡಾರ್, ಸ್ಪ್ರೂಸ್, ಫರ್ ಮತ್ತು ವಾಲ್‌ನಟ್.** | **1. ಅಧಿಕ ಮಳೆಯ ಜವುಗು ಪ್ರದೇಶ, ನದಿಮುಖಜ ಭೂಮಿ & ಉಬ್ಬರವಿಳಿತಗಳುಳ್ಳ ಸಮುದ್ರ ತೀರಗಳಲ್ಲಿವೆ.<br>2. ಪೂರ್ವ ಕರಾವಳಿಯ ನದಿಮುಖಜ ಭೂಮಿಗಳಲ್ಲಿವೆ.<br>3. ಸುಂದರಿ, ಬೆತ್ತ, ಜರಿಗಿಡ, ತಾಳೆ,ಕಂದಾಳೆ, ಕೇದಿಗೆ ಮರಗಳು<br>4. ಸಮುದ್ರದ ಕಡೆಗೆ ಬಾಗಿರುವ ಕೊಂಬೆಗಳಿಂದ ಬೆಳೆದಿರುವ ಬಿಳಿಲುಗಳು ಮರಗಳಿಗೆ ಆಧಾರ.** |

1. ವರ್ಷದ ಯಾವುದೇ ಒಂದು ಕಾಲಾವಧಿಯಲ್ಲಿಎಲೆ ಉದುರಿಸದಿರುವ ಅರಣ್ಯಗಳ ವಿಧ ಯಾವುದು?
2. ಹಿಮಾಲಯ ಪರ್ವತಗಳಲ್ಲಿ ಯಾವ ವಿಧದ ಅರಣ್ಯಗಳಿವೆ?
3. ಹೆಚ್ಚಾಗಿ ನದಿಮುಖಜ ಭೂಮಿಗಳಲ್ಲಿ ಯಾವ ರೀತಿಯ ಅರಣ್ಯಗಳು ಕಂಡುಬರುತ್ತವೆ?
4. ಯಾವ ಕಾಡುಗಳನ್ನು **ಪರ್ಣಪಾತಿ ಅರಣ್ಯ**ಎಂದು ಕರೆಯುವರು?
5. ಉಷ್ಣವಲಯದ ಎಲೆ ಉದುರಿಸುವ ಕಾಡುಗಳನ್ನು ಮಾನ್ಸೂನ್ ಕಾಡುಗಳು ಎಂದು ಕರೆಯುವರು.ಏಕೆ?
6. ಮ್ಯಾಂಗ್ರೋವ್ ಕಾಡುಗಳ ವಿಶೇಷವೇನು? 7. ಮರುಭೂಮಿ ಸಸ್ಯವರ್ಗವಿರುವ ಪ್ರದೇಶವನ್ನು ಹೆಸರಿಸಿ.
8. ಅರಣ್ಯಗಳ ಲಕ್ಷಣಗಳನ್ನು ತಿಳಿಸಿ **ಅಥವಾ** ಅರಣ್ಯಗಳ ನಡುವಿನ ವ್ಯತ್ಯಾಸ ತಿಳಿಸಿ

**III. ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ.**

**1. ಅರಣ್ಯಗಳ ಪ್ರಾಮುಖ್ಯತೆ ತಿಳಿಸಿ**

1. ಪ್ರವಾಹ ಮತ್ತು ಮಣ್ಣಿನ ಸವೆತ ನಿಯಂತ್ರಣ 2. ಮರುಭೂಮೀಕರಣ ತಡೆಯುತ್ತವೆ, 3. ಮಣ್ಣಿನ ಫಲವತ್ತತೆ ಹೆಚ್ಚಿಸುತ್ತವೆ 4. ವಾಯುಗುಣದ ಸಮತೋಲನಕ್ಕೆ ಸಹಾಯಕ 5. ಪರಿಸರ ಸಮತೋಲನಕ್ಕೆ ಸಹಾಯಕ 6. ವನ್ಯ ಜೀವಿಗಳಿಗೆ ಆಶ್ರಯ. 7. ಜನರಿಗೆ ಉದ್ಯೋಗ ಕಲ್ಪಿಸುತ್ತವೆ.

**2. ಅರಣ್ಯದ ನಾಶಕ್ಕೆ ಕಾರಣಗಳು ಯಾವುವು? / ಇತ್ತೀಚಿನ ವರ್ಷಗಳಲ್ಲಿ ಅರಣ್ಯಗಳ ಕ್ಷೇತ್ರವು ಕಡಿಯಾಗುತ್ತಿದೆ. ಏಕೆ?**

1. ಕೃಷಿ ಕ್ಷೇತ್ರದ ವಿಸ್ತರಣೆ 2. ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ 3. ನೀರಾವರಿ ಯೋಜನೆಗಳ ನಿರ್ಮಾಣ 4. ಕೈಗಾರಿಕೀಕರಣ 5. ನಗರೀಕರಣ 6. ಅತಿಯಾಗಿ ಮೇಯಿಸುವಿಕೆ 7. ಕಾಡ್ಗಿಚ್ಚು

**3. ಅರಣ್ಯ ಸಂರಕ್ಷಣಾ ಕ್ರಮಗಳನ್ನು ತಿಳಿಸಿ. ಅಥವಾ ದೇಶದಲ್ಲಿ ಅರಣ್ಯ ಸಂರಕ್ಷಣೆಗೆ ನಿಮ್ಮ ಸಲಹೆಗಳೇನು?**

1. ಅರಣ್ಯ ನಾಶ ನಿಯಂತ್ರಣ. 2. ಸಾಕುಪ್ರಾಣಿಗಳನ್ನು ಹೆಚ್ಚು ಮೇಯಿಸುವುದರ ನಿಯಂತ್ರಣ 3. ಕಾಡ್ಗಿಚ್ಚು ನಿಯಂತ್ರಣ. 4. ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ. 5. ಮರಗಳ ಕಳ್ಳಸಾಗಣೆ ತಡೆ. 6. ವೈಜ್ಞಾನಿಕವಾಗಿ ಮರ ಕಡಿಯುವುದು. 7. ಅರಣ್ಯನಾಶ ನಿಯಂತ್ರಣ ಕಾಯಿದೆ ಜಾರಿ.

**4. ಜೀವಿ ಸಂರಕ್ಷಣಾ ವಲಯಗಳ ಪ್ರಮುಖ ಉದ್ದೇಶಗಳನ್ನು ತಿಳಿಸಿ.**

1. ಜೀವಿಗಳ ಸಂರಕ್ಷಣೆ, 2. ಸಂಶೋಧನೆ, 3. ಶಿಕ್ಷಣ 4. ಸ್ಥಳೀಯರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು

**5. ಭಾರತದ ಜೀವಿ ಸಂರಕ್ಷಣಾ ವಲಯಗಳನ್ನು ಹೆಸರಿಸಿ.**

–ನೀಲಗಿರಿ, ನಂದಾದೇವಿ, ನೋಕ್ರೆಕ್, ಮಾನಸ, ಗ್ರೇಟ್ ನಿಕೋಬರ್, ಮನ್ನಾರ್‌ಖಾರಿ, ಸುಂದರಬನ, ಸಿಮಿಲಿಪಾಲ್,ಕಾಂಚನಜಂಗ,

**6.** ಕರ್ನಾಟಕದಲ್ಲಿರುವ ರಾಷ್ಟ್ರೀಯ ಉದ್ಯಾನಗಳನ್ನು ಹೆಸರಿಸಿ. – **ಬಂಡಿಪುರ, ಬನ್ನೇರುಘಟ್ಟ ಮತ್ತು ನಾಗರಹೊಳೆ**

7. ಕರ್ನಾಟಕದಲ್ಲಿರುವ ವನ್ಯ ಜೀವಿಧಾಮಗಳನ್ನು ಹೆಸರಿಸಿ. – **ದಾಂಡೇಲಿ, ಭದ್ರ, ತಲಕಾವೇರಿ, ಬಿಳಿಗಿರಿರಂಗನಬೆಟ್ಟ**

## ಅಧ್ಯಾಯ – 6. ಭಾರತದ ಜಲಸಂಪನ್ಮೂಲಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸಿಂಧೂ ನದಿ ಎಲ್ಲಿ ಉಗಮವಾಗುತ್ತದೆ? – **ಕೈಲಾಸ ಪರ್ವತ** (ಟಿಬೆಟ್)
2. ದಕ್ಷಿಣ ಭಾರತದ ಉದ್ದವಾದ ನದಿ ಯಾವುದು? – **ಗೋದಾವರಿ ನದಿ**
3. ಹಿರಾಕುಡ್ ಅಣೆಕಟ್ಟೆಯನ್ನು ಯಾವ ನದಿಗೆ ನಿರ್ಮಿಸಲಾಗಿದೆ? – **ಮಹಾನದಿ**
4. ಕೋಸಿ ಯೋಜನೆಯು ಯಾವ ದೇಶಗಳ ಸಂಯುಕ್ತ ಯೋಜನೆಯಾಗಿದೆ? – **ಭಾರತ ಮತ್ತು ನೇಪಾಳ (ಹನುಮಾನ್ ನಗರ)**
5. ಉತ್ತರ ಭಾರತದ ಪ್ರಮುಖ ನದಿಗಳು ಯಾವುವು? – **ಸಿಂಧೂ, ಗಂಗಾ, ಬ್ರಹ್ಮಪುತ್ರ**
6. ಸಿಂಧೂನದಿಯ ಉಪನದಿಗಳು ಯಾವುವು? – **ಝೀಲಂ, ಚೀನಾಬ್, ಬಿಯಾಸ್, ರಾವಿ, ಸಟ್ಲೇಜ್**
7. ಭಾರತದ ಉದ್ದವಾದ ನದಿ ಯಾವುದು? – **ಗಂಗಾ ನದಿ**
8. ಗಂಗಾ ನದಿ ಎಲ್ಲಿ ಉಗಮ ಹೊಂದುತ್ತದೆ? – **ಗಂಗೋತ್ರಿ**
9. ಬ್ರಹ್ಮಪುತ್ರ ನದಿ ಎಲ್ಲಿ ಉಗಮ ಹೊಂದುತ್ತದೆ? – **ಚೆಮಯಂಗ್‌ಡಂಗ್** (ಮಾನಸ ಸರೋವರದ ಬಳಿ, ಟಿಬೆಟ್)
10. ದಕ್ಷಿಣ ಭಾರತದ ಪ್ರಮುಖ ನದಿಗಳನ್ನು ಹೆಸರಿಸಿ. – **ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ, ನರ್ಮದಾ, ತಾಪಿ**
11. ಪೂರ್ವಕ್ಕೆ ಹರಿಯುವ ನದಿಗಳು ಯಾವುವು? – **ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ**
12. ಮಹಾನದಿಯು ಎಲ್ಲಿ ಉಗಮ ಹೊಂದುತ್ತದೆ? – **ಸಿವಾಹ ಸರಣಿ**
13. ಗೋದಾವರಿ ನದಿ ಎಲ್ಲಿ ಉಗಮ ಹೊಂದುತ್ತದೆ? – **ತ್ರಯಂಬಕ**
14. ಕೃಷ್ಣ ನದಿ ಎಲ್ಲಿ ಉಗಮ ಹೊಂದುತ್ತದೆ? – **ಮಹಬಲೇಶ್ವರ**
15. ಪಶ್ಚಿಮಕ್ಕೆ ಹರಿಯುವ ನದಿಗಳನ್ನು ಹೆಸರಿಸಿ. –**ನರ್ಮದ ಮತ್ತು ತಾಪಿ**
16. ನರ್ಮದಾ ನದಿ ಎಲ್ಲಿ ಉಗಮ ಹೊಂದುತ್ತದೆ? –**ಅಮರಕಂಟಕ ಬೆಟ್ಟ**
17. ತಾಪಿ ನದಿಯು ಎಲ್ಲಿ ಉಗಮ ಹೊಂದುತ್ತದೆ? –**ಮೂಲ್ತಾಯಿ**
18. ನೀರಾವರಿ ಎಂದರೇನು? – **ಕೃಷಿ ಭೂಮಿಗೆ ಕೃತಕವಾಗಿ ಕೆರೆ, ಬಾವಿ, ಮತ್ತು ಕಾಲುವೆಗಳಿಂದ** ನೀರು ಸರಬರಾಜು **ಮಾಡುವುದು.**
19. ಇತ್ತೀಚೆಗೆ ಬಂದಿರುವ ನೀರಾವರಿ ವಿಧಾನಗಳು ಯಾವುವು? –ಹನಿ ನೀರಾವರಿ ಮತ್ತು ಸಿಂಪಡಣೆ ನೀರಾವರಿ
20. ಕಾಲುವೆಯ ವಿಧಗಳು ಯಾವುವು? –**ಪ್ರವಾಹ ಕಾಲುವೆ ಮತ್ತು ಸಾರ್ವಕಾಲಿಕ ಕಾಲುವೆ**
21. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಎಂದರೇನು? –**ವಿವಿಧ ಉದ್ದೇಶಗಳನ್ನು ಪೂರೈಸುವ ಯೋಜನೆ**
22. ಭಾರತದ ಮೊಟ್ಟಮೊದಲ ವಿವಿಧೋದ್ದೇಶ ನದಿಕಣಿವೆ ಯೋಜನೆ ಯಾವುದು? – **ದಾಮೋದರ ನದಿ ಕಣಿವೆ ಯೋಜನೆ**
23. **ದಾಮೋದರ ನದಿ ಕಣಿವೆ ಯೋಜನೆಯನ್ನು ಯಾವ ಮಾದರಿಯನ್ನಾಧರಿಸಿ ರೂಪಿಸಲಾಗಿದೆ?** ಅಮೆರಿಕದ **ಟೆನಿಸ್ಸಿ ಕಣಿವೆ ಯೋಜನೆ**
24. ಭಾರತದಲ್ಲಿ **ನೇರವಾದ ಗುರುತ್ವವುಳ್ಳ ಅಣೆಕಟ್ಟೆ** ಯಾವುದು? – **ಭಾಕ್ರಾ ಅಣೆಕಟ್ಟೆ**
25. ದಾಮೋದರ ನದಿಯನ್ನು**ಬಂಗಾಳದ ದುಃಖಕಾರಿ ನದಿ**ಎಂದು ಕರೆಯಲಾಗುತ್ತದೆ.ಏಕೆ?
   – ಮಳೆಗಾಲದಲ್ಲಿ ಈ ನದಿಯು ಪ್ರವಾಹದಿಂದ ಉಕ್ಕಿ ಹರಿದಾಗ ಬೆಳೆಗಳು ಮತ್ತು ಜನ ವಸತಿಗಳಿಗೆ ಹಾನಿಯಾಗುತ್ತಿತ್ತು.

26. ಭಾಕ್ರಾ ಅಣೆಕಟ್ಟೆಯಿಂದ ನಿರ್ಮಿತಗೊಂಡ ಜಲಾಶಯ ಯಾವುದು? **–ಗೋವಿಂದ ಸಾಗರ (ಸಟ್ಲೇಜ್ ನದಿ)**
27. ಭಾರತದಲ್ಲೇ ಉದ್ದವಾದ ಅಣೆಕಟ್ಟು ಯಾವುದು? **– ಹಿರಾಕುಡ್ ಅಣೆಕಟ್ಟೆ** (ಒಡಿಶಾ ರಾಜ್ಯ, (**ಮಹಾನದಿ)**
28. ತುಂಗಭದ್ರ ನದಿಗೆ ಎಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದೆ? **– ಬಳ್ಳಾರಿ ಜಿಲ್ಲೆಯ ಹೊಸಪೇಟೆ ಬಳಿಯ ಮಲ್ಲಾಪುರಂ**
29. ತುಂಗಭದ್ರ ಯೋಜನೆಯಿಂದ ನಿರ್ಮಾಣಗೊಂಡ ಜಲಾಶಯ ಯಾವುದು? **–ಪಂಪಸಾಗರ**
30. ಕರ್ನಾಟಕದ ಅತಿದೊಡ್ಡ ವಿವಿಧೋದ್ದೇಶ ನದಿಕಣಿವೆ ಯೋಜನೆ ಯಾವುದು? **–ಕೃಷ್ಣ ಮೇಲ್ದಂಡೆಯ ಯೋಜನೆ**
31. ರಿಹಾಂದ್ ಯೋಜನೆಯಿಂದ ನಿರ್ಮಾಣಗೊಂಡ ಜಲಾಶಯ ಯಾವುದು? **– ಗೋವಿಂದವಲ್ಲಭಪಂತ್ ಸಾಗರ**(ಉ.ಪ್ರದೇಶ)

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಭಾರತದ ಪ್ರಮುಖ ನೀರಾವರಿ ವಿಧಗಳನ್ನು ತಿಳಿಸಿ.** – 1. ಬಾವಿ, 2. ಕಾಲುವೆ, 3. ಕೆರೆ ನೀರಾವರಿ

**2. ಭಾರತದಲ್ಲಿ ನೀರಾವರಿ ಅತ್ಯಾವಶ್ಯಕ ಏಕೆ?**
1. ಕೃಷಿ ಪ್ರಧಾನ ದೇಶ. ಕೃಷಿಗೆ ನಿರಂತರ ನೀರಾವರಿ ಅಗತ್ಯ. 2. ಕೃಷಿಯು ಮಾನ್ಸೂನ್ ಮಳೆಯನ್ನಾಧರಿಸಿದೆ.
3. ಮಳೆ ಋತುಕಾಲಿಕ, ಅಕಾಲಿಕ ಮತ್ತು ಅಸಮಾನ. 4. ಕೆಲವು ಬೆಳೆಗಳಿಗೆ ನೀರಿನ ನಿರಂತರ ಪೂರೈಕೆ.
5. ಅಧಿಕ ಇಳುವರಿ ಮತ್ತು ಉತ್ಪಾದನೆಗೆ ನಿರಂತರ ನೀರಿನ ಪೂರೈಕೆ.

**3. ನೀರಾವರಿಯ ಮೂಲಗಾಳುವುವು?** – **1.** ಭೂಮಿಯ ಮೇಲಿನ ನೀರಿನ ಮೂಲಗಳು : – ಮಳೆ, ನದಿ, ಸರೋವರ, ಕೆರೆ
**2.** ಅಂತರ್ಜಲದ ನೀರಿನ ಮೂಲಗಳು :– ಬಾವಿಗಳು , ಚಿಲುಮೆಗಳು

**4. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳಾವುವು?**
1. ನೀರಾವರಿ ಪೂರೈಕೆ. 2. ಪ್ರವಾಹಗಳ ನಿಯಂತ್ರಣ. 3. ಜಲ ವಿದ್ಯುತ್ ತಯಾರಿಕೆ 4. ಮಣ್ಣಿನ ಸವೆತ ನಿಯಂತ್ರಣ.
5.ಒಳನಾಡಿನ ನೌಕಾಯಾನ. 6.ಒಳನಾಡಿನ ಮೀನುಗಾರಿಕೆ. 7.ಮನರಂಜನೆ ಸೌಲಭ್ಯ. 8.ಗೃಹಬಳಕೆ ಮತ್ತು ಕೈಗಾರಿಕೆಗಳಿಗೆ ನೀರು

**5. ಬಾವಿ ನೀರಾವರಿಯ ಪ್ರಾಮುಖ್ಯತೆ ತಿಳಿಸಿ.**
1. ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ. 2. ಕಡಿಮೆ ವೆಚ್ಚದಲ್ಲಿ ತೋಡಬಹುದು.
3. ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ. 4. ಸಣ್ಣ ಭೂ ಹಿಡುವಳಿ ರೈತರಿಗೂ ಇದು ಲಭ್ಯ.

**6. ಸರ್ವಕಾಲಿಕ ಕಾಲುವೆ ಮತ್ತು ಪ್ರವಾಹ ಕಾಲುವೆಗಳ ವ್ಯತ್ಯಾಸ ತಿಳಿಸಿ.**

| **ಸರ್ವಕಾಲಿಕ ಕಾಲುವೆ** | **ಪ್ರವಾಹ ಕಾಲುವೆ** |
|---|---|
| 1. ನದಿಗಳಿಗೆ ಅಣೆಕಟ್ಟೆ ನಿರ್ಮಿಸಿ ನೀರು ಸಂಗ್ರಹ. | 1. ನದಿಗಳಿಗೆ ನೇರವಾಗಿ ಕಾಲುವೆ ತೋಡಲಾಗಿರುತ್ತದೆ |
| 2. ಎಲ್ಲಾ ಕಾಲದಲ್ಲೂ ನೀರು ಪೂರೈಕೆ ಸಾಧ್ಯ | 2. ಮಳೆಗಾಲದಲ್ಲಿ ಹರಿಯುತ್ತವೆ |
| 3. ಕಾಲುವೆಗಳ ಮೂಲಕ ನೀರು ಪೂರೈಕೆ | 3. ವರ್ಷದ ಕೇಲವು ತಿಂಗಳು ಮಾತ್ರ ನೀರಾವರಿ ಬಳಕೆ ಸಾಧ್ಯ. |

## ಅಧ್ಯಾಯ–7. ಭಾರತದ ಭೂ ಸಂಪನ್ಮೂಲಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭೂ ಬಳಕೆ ಎಂದರೇನು? **– ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದು.** (ಉದಾ: ಅರಣ್ಯ, ವ್ಯವಸಾಯ)
2. ಸಾಗುವಳಿಗೆ ಬಳಕೆಯಾಗದ ಭೂಮಿಯನ್ನು ಏನೆಂದು ಕರೆಯಲಾಗಿದೆ? **– ಪಾಳು ಭೂಮಿ**
3. ಭಾರತದಲ್ಲಿ ಯಾವ ರಾಜ್ಯವು ಅತಿ ಹೆಚ್ಚು ಭತ್ತ ಉತ್ಪಾದಿಸುತ್ತದೆ? **– ಪಶ್ಚಿಮ ಬಂಗಾಳ**
**4. ವ್ಯವಸಾಯ/ ಕೃಷಿ ಎಂದರೇನು?** – ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಬೆಳೆಯಲು ಭೂಮಿ ಉಳುಮೆ ಮಾಡುವುದು.
**5. ಜೀವನಾಧಾರಿತ ಬೇಸಾಯ ಎಂದರೇನು?** – ರೈತ ಆತನ ಕುಟುಂಬದ ಬಳಕೆಗಾಗಿ ಬೆಳೆ ಬೆಳೆಯುವುದು.
6. ಜೀವನಾಧಾರಿತ ಬೇಸಾಯದ ವಿಧಗಳು ಯಾವುವು? **– ವರ್ಗಾವಣೆ ಬೇಸಾಯ ಮತ್ತು ಸ್ಥಿರ ಬೇಸಾಯ.**
**7. ವರ್ಗಾವಣೆ ಬೇಸಾಯ ಎಂದರೇನು?**
– ಕಾಡಿನ ಸ್ವಲ್ಪ ಭಾಗವನ್ನು ಕತ್ತರಿಸಿ, ಸುಟ್ಟು ಕೆಲವು ವರ್ಷಗಳ ಕಾಲ ಬೇಸಾಯ ಮಾಡಿ. ನಂತರ ಮಣ್ಣಿನ ಸಾರ ಕಡಿಮೆಯಾದ ಮೇಲೆ ಅದನ್ನು ಬಿಟ್ಟು ಮತ್ತೊಂದೆಡೆಗೆ ವಲಸೆ ಹೋಗಿ ಅದೇ ರೀತಿಯ ಬೇಸಾಯ ಮುಂದುವರಿಸುವುದು
**8. ಸ್ಥಿರ ಅಥವಾ ಸ್ಥಾಯಿ ಬೇಸಾಯ ಎಂದರೇನು?** – ಶಾಶ್ವತವಾಗಿ ಒಂದೇ ಕಡೆ ನೆಲೆಸಿ ಸಾಗುವಳಿ ಮಾಡುವುದು.
**9. ಸಾಂದ್ರ ಬೇಸಾಯ ಎಂದರೇನು?**–ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವ ಬೇಸಾಯ.
**10. ವಾಣಿಜ್ಯ ಬೇಸಾಯ ಎಂದರೇನು?** – ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿ ವಿಧಾನ
**11. ಮಿಶ್ರಣ ಬೇಸಾಯ ಎಂದರೇನು?** – ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿ ವಿಧಾನ.
**12. ನೆಡುತೋಪು ಬೇಸಾಯ ಎಂದರೇನು?**
– ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆ ಸಾಗುವಳಿ ಮಾಡುವುದು. ಉದಾ: ಕಾಫಿ ಚಹ,
**13. ಒಣ ಬೇಸಾಯ ಎಂದರೇನು?** – ಅತಿ ಕಡಿಮೆ ಮಳೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ, ಇದ್ದರೂ ಅದು ಮಿತವಾಗಿರುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ.
**14. ಆರ್ದ್ರ ಬೇಸಾಯ ಎಂದರೇನು?** – ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿ ನೆರವಿಲ್ಲದೆ ಬೆಳೆಯುವ ಬೆಳೆ.

**15. ನೀರಾವರಿ ಬೇಸಾಯ ಎಂದರೇನು?** – ನೀರಾವರಿ ಸಹಾಯದಿಂದ ಬೆಳೆ ಬೆಳೆಯುವ ಕೃಷಿ ವಿಧಾನ.

**16. ಮುಂಗಾರು ಬೆಳೆ ಋತು ಎಂದರೇನು?** – ಮಳೆಗಾಲದಲ್ಲಿ ಬೆಳೆ ಬೆಳೆಯುವುದು.

**17. ಹಿಂಗಾರು ಬೆಳೆ ಋತು ಎಂದರೇನು?**

– ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಿ ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡುವುದು.

**18. ಜೇಡ್ ಬೆಳೆ ಋತು ಎಂದರೇನು?** – ಹಿಂಗಾರು & ಮುಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆ ಬೆಳೆಯುವುದು.

**19. ಬೆಳೆಯಿಡುವ ಮಾದರಿ ಎಂದರೇನು? –ಒಂದು ನಿರ್ದಿಷ್ಟ ಅವಧಿಯಲ್ಲಿ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತ.**

20. ಭಾರತದಲ್ಲೇ ಅತಿ ಹೆಚ್ಚು ಗೋಧಿ ಉತ್ಪಾದಿಸುವ ರಾಜ್ಯ ಯಾವುದು? – **ಉತ್ತರ ಪ್ರದೇಶ**

**21. ನಾರು ಬೆಳೆಗಳು ಎಂದರೇನು?** – ಜವಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾಪದಾರ್ಥ ಪೂರೈಸುವ ಬೆಳೆಗಳು. ಹತ್ತಿ, ಸೆಣಬು.

**22. ತೋಟಗಾರಿಕೆ ಬೇಸಾಯ ಎಂದರೇನು?**

– ಹಣ್ಣು, ತರಕಾರಿ, ಹೂವು, ಔಷಧೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದು.

**23. ಪುಷ್ಪ ಕೃಷಿ ಎಂದರೇನು?** – ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ ಪುಷ್ಪ ಕೃಷಿ ಎನ್ನುವರು.

24. ಪಾನೀಯ ಬೆಳೆಗಳೆಂದರೇನು?

**– ಆಹ್ಲಾದಕರ ಪಾನೀಯಗಳ ತಯಾರಿಕೆಗೆ ಉಪಯುಕ್ತವಾಗುವ ಬೆಳೆಗಳಿಗೆ ಪಾನೀಯ ಬೆಳೆಗಳೆಂದು ಹೆಸರು.ಉದಾ: ಕಾಫಿ, ಚಹ**

**25.** ನೀರಾವರಿ ಬೇಸಾಯ **ಭಾರತಕ್ಕೆ ಅತ್ಯಾವಶ್ಯಕವಾದುದು.** ಏಕೆ?

– ಏಕೆಂದರೆ ಭಾರತದಲ್ಲಿ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನವಾಗಿರುವುದರಿಂದ

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**2. ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು? / ಭಾರತದ ಭೂಬಳಕೆಯು ಯಾವ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ?**

1. ಭೂ ಮೇಲ್ಮೈಲಕ್ಷಣ, 2.ವಾಯುಗುಣ, 3.ಮಣ್ಣು, 4. ಜನಸಾಂದ್ರತೆ, 5 ಸಾಮಾಜಿಕ,ಆರ್ಥಿಕ & ತಾಂತ್ರಿಕ ಅಂಶಗಳು.

**1. ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ವ್ಯತ್ಯಾಸ ತಿಳಿಸಿ.**

| ಮುಂಗಾರು ಬೆಳೆ | ಹಿಂಗಾರು ಬೆಳೆ |
|---|---|
| **1. ನೈಋತ್ಯ ಮಾನ್ಸೂನ್/ ಮಳೆಗಾಲದಲ್ಲಿ ಬೆಳೆ ಬೆಳೆಯುವುದು** | **1. ಹಿಂಗಾರು ಮಳೆಗಾಲ ಅಥವಾ ಈಶಾನ್ಯ ಮಾನ್ಸೂನ್ ಕಾಲದಲ್ಲಿಬೆಳೆ ಬೆಳೆಯುವುದು** |
| **2. ಜೂನ್–ಜುಲೈ ತಿಂಗಳಲ್ಲಿ ಬಿತ್ತನೆ ಮಾಡುವುದು.** | **2. ಅಕ್ಟೋಬರ್–ನವೆಂಬರ್‌ಗಳಲ್ಲಿ ಬಿತ್ತನೆ ಮಾಡಿ ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಬೆಳೆ ಕಟಾವು ಮಾಡುವುದು** |
| **3. ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಬೆಳೆ ಕಟಾವು ಮಾಡುವುದು.** | **3. ಬೆಳೆಗಳು–ಗೋಧಿ, ಬಾರ್ಲಿ, ಕಡಲೆ,ನಾರಗಸೆ,** |
| **4. ಬೆಳೆಗಳು –ಭತ್ತ, ರಾಗಿ, ಜೋಳ, ಹತ್ತಿ, ನೆಲಕಡಲೆ, ತಂಬಾಕು** | |

**3. ಭಾರತದಲ್ಲಿ ಭೂ ಬಳಕೆಯ ಮಾದರಿಗಳನ್ನು ಹೆಸರಿಸಿ.**

1. ನಿವ್ವಳ ಸಾಗುವಳಿ ಪ್ರದೇಶ. 2. ಅರಣ್ಯ ಪ್ರದೇಶ. 3. ಕೃಷಿಗಾಗಿ ದೊರೆಯದ ಭೂಮಿ. 4. ಪಾಳುಭೂಮಿ,
5. ಬಳಕೆಯಾಗದ ಕೃಷಿ ಯೋಗ್ಯಭೂಮಿ. 6. ಖಾಯಂ ಹುಲ್ಲುಗಾವಲು ಮತ್ತು ಇತರೆ ಗೋಮಾಳ.

**4. ಭಾರತದ ವ್ಯವಸಾಯದ ಋತುಮಾಗಳಾವುವು?**

1. ಮುಂಗಾರು ಬೆಳೆ ಋತು. 2. ಹಿಂಗಾರು ಬೆಳೆ ಋತು 3. ಜೇಡ್ ಬೆಳೆ ಋತು. (ಜೈಡ್)

**5. ಭಾರತದಲ್ಲಿ ತೋಟಗಾರಿಕೆ ಬೇಸಾಯದ ಮಹತ್ವವನ್ನು ತಿಳಿಸಿ.**

1. ಸಮರ್ಪಕ ಭೂಬಳಕೆ, 2. ನೈಸರ್ಗಿಕ ಸಂಪನ್ಮೂಲಗಳ ಆದರ್ಶದಾಯಕ ಬಳಕೆ
3. ಗ್ರಾಮೀಣ ಸಮುದಾಯಕ್ಕೆ ಪರಿಣಿತ ಉದ್ಯೋಗ ಪೂರೈಕೆ 4. ರಫ್ತು ವ್ಯಾಪಾರವನ್ನು ವೃದ್ಧಿಸುತ್ತದೆ
5. ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಲು ಉತ್ತೇಜನ ನೀಡುತ್ತದೆ. 6. ಆಹಾರ ಭದ್ರತೆಗೆ ನೆರವಾಗುತ್ತದೆ.

**6. ದೇಶದ ಕೃಷಿಯ ಮೇಲೆ ಪುಷ್ಪ ಕೃಷಿಯು ಮಹತ್ವದ ಪಾತ್ರವಹಿಸುತ್ತದೆ. ಹೇಗೆ? ಅಥವಾ ಪುಷ್ಪ ಕೃಷಿಯ ಮಹತ್ವ ತಿಳಿಸಿ.**

1. ರೈತರ ಆದಾಯ ಗಳಿಕೆ ಹೆಚ್ಚಿಸುತ್ತದೆ, 2. ಉದ್ಯೋಗ ಅವಕಾಶ ಕಲ್ಪಿಸುತ್ತದೆ
3. ಮಹಿಳೆಯರಿಗೆ ವೃತ್ತಿ ಅವಕಾಶ ಕಲ್ಪಿಸುತ್ತದೆ 4. ದೇಶದ ರಫ್ತು ವ್ಯಾಪಾರದ ವೃದ್ಧಿಗೆ ನೆರವು.

**7. ಭಾರತದ ಆರ್ಥಿಕಾಭಿವೃದ್ಧಿಯು ಕೃಷಿಯ ಪ್ರಗತಿಯನ್ನಾಧರಿಸಿದೆ. ಹೇಗೆ? ಅಥವಾ ಕೃಷಿಯ ಪ್ರಾಮುಖ್ಯತೆಯನ್ನು ತಿಳಿಸಿ.**

1. ಜನರ ಮುಖ್ಯ ಜೀವನಾಧಾರವಾಗಿದೆ. 2. ಜನರು ಮತ್ತು ಪ್ರಾಣಿಗಳಿಗೆ ಆಹಾರ ಪೂರೈಸುತ್ತದೆ.
3. ರಾಷ್ಟ್ರೀಯ ಆದಾಯದ ಮೂಲವಾಗಿದೆ. 4. ತೃತೀಯ ವಲಯಕ್ಕೆ ನೆರವು. ಉದಾ: ಸಾರಿಗೆ, ಬ್ಯಾಂಕಿಂಗ್
5. ಕೈಗಾರಿಕೆಗಳಿಗೆ ಕಚ್ಚಾವಸ್ತು ಪೂರೈಕೆ. 6. ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೆ ಪ್ರಭಾವ.

**8. ಕಬ್ಬು ಬೇಸಾಯಕ್ಕೆ ಬೇಕಾಗುವ ಪರಿಸ್ಥಿತಿಗಳು ಯಾವುವು?**

1. ಕಬ್ಬು ಬೇಸಾಯಕ್ಕೆ ನೀರಾವರಿ ಅಗತ್ಯ. 2. 21°– 26°ಸೆ ಉಷ್ಣಾಂಶ ಮತ್ತು 100 – 150 ಸೆಂಮೀ ಮಳೆ ಅವಶ್ಯಕ.
3. ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಅವಶ್ಯಕ. 4. ಮೆಕ್ಕಲು ಮತ್ತು ಜೇಡಿ ಮಿಶ್ರಿತ ಮರಳು ಮಣ್ಣುಗಳು ಸೂಕ್ತ.

**9. ಭತ್ತ ಮತ್ತು ಗೋಧಿ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳಾವುವು?**

| **ಭತ್ತ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳು** | **ಗೋಧಿ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳು** |
|---|---|
| * ಮುಂಗಾರು ಬೆಳೆಯಾಗಿದೆ.<br>*. ಉಷ್ಣವಲಯದ ಬೆಳೆ<br>*. 18°– **25**°ಸೆಲ್ಸಿಯಸ್ ಉಷ್ಣಾಂಶ ಅಗತ್ಯ<br>*. 100 – 200 ಸೆಂ.ಮೀ ವಾರ್ಷಿಕ ಮಳೆ ಬೇಕು<br>*. ಮೆಕ್ಕಲು & ಜೇಡಿ ಮಿಶ್ರಿತ ಮರಳು ಮಣ್ಣು ಸೂಕ್ತ<br>*. ಭತ್ತದ ಗಿಡದ ತಳದಲ್ಲಿ ನೀರು ನಿಂತಿರಬೇಕು | * ಹಿಂಗಾರು ಕಾಲದ ಬೆಳೆ<br>* ಸಮಶೀತೋಷ್ಣ ವಲಯದ ಬೆಳೆ<br>* 10°– 15°ಸೆಲ್ಸಿಯಸ್ ಉಷ್ಣಾಂಶ<br>* 50 – 70 ಸೆಂ.ಮೀ ವಾರ್ಷಿಕ ಮಳೆ ಬೇಕು<br>* ಮರಳು ಮಿಶ್ರಿತ ಮಣ್ಣು & ಕಪ್ಪು ಮಣ್ಣು ಸೂಕ್ತ |

**10. ಹತ್ತಿ ಮತ್ತು ಚಹ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳಾವುವು?**

| **ಹತ್ತಿ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳು** | **ಚಹ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳು** |
|---|---|
| *. ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ<br>*. 21ಲಿ ರಿಂದ 24ಲಿಸೆಲ್ಸಿಯಸ್ ಉಷ್ಣಾಂಶ<br>* 50– 100 ಸೆಂ.ಮೀ ವಾರ್ಷಿಕ ಮಳೆ<br>*. ಕಪ್ಪುಮಣ್ಣು, ಮೆಕ್ಕಲು ಮಣ್ಣು ಸೂಕ್ತ | * ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ<br>* 150 – 250 ಸೆಂ.ಮೀ ವಾರ್ಷಿಕ ಮಳೆ<br>* ಕೊಳೆತ ಸಸ್ಯಾಂಶವುಳ್ಳ ಆಳವಾದ ಫಲವತ್ತಾದ ಮಣ್ಣು<br>* ಸಮುದ್ರ ಮಟ್ಟಕ್ಕೆ 1200–2400ಮೀ ಎತ್ತರವುಳ್ಳ ಬೆಟ್ಟಗಳ ಇಳಿಜಾರು ಭೂಮಿ |

## ಅಧ್ಯಾಯ–8. ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1 ಭಾರತದ ಅತ್ಯಂತ ಪ್ರಮುಖವಾದ ಮಿಶ್ರಲೋಹ ಯಾವುದು? – **ಮ್ಯಾಂಗನೀಸ್**

2. ಅಲ್ಯೂಮಿನಿಯಂನ ಪ್ರಮುಖ ಕಚ್ಚಾ ಪದಾರ್ಥ ಯಾವುದು? – **ಬಾಕ್ಸೈಟ್**

3. ಭಾರತದ ಅತ್ಯಂತ ಪ್ರಮುಖವಾದ ಅಲೋಹ ಖನಿಜ ಯಾವುದು? – **ಅಬ್ರಕ**

4. ಸಸ್ಯಾವಶೇಷ ಇಂಧನ ಯಾವುದು? – **ಕಲ್ಲಿದ್ದಲು**

5. ಗಣಿಗಾರಿಕೆ ಎಂದರೇನು? – **ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯ**

6. ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರು ಉತ್ಪಾದಿಸುವ ರಾಜ್ಯ ಯಾವುದು? – **ಒಡಿಶಾ**

7. ಭಾರತದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ರಾಜ್ಯ ಯಾವುದು? – **ಆಂಧ್ರ ಪ್ರದೇಶ**

8. ಶಕ್ತಿ ಸಂಪನ್ಮೂಲ ಎಂದರೇನು? – **ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲ**

9. ಹೈಡ್ರೋಕಾರ್ಬನ್‌ವುಳ್ಳ ಖನಿಜತೈಲ ಯಾವುದು? – **ಪೆಟ್ರೋಲಿಯಂ**

10. ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲಿಗೆ ಎಲ್ಲಿ ಕಂಡುಹಿಡಿಯಲಾಯಿತು.? – **ಮಾಕುಂ** (ಅಸ್ಸಾಂ)

11. **ಭಾರತದಲ್ಲಿ ಮೊದಲ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ಎಲ್ಲಿ ಸ್ಥಾಪಿಸಲಾಯಿತು**? – **ಡಾರ್ಜಲಿಂಗ್** (ಪಶ್ಚಿಮಬಂಗಾಳ)

12 ಭಾರತದಲ್ಲಿ ಮೊದಲಿಗೆ ಜಲವಿದ್ಯುಚ್ಛಕ್ತಿ ಉತ್ಪಾದಿಸಿದ್ದು ಎಲ್ಲಿ? – **ಶಿವನಸಮುದ್ರ** (ಕಾವೇರಿ ನದಿ 1902)

13. ಪರಮಾಣುಶಕ್ತಿ ಎಂದರೇನು? –**ಪರಮಾಣು ಖನಿಜಗಳಿಂದ ತಯಾರಿಸುವ ವಿದ್ಯುಚ್ಛಕ್ತಿ**

14. ಜಲ ವಿದ್ಯುಚ್ಛಕ್ತಿ ಎಂದರೇನು? – **ಧುಮುಕುವ ನೀರಿನ ರಭಸದಿಂದ ಉತ್ಪಾದಿಸುವ ವಿದ್ಯುತ್**

**15. ಭಾರತದಲ್ಲಿ ಇತ್ತೀಚೆಗೆ ಅಭ್ರಕದ(ಮೈಕಾ) ರಫ್ತು ಕಡಿಮೆಯಾಗಿದೆ ಏಕೆ?**

– ಹಲವಾರು ರಾಷ್ಟ್ರಗಳಲ್ಲಿ ಕೃತಕ ಅಭ್ರಕದ ಉತ್ಪಾದನೆ ಮಾಡುತ್ತಿರುವುದರಿಂದ.

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಖನಿಜಗಳ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ ದೇಶವೊಂದರ ಸಮೃದ್ಧಿಯಲ್ಲಿ ಖನಿಜಗಳ ಪಾತ್ರ ಮಹತ್ವದ್ದು. ಸಮರ್ಥಿಸಿ.**

1. ಕೈಗಾರಿಕಾಪ್ರಗತಿಗೆ ಉಪಯುಕ್ತ. 2. ನಿರ್ಮಾಣ ಕಾರ್ಯಕ್ಕೆ ಅವಶ್ಯಕ 3. ಸಾರಿಗೆ ಮತ್ತು ಸಂಪರ್ಕಗಳ ಪ್ರಗತಿ, 4. ವ್ಯಾಪಾರ ಮತ್ತು ವಾಣಿಜ್ಯದ ಪ್ರಗತಿಗೆ ಉಪಯುಕ್ತ. 5. ಆರ್ಥಿಕ ಮೌಲ್ಯ ಹೊಂದಿವೆ. ಉದಾ : ಚಿನ್ನ, ಬೆಳ್ಳಿ

2. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ – **ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕಾನಿಲ**

3. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ. – **ಸೌರಶಕ್ತಿ, ಪವನಶಕ್ತಿ, ಉಬ್ಬರವಿಳಿತ ಶಕ್ತಿ, ಭೂಗರ್ಭಶಕ್ತಿ, ಜೈವಿಕ ಅನಿಲ**

4. ಕಲ್ಲಿದ್ದಲಿನಿಂದ ದೊರೆಯುವ ಉಪವಸ್ತುಗಳು ಯಾವುವು?

**– ಅಮೋನಿಯ, ಕೋಲ್‌ಟಾರ್, ಕೋಲ್‌ಗ್ಯಾಸ್, ಬೆಂಜಾಲ್, ನ್ಯಾಪ್ತ, ಸಲ್ಫರ್**

**5. ಮ್ಯಾಂಗನೀಸ್ ಅದಿರಿನ ಮಹತ್ವವನ್ನು ವಿವರಿಸಿ.**

1. ಪ್ರಮುಖ ಮಿಶ್ರಲೋಹ ಖನಿಜ. 2. ಉಕ್ಕು ತಯಾರಿಸಲು ಉಪಯೋಗ

3. ಬ್ಯಾಟರಿ, ಬಣ್ಣ, ಗಾಜು ತಯಾರಿಕೆಗೆ ಬಳಕೆ. 4. ಪಿಂಗಾಣಿ ಮತ್ತು ಕ್ಯಾಲಿಕೊ ಪ್ರಿಂಟಿಂಗ್‌ಗೆ ಬಳಕೆ

**6. ಅಭ್ರಕದ ಉಪಯೋಗಗಳೇನು?**

1. ಪಾರದರ್ಶಕ ಮತ್ತು ಶಾಖ ನಿರೋಧಕ ಗುಣ. 2.ವಿದ್ಯುತ್ ಉಪಕರಣಗಳಲ್ಲಿ ಬಳಕೆ, 3. ಟೆಲಿಫೋನ್, ವಿಮಾನ ತಯಾರಿಕೆ, 4. ಸ್ವಚಾಲನಾ ವಾಹನ ಕೈಗಾರಿಕೆಯಲ್ಲಿ ಬಳಕೆ 5. ನಿಸ್ತಂತು ಸಂಪರ್ಕ ಮಾಧ್ಯಮಗಳಲ್ಲಿ ಬಳಕೆ.

**7. ಪೆಟ್ರೋಲಿಯಂ ಮಹತ್ವವನ್ನು ತಿಳಿಸಿ.**

1. ಹೈಡ್ರೋಕಾರ್ಬನ್‌ವುಳ್ಳ ಖನಿಜತೈಲ. 2. ಪ್ರಮುಖ ಇಂಧನ 3. ಕೈಗಾರಿಕೆಗಳಿಗೆ ಕಚ್ಚಾವಸ್ತುಗಳ ಪೂರೈಕೆ 4. ಹೆಚ್ಚಾಗಿ ಸಾರಿಗೆಯಲ್ಲಿ ಬಳಕೆ 5. ಕೃತಕ ರಬ್ಬರ್, ಕೃತಕ ರೇಷ್ಮೆ, ಔಷಧಿಗಳಲ್ಲಿ ಬಳಕೆ

**8. ಭಾರತದ ಪರಮಾಣು ವಿದ್ಯುತ್ ಕೇಂದ್ರಗಳನ್ನು ಹೆಸರಿಸಿ.**

1. ಕಲ್ಪಾಕಂ 2. ಕಾಕ್ರಪಾರ 3. ಕುಂದನ್ ಕುಲಂ 4. ಕೈಗ 5.ತಾರಾಪುರ 6. ರಾಣಪ್ರತಾಪಸಾಗರ 7. ನರೋರ(ತಾರಾಕಾಕನಕುಕ್ಕೆ)

**9. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆ ಏನು? ಅಥವಾ**
**ಇಂದುತುರ್ತಾಗಿ ಪರ್ಯಾಯ ಶಕ್ತಿ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕತೆ ಇದೆ. ಏಕೆ?**

1. ಭಾರತದಲ್ಲಿ ಅಪರಿಮಿತ ಅಸಂಪ್ರದಾಯಿಕ ಶಕ್ತಿ ಮೂಲಗಳಿವೆ. 2.ಅವು ನವೀಕರಿಸಬಲ್ಲ ಮೂಲ, 3. ಮಾಲಿನ್ಯ ಮುಕ್ತವಾದವು ಮತ್ತು ಪರಿಸರ ಸ್ನೇಹಿ. 4. ಸುಲಭ ಸರಬರಾಜು. 5. ದೇಶದ ವಿದ್ಯುತ್ ಅಭಾವ ನೀಗಿಸಬಹುದು. 6. ಇತ್ತೀಚೆಗೆ ವಿದ್ಯುಚ್ಛಕ್ತಿ ದರ ಹೆಚ್ಚಳ.

**10. ಭಾರತದಲ್ಲಿ ವಿದ್ಯುತ್ ಅಭಾವಕ್ಕೆ ಪ್ರಮುಖ ಕಾರಣಗಳು ಯಾವುವು?**

1. ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪದ ಲಭ್ಯತೆ 2. ತೈಲದ ಕೊರತೆ. 3. ಕಡಿಮೆ ದರ್ಜೆಯ ಕಲ್ಲಿದ್ದಲು. 4. ಅಕಾಲಿಕ ಮಳೆ 5. ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ. 6. ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ.

**11. ವಿದ್ಯುಚ್ಛಕ್ತಿ ಅಭಾವಕ್ಕೆ ಪರಿಹಾರಗಳು ಯಾವುವು?**

1. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉತ್ಪಾದನೆ ಹೆಚ್ಚಿಸುವುದು. 2. ಪರ್ಯಾಯ ಶಕ್ತಿ ಸಂಪನ್ಮೂಲಗಳ ಬಳಕೆಗೆ ಕ್ರಮ. 3. ಹೆಚ್ಚು ಜಲ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದು. 4. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಹೆಚ್ಚು ಬಳಕೆ.

**12. ಜಲವಿದ್ಯುಚ್ಛಕ್ತಿಪ್ರಾಮುಖ್ಯತೆ ತಿಳಿಸಿ.**

1. ಇದು ನವೀಕರಿಸಬಲ್ಲ ಮೂಲ. 2. ಸುಲಭ ಬೆಲೆಗೆ ದೊರೆಯುತ್ತದೆ.

3. ಅಧಿಕ ಶಾಖ ಮತ್ತು ಶಕ್ತಿ ನೀಡುತ್ತದೆ 4. ಯಂತ್ರಗಳು ಸ್ವಚ್ಛವಾಗಿರುತ್ತವೆ 5. ಪ್ರಸರಣ ಸುಲಭ

13. ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ.
**– ಶಿವನಸಮುದ್ರ, ಶರಾವತಿ, ಲಿಂಗನಮಕ್ಕಿ, ಆಲಮಟ್ಟಿ, ಕಾಳಿ & ಭದ್ರ**

## ಅಧ್ಯಾಯ-9. ಭಾರತದ ಸಾರಿಗೆ ಮತ್ತು ಸಂಪರ್ಕ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸಾರಿಗೆ ಎಂದರೇನು?** – ಸರಕು, ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಮಾಧ್ಯಮ.

2. ನಿರ್ಮಾಣದ ಆಧಾರದ ಮೇಲೆ ರಸ್ತೆಗಳ ಪ್ರಕಾರಗಳನ್ನು ತಿಳಿಸಿ. – **1.ಪಕ್ಕಾ ರಸ್ತೆಗಳು 2.ಕಚ್ಚಾ ರಸ್ತೆಗಳು**

3. ಪಕ್ಕಾ ರಸ್ತೆಗಳು ಎಂದರೇನು? – **ಸಿಮೆಂಟ್ ಕಾಂಕ್ರೀಟ್ ಅಥವಾ ಡಾಂಬರಿನಿಂದ ನಿರ್ಮಿಸಲ್ಪಟ್ಟ ರಸ್ತೆಗಳು.**

4. ಕಚ್ಚಾ ರಸ್ತೆಗಳು ಎಂದರೇನು? – **ಜಲ್ಲಿ ಮತ್ತು ಮಣ್ಣುಗಳಿಂದ ನಿರ್ಮಿಸಿದ ರಸ್ತೆಗಳು.**

5. ಗ್ರಾಮ ಸಡಕ್ ಯೋಜನೆಯ ಉದ್ದೇಶವೇನು? – **ಗ್ರಾಮೀಣಕಚ್ಚಾ ರಸ್ತೆಗಳನ್ನು ಸುಧಾರಣೆ ಮಾಡುವುದು**

**6. ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಯಾವ ಇಲಾಖೆಗೆ ಸಂಬಂಧಿಸಿದೆ? –ಕೇಂದ್ರ ಲೋಕೋಪಯೋಗಿ ಇಲಾಖೆ**

7. ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಯಾರಿಗೆ ಸೇರಿದೆ? – **ರಾಜ್ಯಲೋಕೋಪಯೋಗಿ ಇಲಾಖೆ**

8. ಗಡಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಯು ಯಾರಿಗೆ ಸೇರಿದೆ? – **ಗಡಿ ರಸ್ತೆ ಅಭಿವೃದ್ಧಿ ಪ್ರಾಧಿಕಾರ**

9. **ಭಾರತದಲ್ಲಿ ಮೊದಲಿಗೆ ರೈಲುಮಾರ್ಗವನ್ನು ಯಾವ ಸ್ಥಳಗಳ ನಡುವೆ ನಿರ್ಮಿಸಲಾಯಿತು? – ಮುಂಬಯಿ ಮತ್ತು ಥಾಣೆ** (1853)

**10. ಬ್ರಿಟಿಷರು ಭಾರತದಲ್ಲಿ ರೈಲು ಮಾರ್ಗಗಳ ನಿರ್ಮಾಣದ ಉದ್ದೇಶವೇನಾಗಿತ್ತು?**
– ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದು & ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವನ್ನು ಸಾಗಿಸಲು.

11. ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ ಯಾವುದು? – **ರೈಲು ಸಾರಿಗೆ**

12. ಭಾರತದ ಹೊಸ ಭೂಸಾರಿಗೆ ವಿಧಾನ ಯಾವುದು? – **ಕೊಳವೆ ಮಾರ್ಗಗಳು**

**13.** ಭಾರತದ ಹೆಬ್ಬಾಗಿಲು ಎಂದು ಯಾವ ಬಂದರನ್ನು ಕರೆಯಲಾಗಿದೆ? – **ಮುಂಬಯಿ**

14. **ಮುಂಬಯಿ ಬಂದರಿನ ಒತ್ತಡವನ್ನು ಕುಗ್ಗಿಸಲು ಯಾವ ಬಂದರು ನಿರ್ಮಾಣಗೊಂಡಿದೆ? –ಜವಹರಲಾಲ್‌ನೆಹರು ಬಂದರು**

15. ಅರಬ್ಬಿ ಸಮುದ್ರದ ರಾಣಿ ಎಂದು ಕರೆಯಲಾಗಿದೆ? – **ಕೊಚ್ಚಿನ್**

16. ಭಾರತದ ಅತಿ ಹಳೆಯ ಬಂದರು ಯಾವುದು? – **ಚೆನ್ನೈ**

17. ಚೆನ್ನೈ ಬಂದರಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಯಾವ ಬಂದರನ್ನು ನಿರ್ಮಿಸಲಾಗಿದೆ? – **ಎನ್ನೋರ್**

18. ಭೂಭಾಗದಿಂದ ಸುತ್ತುವರಿದ ಆಳವಾದ ಮತ್ತು ಸಂರಕ್ಷಿತ ಬಂದರು ಯಾವುದು? – **ವಿಶಾಖಪಟ್ಟಣ**

19. ಹೂಗ್ಲಿ ಮತ್ತು ಹಾಲ್ದಿ ನದಿಗಳ ಸಂಗಮ ಸ್ಥಳದಲ್ಲಿ ನೆಲೆಸಿದ ಬಂದರು ಯಾವುದು? – ಹಾಲ್ದಿಯಾ

**20. ಕೋಲ್ಕತ್ತಾ ಬಂದರಿನಲ್ಲಿ ಹೂಳು ತೆಗೆಯುವ ಕಾರ್ಯ ಅವಶ್ಯಕವಾಗಿದೆ.ಏಕೆ?**
– ಹೂಗ್ಲಿ ನದಿಯಿಂದ ಆಗಾಗ್ಗೆ ಹೂಳು ತುಂಬಿಕೊಳ್ಳುವುದರಿಂದ ಹಡಗು ಸಂಚಾರಕ್ಕೆ ತೊಂದರೆಯಾಗುತ್ತದೆ.

**21. ಸಂಪರ್ಕ ಮಾಧ್ಯಮ ಎಂದರೇನು?**

– ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸಮಾಚಾರ ವಿನಿಮಯ.

22. ಭಾರತದ ಅತ್ಯಂತ ಹಳೆಯ ಮತ್ತು ಈಗಲೂ ಚಾಲ್ತಿಯಲ್ಲಿರುವ ವೃತ್ತಪತ್ರಿಕೆ ಯಾವುದು? **– ಬಾಂಬೆ ಸಮಾಚಾರ (1822)**

23. ಇಂದು ಒಳನಾಡಿನ ಜಲಸಾರಿಗೆ ಮಹತ್ವ ಕಡಿಮೆಯಾಗಿದೆ.ಏಕೆ? **– ರಸ್ತೆ ಮತ್ತು ರೈಲುಸಾರಿಗೆಗಳ ಪ್ರಗತಿಯಿಂದಾಗಿ**

**24. ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂದರೇನು?**

– ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ಕಂಪ್ಯೂಟರ್ ವ್ಯವಸ್ಥೆ.

**25. ಭೌಗೋಳಿಕ ಸ್ಥಾನ ನಿರ್ಧಾರ ವ್ಯವಸ್ಥೆ ಎಂದರೇನು?**

– ಅಕ್ಷಾಂಶ, ರೇಖಾಂಶ ಮತ್ತು ಸಮುದ್ರ ಮಟ್ಟದಿಂದಿರುವ ಎತ್ತರವನ್ನಾಧರಿಸಿ ಪೃಥ್ವಿಯ ಮೇಲಿನ ಚರ, ಸ್ಥಿರ ವಸ್ತು ಅಥವಾ ವ್ಯಕ್ತಿಯ ಸ್ಥಾನ ನಿರ್ಧರಿಸುವ ವ್ಯವಸ್ಥೆ.

26. ದೂರ ಸಂವೇದಿ ತಂತ್ರಜ್ಞಾನ ಎಂದರೇನು?

**– ಒಂದು ವಸ್ತು, ಸ್ಥಳ ಅಥವಾ ಲಕ್ಷಣಗಳನ್ನು ನೇರ ಸಂಪರ್ಕ ಹೊಂದದೆ ಸಂವೇದನೆಯ ಮೂಲಕ ಮಾಹಿತಿ ಸಂಗ್ರಹಿಸುವ ಮಾಧ್ಯಮ.**

**II. ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.**

**1. ಸಾರಿಗೆಯ ಮಹತ್ವವನ್ನು ವಿವರಿಸಿ.**

1. ಕೃಷಿಯ ಅಭಿವೃದ್ಧಿಗೆ ನೆರವು. 2. ಕೈಗಾರಿಕಾ ಪ್ರಗತಿಗೆ ಉತ್ತೇಜನ 3. ಮಾರುಕಟ್ಟೆಯ ವಿಸ್ತರಣೆ 5. ಉದ್ಯೋಗ ಸೃಷ್ಟಿ
4. ದೇಶೀಯ ಮತ್ತು ವಿದೇಶೀ ವ್ಯಾಪಾರದ ವೃದ್ಧಿ 6. ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ 7. ರಕ್ಷಣಾ ಪಡೆಗೆ ನೆರವಾಗುತ್ತದೆ

**2. ಸಾರಿಗೆ ವಿಧಗಳನ್ನು ತಿಳಿಸಿ**

1. ಭೂಸಾರಿಗೆ : 1) ರಸ್ತೆ ಸಾರಿಗೆ, 2) ರೈಲು ಸಾರಿಗೆ, 3) ಕೊಳವೆ ಮಾರ್ಗಗಳು
2. ಜಲಸಾರಿಗೆ : 1) ಒಳನಾಡಿನ ಜಲ ಸಾರಿಗೆ, 2) ಸಾಗರ ಜಲ ಸಾರಿಗೆ
3. ವಾಯುಸಾರಿಗೆ : 1) ರಾಷ್ಟ್ರೀಯ ವಾಯು ಸಾರಿಗೆ, 2) ಅಂತಾರಾಷ್ಟ್ರೀಯ ವಾಯು ಸಾರಿಗೆ

**3. ಭಾರತದಲ್ಲಿ ರಸ್ತೆಮಾರ್ಗಗಳ ಪ್ರಾಮುಖ್ಯತೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.**

1. ಕೃಷಿ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಅವಶ್ಯಕ. 2. ದೇಶದ ಮೂಲೆ ಮೂಲೆಗೂ ಸಂಪರ್ಕಿಸುತ್ತವೆ.
3. ಎಲ್ಲಾ ಪ್ರದೇಶಗಳಲ್ಲಿಯೂ ನಿರ್ಮಿಸಬಹುದು. 4. ರೈಲು, ಬಂದರು ಮತ್ತು ವಿಮಾನ ನಿಲ್ದಾಣಗಳಿಗೆ ಸಂಪರ್ಕ.
5. ಉದ್ಯೋಗ ಸೃಷ್ಟಿ 6. ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ.
7. ವ್ಯಾಪಾರ, ವಾಣಿಜ್ಯ ಹಾಗೂ ಕೈಗಾರಿಕೆಗೆ ಸಹಾಯಕ. 8. ಗಡಿಪ್ರದೇಶಗಳಲ್ಲಿ ರಸ್ತೆಗಳು ಹೆಚ್ಚು ಉಪಯುಕ್ತ.

**4. ನಿರ್ಮಾಣ ಮತ್ತು ನಿರ್ವಹಣೆಗಳನ್ನು ಆಧರಿಸಿ ರಸ್ತೆಗಳನ್ನು ಎಷ್ಟು ಪ್ರಕಾರಗಳಾಗಿ ವಿಂಗಡಿಸಲಾಗಿದೆ?**

1. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳು 2. ರಾಷ್ಟ್ರೀಯ ಹೆದ್ದಾರಿಗಳು
3. ರಾಜ್ಯ ಹೆದ್ದಾರಿಗಳು 4. ಜಿಲ್ಲಾ ರಸ್ತೆಗಳು 5. ಗ್ರಾಮೀಣ ರಸ್ತೆಗಳು

**5. ಸುವರ್ಣ ಚತುಷ್ಕೋನ ಮತ್ತು ಸೂಪರ್ ಹೆದ್ದಾರಿಗಳನ್ನು ಕುರಿತು ವಿವರಿಸಿ.**

1. ನಾಲ್ಕರಿಂದ ಆರು ಪಥಗಳ ರಸ್ತೆಗಳು. 2. ದೇಶದ ಸಾಂಸ್ಕೃತಿಕ ಮತ್ತು ಕೈಗಾರಿಕಾ ಕೇಂದ್ರಗಳಿಗೆ ಸಂಪರ್ಕ.
3. ಪ್ರಮುಖ ಮಹಾನಗರಗಳಿಗೆ ಸಂಪರ್ಕ 4. ಉತ್ತರ–ದಕ್ಷಿಣ ಕಾರಿಡಾರ್:– ಶ್ರೀನಗರದಿಂದ ಕನ್ಯಾಕುಮಾರಿ
5. ಪೂರ್ವ–ಪಶ್ಚಿಮ ಕಾರಿಡಾರ್:– ಅಸ್ಸಾಂನ ಸಿಲ್ಚಾರ್‌ನಿಂದ ಗುಜರಾತ್‌ನ ಪೋರ್‌ಬಂದರ್
6. ಪ್ರಮುಖ ನಗರ, ಕೈಗಾರಿಕಾ ಕೇಂದ್ರ ಮತ್ತು ಬಂದರುಗಳಿಗೆ ಸಂಪರ್ಕ

**6. ಭಾರತದ ರೈಲು ಸಾರಿಗೆಯನ್ನು ಕುರಿತು ವಿವರಿಸಿ. ಅಥವಾ ರೈಲುಸಾರಿಗೆಯ ಮಹತ್ವವನ್ನು ತಿಳಿಸಿ. / ಪ್ರಾಮುಖ್ಯತೆಯಯನ್ನು ತಿಳಿಸಿ**

1. ಭೂಸಾರಿಗೆ ಮಾಧ್ಯಮ. 2. ಭಾರವಾದ ಸರಕು ಮತ್ತು ಅಧಿಕ ಸಂಖ್ಯೆಯ ಪ್ರಯಾಣಿಕರ ಸಾಗಾಟ.
3. ಕೃಷಿ, ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿಗೆ ಸೂಕ್ತ 4. ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಸಹಾಯಕ.
5. ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ. 6. ಸಮರ್ಥ ಆಡಳಿತಕ್ಕಾಗಿ 16 ವಲಯಗಳಾಗಿ ವಿಂಗಡಣೆ.

**7. ಭಾರತದ ವಾಯು ಸಾರಿಗೆ ಕುರಿತು ವಿವರಿಸಿ. ಅಥವಾ ವಾಯು ಸಾರಿಗೆಯ ಮಹತ್ವವನ್ನು ತಿಳಿಸಿ**

1. ಅತ್ಯಂತ ವೇಗದ ಸಾರಿಗೆ ಮಾಧ್ಯಮ. 2. ಪ್ರಯಾಣಿಕರು ಮತ್ತು ಅಂಚೆ ಸಾಗಿಸಲು ಸೂಕ್ತ.
3. ಪ್ರವಾಹ, ಭೂಕಂಪಗಳ ಪರಿಹಾರಕ್ಕೆಉಪಯುಕ್ತ. 4. ಯುದ್ಧ ಸಂಧರ್ಭದಲ್ಲಿ ಸಹಾಯ.
5. ಏರ್ ಇಂಡಿಯಾ ನ್ಯಾಷನಲ್: ಭಾರತ ಮತ್ತು ಇತರೆ ದೇಶಗಳೊಂದಿಗೆಸಂಪರ್ಕ.
6. ಇಂಡಿಯನ್ ಏರ್‌ಲೈನ್ಸ್: ದೇಶದೊಳಗೆ ಮತ್ತು ನೆರೆಹೊರೆ ದೇಶಗಳಿಗೆ ಸಂಪರ್ಕ.

**8. ಕೊಳವೆ ಮಾರ್ಗಗಳ ಪ್ರಾಮುಖ್ಯತೆಯಯನ್ನು ತಿಳಿಸಿ**

1. ಹೊಸ ಭೂಸಾರಿಗೆ ವಿಧಾನ. 3. ಕಚ್ಚಾ ತೈಲವನ್ನು ತೈಲ ಶುದ್ಧೀಕರಣ ಕೇಂದ್ರಗಳಿಗೆ ಸಾಗಿಸಲು.
2. ಕೊಳವೆ ಮಾರ್ಗಗಳನ್ನು ನೆಲದೊಳಗೆ ಹಾಸಲಾಗಿರುತ್ತದೆ. 4. ನೈಸರ್ಗಿಕಾನಿಲ ಹಾಗೂ ಕೆಸರು ರೂಪದಲ್ಲಿ ಖನಿಜ ಸಾಗಿಸಲು.

**9. ಪಶ್ಚಿಮ ಮತ್ತು ಪೂರ್ವ ತೀರದ ಪ್ರಮುಖ ಬಂದರುಗಳು ಯಾವುವು?**

– **ಪಶ್ಚಿಮ ತೀರದ ಬಂದರುಗಳು :** ಕಾಂಡ್ಲ, ಮುಂಬಯಿ, ನವಶೇವಾ, ಮರ್ಮಗೋವ, ನವ ಮಂಗಳೂರು, ಕೊಚ್ಚಿ, (ಕಾ ಮು ನ ಮ ನ ಕೊ)

**ಪೂರ್ವ ತೀರದ ಬಂದರುಗಳು :** ಕೊಲ್ಕತ, ಹಾಲ್ದಿಯಾ,ಪಾರಾದೀಪ್, ಎನ್ನೋರ್,ವಿಶಾಖಪಟ್ಟಣ, ಚೆನ್ನೈ, ತುತಕುಡಿ, ಪೋರ್ಟ್ ಬ್ಲೇರ್ (ಕೊಹಾಪಾಎ ವಿಚೆತುಪೊ)

**10. ಭಾರತದಲ್ಲಿ ಜಲಸಾರಿಗೆಗೆ ಪೂರಕವಾದ ಅಂಶಗಳು ಯಾವುವು?**

1. ಉದ್ದವಾದ ಸಮುದ್ರ ತೀರ 2. ನೈಸರ್ಗಿಕ ಬಂದರುಗಳು
3. ಪೂರ್ವಾರ್ಧಗೋಳದ ಮಧ್ಯದಲ್ಲಿದೆ. 4. ಶೇ.85% ರಷ್ಟು ವಿದೇಶಿ ವ್ಯಾಪಾರ ನಡೆಯುತ್ತಿದೆ

**11. ಭಾರತದ ವಿವಿಧ ಸಂಪರ್ಕ ಮಾಧ್ಯಮಗಳನ್ನು ತಿಳಿಸಿ.**

1. **ವೈಯಕ್ತಿಕ ಸಂಪರ್ಕ ಮಾಧ್ಯಮ** :ಅಂಚೆ, ಟೆಲಿಗ್ರಾಫ್, ಟೆಲಿಫೋನ್, ಫ್ಯಾಕ್ಸ್, ಈ–ಮೇಲ್, ಅಂತರ್ಜಾಲ, ಸೆಮಿನಾರ್.
2. **ಸಮುದಾಯ ಸಂಪರ್ಕ ಮಾಧ್ಯಮ** : ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳು, ಆಕಾಶವಾಣಿ, ದೂರದರ್ಶನ, ಪುಸ್ತಕಗಳು.

**12. ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆಯಯನ್ನು ತಿಳಿಸಿ**

1. ಸರ್ಕಾರದ ನೀತಿ ನಿಯಮ ತಿಳಿಯಲು. 2. ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು.
3. ನೈಸರ್ಗಿಕ ವಿಪತ್ತುಗಳು & ಹವಾಗುಣ ಮುನ್ಸೂಚನೆ ತಿಳಿಯಲು. 4.ವ್ಯಾಪಾರ ವಾಣಿಜ್ಯ, ಕೈಗಾರಿಕೆ, ಕೃಷಿ ಬಗ್ಗೆ ಮಾಹಿತಿಗೆ.
5. ಮನರಂಜನೆ, ಪ್ರಪಂಚದ ದಿನನಿತ್ಯದ ಮಾಹಿತಿಗಳನ್ನು ತಿಳಿಯಲು. 6. ದೇಶದ ಏಕತೆ ಮತ್ತು ಸಮಗ್ರತೆಗೆ ಸಹಾಯಕ.

**13. ಭಾರತದ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಹೆಸರಿಸಿ.**

1. ಇಂದಿರಾಗಾಂಧಿ, ದೆಹಲಿ. 2. ಛತ್ರಪತಿ ಶಿವಾಜಿ, ಮುಂಬಯಿ. 3. ನೇತಾಜಿ ಸುಭಾಷ್ ಚಂದ್ರಬೋಸ್, ಕೊಲ್ಕತ.
4. ಅಣ್ಣಾ, ಚೆನ್ನೈ. 5. ಕೆಂಪೇಗೌಡ, ಬೆಂಗಳೂರು. 6. ರಾಜೀವ್‌ಗಾಂಧಿ, ಹೈದರಾಬಾದ್.

## ಅಧ್ಯಾಯ–10. ಭಾರತದ ಕೈಗಾರಿಕೆಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕೈಗಾರಿಕೆ ಎಂದರೇನು? **– ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆ.**
2. **ಕೈಗಾರಿಕಾ ಪ್ರದೇಶ ಎಂದರೇನು?–ಒಂದೇ ಬಗೆಯ ಅಥವಾ ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶ**
3. ಭಾರತದಲ್ಲಿ ಮೊದಲಿಗೆ ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಎಲ್ಲಿ ಸ್ಥಾಪನೆಗೊಂಡಿತು? –ಪಶ್ಚಿಮ ಬಂಗಾಳದ **ಕುಲ್ಟಿ**
4. ಮುಂಬಯಿಯನ್ನು ಭಾರತದ **ಕಾಟನೊಪೊಲೀಸ್** ಮತ್ತು **ಮಾಂಚೆಸ್ಟರ್**ಎಂದು ಏಕೆ ಕರೆಯುವರು?
   – ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿರುವುದರಿಂದ.
5. ಭಾರತದಲ್ಲಿ ಪ್ರಥಮ ಕಾಗದ ಕಾರ್ಖಾನೆಯೊಂದು ಎಲ್ಲಿ ಸ್ಥಾಪನೆಗೊಂಡಿತು? **– ಬಾಲಿ**(ಕೊಲ್ಕತ್ತಾ ಸಮೀಪ)
6. ಭಾರತದ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು 1932ರಲ್ಲಿ ಎಲ್ಲಿ ಸ್ಥಾಪನೆಗೊಂಡಿತು? **– ಸೆರಾಂಪುರ**
7. ಬೆಂಗಳೂರನ್ನು ಭಾರತದ **ಸಿಲಿಕಾನ್ ವ್ಯಾಲಿ**ಎಂದು ಏಕೆ ಕರೆಯುವರು?
   **– ಭಾರತದಲ್ಲಿ ಬೆಂಗಳೂರು ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ.**
8. 1995ರಲ್ಲಿ ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ (STP)ಗಳನ್ನು ಏಕೆ ಸ್ಥಾಪಿಸಲಾಯಿತು? **– ಸಾಫ್ಟ್‌ವೇರ್ ಉದ್ಯಮದ ಉತ್ತೇಜನಕ್ಕಾಗಿ**
9. **ಇಂದು ನಮ್ಮ ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಯು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿದೆ ಏಕೆ?**
   – ಸಾಕಷ್ಟು ಯುವ ಜನಸಂಖ್ಯೆ, ಬೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನ ಹಾಗೂ ಜ್ಞಾನಾಧಾರಿತ ಕೈಗಾರಿಕಾ ಪ್ರದೇಶವಾಗಿ ಹೊರಹೊಮ್ಮಲು ಉತ್ತಮ ಸಾಮರ್ಥ್ಯ ಹೊಂದಿದೆ.
10. **ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ಮೂಲ ಕೈಗಾರಿಕೆ ಎಂದು ಕರೆಯುವರು ಏಕೆ?**
    – ಎಂಜನೀಯರಿಂಗ್, ರೈಲ್ವೆ ಎಂಜಿನ್, ಯಂತ್ರೋಪಕರಣ, ಸ್ವಚಾಲಿತ ವಾಹನ, ಕೃಷಿ ಉಪಕರಣ ಕೈಗಾರಿಕೆಗಳು ಕಬ್ಬಿಣ & ಉಕ್ಕಿನ ಕೈಗಾರಿಕೆಯನ್ನಾಧರಿಸಿವೆ.

**II. ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.**

**1. ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವಬೀರುವ ಅಂಶಗಳಾವುವು?**
**ಯಾವುದೇ ಕೈಗಾರಿಕೆಯ ಸ್ಥಾನೀಕರಣ ಅಂಶಗಳನ್ನು ಕೇಳಿದರೂ ಇದೇ ಉತ್ತರ ಬರೆಯಿರಿ.**

1. ಕಚ್ಚಾ ವಸ್ತುಗಳ ಸರಬರಾಜು 2 .ಶಕ್ತಿ ಸಂಪನ್ಮೂಲಗಳ ಪೂರೈಕೆ 3. ಸಾರಿಗೆ ಮತ್ತು ಸಂಪರ್ಕ 4. ಮಾರುಕಟ್ಟೆ ಸೌಲಭ್ಯ
5. ಬಂಡವಾಳ 6. ಕಾರ್ಮಿಕರು ಮತ್ತು ನೀರು ದೊರೆಯುವಿಕೆ 7. ಸೂಕ್ತ ವಾಯುಗುಣ 8. ಸರ್ಕಾರದ ನೀತಿ ನಿಯಮ.

**2. ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಹೆಸರಿಸಿ.**

1. ಹೂಗ್ಲಿ–ಕೊಲ್ಕತ ಪ್ರದೇಶ. 2. ಮುಂಬಯಿ–ಪುಣೆ ಪ್ರದೇಶ. 3. ಅಹ್ಮದಾಬಾದ್–ವಡೋದರ ಪ್ರದೇಶ.
4. ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ 5. ದೆಹಲಿ–ಮೀರತ್ ಪ್ರದೇಶ. 6. ವಿಶಾಖಪಟ್ಟಣ–ಗುಂಟೂರು ಪ್ರದೇಶ.
7. ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ. 8. ಕೊಲ್ಲಂ–ತಿರುವನಂತಪುರ ಪ್ರದೇಶ

**3. ಅಲ್ಯೂಮಿನಿಯಂ ಲೋಹದ ಉಪಯೋಗಗಳನ್ನು ತಿಳಿಸಿ.**

1. ಬಹುಪಯೋಗಿ ಲೋಹ. 2. ವಿಮಾನ, ಸ್ವಯಂಚಾಲಿತವಾಹನಗಳಲ್ಲಿ ಬಳಕೆ.
3. ರೈಲುಸಾರಿಗೆ, ಹಡಗುಗಳಲ್ಲಿ ಬಳಕೆ. 4. ಬಣ್ಣ ತಯಾರಿಕೆ, ಗೃಹಬಳಕೆ ವಸ್ತುಗಳ ತಯಾರಿಕೆಯಲ್ಲಿ ಬಳಕೆ
5. ವಿದ್ಯುತ್ ಕೇಬಲ್ ತಯಾರಿಕೆಗೆ ಬಳಕೆ 6. ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿ ಬಳಕೆ.

**4. ಕಾಗದ ಕೈಗಾರಿಕೆಯು ಅರಣ್ಯ ಆಧಾರಿತ ಕೈಗಾರಿಕೆ. ಏಕೆ?**

– ಇದಕ್ಕೆ ಬೇಕಾಗುವ ಕಚ್ಚಾ ವಸ್ತುಗಳು ಬಿದಿರು, ಮರದ ತಿರುಳು, ಮೃದುಮರಗಳ ವಸ್ತುಗಳು, ಸಬಾಯಿ ಮತ್ತು ಬಾಭರ್ ಹುಲ್ಲು.

**5. ಇತ್ತೀಚೆಗೆ ಅರಣ್ಯದಿಂದ ದೊರೆಯುವ ಕಚ್ಚಾವಸ್ತುಗಳ ಕೊರತೆಯಿಂದಾಗಿ ಕಾಗದದ ಕೈಗಾರಿಕೆಗೆ ಯಾವ ಕಚ್ಚಾ ಪದಾರ್ಥಗಳನ್ನು ಬಳಸಲಾಗುತ್ತಿದೆ?** – ಭತ್ತ, ಗೋಧಿ, ಬಾರ್ಲಿ ಹುಲ್ಲು, ಕಬ್ಬಿನ ಸಿಪ್ಪೆ, ಚಿಂದಿಕಾಗದ, ಚಿಂದಿಬಟ್ಟೆ.

**6. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ಕುರಿತು ಬರೆಯಿರಿ.**

1. ಸಾಮಾಜಿಕ-ಆರ್ಥಿಕ ಬದಲಾವಣೆಯ ಸಾಧನ. 2. ಉದ್ಯೋಗವಕಾಶಗಳ ಸೃಷ್ಟಿ 3. ವಿದೇಶಿ ವ್ಯಾಪಾರದ ಅಭಿವೃದ್ಧಿ 4. ವಿದೇಶಿ ವಿನಿಮಯ ಗಳಿಕೆಗೆ ಸಹಕಾರಿ. 5. ತಾಂತ್ರಿಕ ಮತ್ತು ವೈಜ್ಞಾನಿಕ ಬೆಳವಣಿಗೆಯನ್ನು ತ್ವರಿತಗೊಳಿಸಲು ನೆರವು.

**7. ಭಾರತದ ಖಾಸಗಿ ಮತ್ತು ಸರ್ಕಾರಿ ವಲಯದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಯಾವುವು?**

**ಖಾಸಗಿ ವಲಯ :** 1. ಟಾಟಾ ಕಬ್ಬಿಣ ಮತ್ತು ಉಕ್ಕು ಕಂಪನಿ, ಜೆಂಷೆಡ್ಪುರ (ಸಾಕ್ಚಿ), ಜಾರ್ಖಂಡ್.
2. ಜಿಂದಾಲ್ ವಿಜಯನಗರ ಉಕ್ಕು ಲಿ,ತೋರಣಗಲ್, ಬಳ್ಳಾರಿ ಜಿಲ್ಲೆ, ಕರ್ನಾಟಕ.
3. ಇಸ್ಪಾತ್ ಕಬ್ಬಿಣ ಮತ್ತು ಉಕ್ಕು ಲಿ.ದೋಲ್ವಿ, ರತ್ನಗಿರಿಜಿಲ್ಲೆ, ಮಹಾರಾಷ್ಟ್ರ
4. ದುಬಾರಿ ಉಕ್ಕು ಸ್ಥಾವರ, ಗೋಪಾಲ್ಪುರ, ಒಡಿಶಾ.

**ಸರಕಾರಿ ವಲಯ** 1. ಭಾರತೀಯ ಕಬ್ಬಿಣ & ಉಕ್ಕು ಕಂಪನಿ. ಬರ್ನ್‌ಪುರ, ಪ.ಬಂಗಾಳ 2. ಸೇಲಂ ಉಕ್ಕು ಸ್ಥಾವರ, ಸೇಲಂ, 3. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿ. ಭದ್ರಾವತಿ, ಕರ್ನಾಟಕ. 4. ಟಾಟಾ ಉಕ್ಕು ಸ್ಥಾವರ, ಕಳಿಂಗ ನಗರ, ಒಡಿಶಾ. 5. ಹಿಂದೂಸ್ತಾನ್ ಉಕ್ಕು ಲಿಮಿಟಡ್, ಬಿಲಾಯಿ, ರೂರ್ಕೆಲ, ದುರ್ಗಾಪುರ, 6. ಬೊಕಾರೊ ಉಕ್ಕು ಸ್ಥಾವರ, ಜಾರ್ಖಂಡ್.

## ಅಧ್ಯಾಯ-12. ಭಾರತದ ಜನಸಂಖ್ಯೆ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಜನಸಂಖ್ಯೆ ಎಂದರೇನು? – **ನಿಗದಿತದ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆ**
2. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ ಎಷ್ಟು ಕೋಟಿಗಳಾಗಿತ್ತು? – **121.01**
3. ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ಎಷ್ಟು ಭಾಗ ಭಾರತದಲ್ಲಿದೆ? – **ಶೇಕಡ17.5**
4. ಭಾರತದ ಜನಭರಿತವಾದ(ಅಧಿಕ ಜನಸಂಖ್ಯೆಯುಳ್ಳ) ರಾಜ್ಯ ಯಾವುದು? – **ಉತ್ತರ ಪ್ರದೇಶ**
5. ಭಾರತದಲ್ಲಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ ಯಾವುದು? – **ಸಿಕ್ಕಿಂ**
6. ಭಾರತದಲ್ಲಿ ಅಧಿಕ ಜನಸಂಖ್ಯೆಯುಳ್ಳ ಕೇಂದ್ರಾಡಳಿತ ಪ್ರದೇಶ ಯಾವುದು? – **ದೆಹಲಿ**
7. ಕೇಂದ್ರಾಡಳಿತ ಪ್ರದೇಶಗಳಲ್ಲಿ ಯಾವುದು ಅತಿ ಕಡಿಮೆ ಜನಸಂಖ್ಯೆ ಹೊಂದಿದೆ? –**ಲಕ್ಷ ದ್ವೀಪ**
8. ಜನಸಾಂದ್ರತೆ ಎಂದರೇನು? –**ಪ್ರತಿ ಚದರ ಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆ.**
9. 2011ರ ಜನಗಣತಿ ಯಂತೆ ಭಾರತದ ಸರಾಸರಿ ಜನಸಾಂದ್ರತೆ ಎಷ್ಟು? – **382** ಜನರು
10. ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿದ ರಾಜ್ಯ ಯಾವುದು? –**ಬಿಹಾರ**
11. ಭಾರತದ ಅತಿ ಕಡಿಮೆ ಜನಸಾಂದ್ರತೆಯುಳ್ಳ ರಾಜ್ಯ ಯಾವುದು? – **ಅರುಣಾಚಲ ಪ್ರದೇಶ**
12. ಭಾರತದಲ್ಲಿ ಕಡಿಮೆ ಜನಸಾಂದ್ರತೆಯುಳ್ಳ ಕೇಂದ್ರಾಡಳಿತ ಪ್ರದೇಶ ಯಾವುದು? – **ಅಂಡಮಾನ್ ಮತ್ತು ನಿಕೋಬಾರ್ ದ್ವೀಪ.**
13. **1951–1991ರ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆ ದರವು ತ್ವರಿತವಾಗಿತ್ತು. ಏಕೆ?**
   – ಮರಣ ದರದಲ್ಲಿ ಇಳಿಕೆ ಮತ್ತು ಜನನ ದರದಲ್ಲಿ ಹೆಚ್ಚಳ ಮುಂದುವರೆದಿದ್ದರಿಂದ

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಗೆ ಪ್ರಮುಖ ಕಾರಣಗಳನ್ನು ತಿಳಿಸಿ.** 1. ಅಧಿಕ ಜನನ ದರ 2. ಕಡಿಮೆ ಮರಣ ದರ

**2. ಭಾರತದ ಜನಸಂಖ್ಯೆಯ ಬೆಳವಣಿಗೆಯಿಂದಾಗುವ ಪರಿಣಾಮಗಳಾವುವು.**

1. ನಿರುದ್ಯೋಗ, 2. ಆಹಾರದ ಕೊರತೆ ಮತ್ತು ಅಪೌಷ್ಟಿಕತೆ 3. ಮೂಲ ಸೌಲಭ್ಯಗಳ ಕೊರತೆ 4. ಕಡಿಮೆ ತಲಾದಾಯ 5. ನಿಧಾನ ಗತಿಯ ಆರ್ಥಿಕಾಭಿವೃದ್ಧಿ 7. ಬಡತನ 8. ಜೀವನ ಮಟ್ಟದಲ್ಲಿ ಕುಸಿತ

**3. ಭಾರತದ ಜನಸಂಖ್ಯೆಯ ಹಂಚಿಕೆಯನ್ನು ನಿಯಂತ್ರಿಸುವ ಪ್ರಮುಖ ಅಂಶಗಳನ್ನು ತಿಳಿಸಿ.**

1. ಮೇಲ್ಮೈ ಲಕ್ಷಣಗಳು 2.ವಾಯುಗುಣ 3.ಮಣ್ಣು 4.ಸಂಪನ್ಮೂಲಗಳು 5. ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳು 6. ನೀರಿನ ಪೂರೈಕೆ, 7. ಪ್ರವಾಸೋದ್ಯಮದ ಪ್ರಗತಿ, 8. ಜನರ ರಕ್ಷಣೆ

**4. ಜನನ ದರ ಹೆಚ್ಚಾಗಲು ಕಾರಣಗಳೇನು? ಅಥವಾ ಅಧಿಕ ಜನನ ದರಕ್ಕೆಕಾರಣಗಳೇನು?**

1. ಬಾಲ್ಯವಿವಾಹ, 2. ಧಾರ್ಮಿಕ ಮತ್ತು ಸಾಮಾಜಿಕ ಮೂಢನಂಬಿಕೆಗಳು, 3. ಬಹುಪತ್ನಿತ್ವ, 4. ಬಡತನ, 5. ಅನಕ್ಷರತೆ, 6. ಉಷ್ಣವಲಯದ ವಾಯುಗುಣ.

**5. ಮರಣದರ ಇಳಿಮುಖವಾಗಲುಕಾರಣಗಳೇನು? ಅಥವಾ ಕಡಿಮೆ ಮರಣ ದರಕ್ಕೆ ಕಾರಣಗಳೇನು?**

1. ವೈದ್ಯಕೀಯ ಸೌಲಭ್ಯದಲ್ಲಿ ಸುಧಾರಣೆ, 2. ಪ್ರಾಣಾಂತಿಕ ಸಾಂಕ್ರಾಮಿಕ ಪಿಡುಗುಗಳ ನಿಯಂತ್ರಣ, 3. ಶಿಶು ಮರಣದಲ್ಲಿ ಕುಸಿತ, 4. ಶಿಕ್ಷಣದ ಪ್ರಗತಿ.

**6. ಭಾರತದ ಕೆಲವು ಭಾಗಗಳ ಕಡಿಮೆ ಜನ ಸಾಂದ್ರತೆಗೆ ಕಾರಣಗಳನ್ನು ತಿಳಿಸಿ.**

1. ಪರ್ವತ 2. ಬೆಟ್ಟ ಗುಡ್ಡಗಳ ಭಾಗಗಳು 3. ಅರಣ್ಯ ಪ್ರದೇಶ 4. ಕನಿಷ್ಠ ಉಷ್ಣಾಂಶವುಳ್ಳ / ಅರೆ ಮರುಭೂಮಿ ವಾಯುಗುಣ

**7. ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ ಕ್ರಮಗಳು ಯಾವುವು?**

1. ಕುಟುಂಬ ಯೋಜನೆ 2. ಮಹಿಳಾ ಕಲ್ಯಾಣ ಯೋಜನೆಗಳು 3. ಪ್ರಚಾರ ಮತ್ತು ಜಾಹಿರಾತು 4. ಗ್ರಾಮೀಣ ಪ್ರದೇಶದ ಜನರಲ್ಲಿ ಜನಸಂಖ್ಯಾ ಸಮಸ್ಯೆಗಳ ಅರಿವು

**8. ಅಧಿಕ ಜನ ಸಾಂದ್ರತೆಗೆ ಕಾರಣಗಳನ್ನು ತಿಳಿಸಿ.** 1. ಫಲವತ್ತಾದ ಮಣ್ಣು, 2. ನೀರಾವರಿ, 3. ಸಾರಿಗೆ-ಸಂಪರ್ಕಗಳ ಅಭಿವೃದ್ಧಿ

**9. ಸಾಧಾರಣ ಜನ ಸಾಂದ್ರತೆಗೆ ಕಾರಣಗಳನ್ನು ತಿಳಿಸಿ.** 1. ಖನಿಜ ಸಂಪತ್ತು 2. ಲೋಹಾಧಾರಿತ ಉದ್ಯಮಗಳ ಅಭಿವೃದ್ಧಿ.

| ಅಧ್ಯಾಯ– 11. ಭಾರತದ ನೈಸರ್ಗಿಕ ವಿಪತ್ತುಗಳು | | | | |
|---|---|---|---|---|
| ನೈಸರ್ಗಿಕ ವಿಪತ್ತುಗಳು | ಕಾರಣಗಳು | ಪರಿಣಾಮಗಳು | ಹಂಚಿಕೆ | ಮುನ್ನಚ್ಚರಿಕಾ/ನಿಯಂತ್ರಣ ಕ್ರಮಗಳ |
| ಆವರ್ತ ಮಾರುತಗಳು :<br>ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದೇ ಆವರ್ತ ಮಾರುತ | * ಆಧಿಕ ಉಷ್ಣಾಂಶ * ಪ್ರಶಾಂತ ವಾಯು<br>* ಹೆಚ್ಚು ತೇವಾಂಶ ಭರಿತ ವಾಯು<br>ಪೂರ್ವಕರಾವಳಿ ಆವರ್ತಮಾರುತ ಪೀಡಿತ ಪ್ರದೇಶವಾಗಿರಲು ಕಾರಣ: ಉಷ್ಣ ವಲಯದ ಆವರ್ತ ಮಾರುತಗಳು ಹೆಚ್ಚಾಗಿ ಬಂಗಾಳ ಕೊಲ್ಲಿಯಲ್ಲಿ ಸಂಭವಿಸುವುದರಿಂದ | * ಸಾವು ಮತ್ತು ಆಸ್ತಿಗೆ ಹಾನಿ<br>* ಸಾರಿಗೆ ಮತ್ತು ಸಂಪರ್ಕ ಅಸ್ತವ್ಯಸ್ತ<br>* ಕಟ್ಟಡಗಳಿಗೆ ಧಕ್ಕೆ<br>* ಬೆಳೆ,ಸಸ್ಯವರ್ಗ ಮತ್ತು ಪ್ರಾಣಿಸಂಕುಲಕ್ಕೆ ಹಾನಿ | * ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳ | * ಸಂಪರ್ಕ ಮಾಧ್ಯಮಗಳ ಮೂಲಕ ಎಚ್ಚರಿಕೆ<br>* ಜನರಿಗೆ ತಾತ್ಕಾಲಿಕ ಆಶ್ರಯ<br>* ಮಾಂಗ್ರೋವ್ ಕಾಡು ಆಳಕ್ಕೆ ಬೇರು ಬಿಡುವ ಮರಗಳನ್ನು ಬೆಳಸುವುದು |
| ಪ್ರವಾಹಗಳು: ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತ ವಾಗುವುದೇ ಪ್ರವಾಹ. | ಮಾನವ ನಿರ್ಮಿತ ಕಾರಣಗಳು:– * ಅರಣ್ಯ ನಾಶ<br>* ಅವೈಜ್ಞಾನಿಕ ನೀರಾವರಿ ವ್ಯವಸ್ಥೆ ಮತ್ತು ಕೃಷಿ ಪದ್ಧತಿ<br>* ಒಡ್ಡು ಮತ್ತು ಅಣೆಕಟ್ಟು ಒಡೆಯುವುದು<br>* ನಗರೀಕರಣ<br>ನೈಸರ್ಗಿಕ ಕಾರಣ:– * ಆತ್ಯಧಿಕ ಮಳೆ * ಹಿಮ ಕರಗುವಿಕೆ * ಆವರ್ತಮಾರುತ * ಮೇಘಸ್ಫೋಟ | * ಜೀವಹಾನಿ * ಆಸ್ತಿಗೆ ಧಕ್ಕೆ<br>*ಬೆಳೆ ಮತ್ತು ಸಸ್ಯವರ್ಗಗಳಿಗೆ ಹಾನಿ<br>*ಸಾರಿಗೆ ಮತ್ತು ಸಂಪರ್ಕ ಅಸ್ತವ್ಯಸ್ತ<br>* ಮೂಲ ಸೌಲಭ್ಯಗಳ ವ್ಯತಯ<br>* ಮಣ್ಣಿನ ಸವೆತ | * ಗಂಗಾ ಮತ್ತು ಬ್ರಹ್ಮಪುತ್ರ, ಸಟ್ಲೇಜ್, ಬಿಯಾಸ್ ಮತ್ತು ಚೀನಾಬ್ ನದಿಬಯಲು<br>* ಪರ್ಯಾಯ ಪ್ರಸ್ಥಭೂಮಿ<br>* ನರ್ಮದಾ ಮತ್ತು ತಪತಿ ನದಿಗಳ ತಗ್ಗು | * ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು<br>* ಅಣೆಕಟ್ಟೆಗಳ ನಿರ್ಮಾಣ<br>* ಒಡ್ಡುಗಳ ನಿರ್ಮಾಣ<br>* ಪ್ರವಾಹಗಳ ಬಗ್ಗೆ ಮುನ್ಸೂಚನೆ ನೀಡುವುದು |
| ಭೂಕುಸಿತ<br>(ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವ ಭೂರಾಶಿ ಗಳಿಗೆ ಭೂಕುಸಿತ ಎನ್ನವರು | ಮಾನವ ನಿರ್ಮಿತ ಕಾರಣಗಳು:– * ಅರಣ್ಯ ನಾಶ<br>* ರೈಲು, ರಸ್ತೆ ಮತ್ತು ಜಲಾಶಯ ನಿರ್ಮಾಣ<br>* ಗಣಿಗಾರಿಕೆ * ಕಲ್ಲು ಗಣಿಗಾರಿಕೆ<br>ನೈಸರ್ಗಿಕ ಕಾರಣಗಳು:–* ಸಮುದ್ರದ ಅಲೆಗಳ ಸವೆತ<br>* ಆತ್ಯಧಿಕ ಮಳೆ * ಭೂಕಂಪ | * ರಸ್ತೆ ಮತ್ತು ರೈಲು ಮಾರ್ಗಗಳಿಗೆ ಅಡಚಣೆ * ಜನವಸತಿ ಹಾಗೂ ಸಸ್ಯವರ್ಗ ಭೂಗತವಾಗುವುದು<br>* ಸಾವು–ನೋವು ಮತ್ತು ಆಸ್ತಿಗಳಿಗೆ ಹಾನಿ | *ಜಮ್ಮು–ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಈಶಾನ್ಯ ರಾಜ್ಯಗಳು | * ಇಳಿಜಾರು ತಗ್ಗಿಸುವುದು<br>* ಇಳಿಜಾರುಗಳಲ್ಲಿ ಬಂಡೆ ಬೀಳದಂತೆ ತಡೆಯುವುದು<br>* ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ ನಿಯಂತ್ರಣ * ಅರಣ್ಯೀಕರಣ |
| ಸಮುದ್ರ ತೀರದ ಸವೆತ :<br>ಸಮುದ್ರ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ ಮತ್ತು ವಸ್ತಗಳ ಒಯ್ಯುವಿಕೆಗೆ ಸಮುದ್ರ ಕೊರೆತ ಎನ್ನುವರು | 1. ನೈರುತ್ಯ ಮಾನ್ಸೂನ್ ಮಾರುತಗಳು : ಪಶ್ಚಿಮ ಕರಾವಳಿಯ ಸವೆತಕ್ಕೆ ಕಾರಣವಾಗುತ್ತವೆ.<br>2. ಉಷ್ಣವಲಯದ ಆವರ್ತಮಾರುತಗಳು : ಈಶಾನ್ಯ ಮಾರುತಗಳ ಕಾಲದಲ್ಲಿ ಬಂಗಾಳಕೊಲ್ಲಿಯಲ್ಲಿ ಹೆಚ್ಚು ವಿನಾಶ ಕಾರಿಯಾಗಿ ಸಂಭವಿಸಿ ಪೂರ್ವ ಕರಾವಳಿಯ ತೀವ್ರ ಸವೆತಕ್ಕೆ ಕಾರಣವಾಗುತ್ತದೆ.<br>3. ಸುನಾಮಿ: ಭೂಕಂಪನದಿಂದ ಸಮುದ್ರ ತಳದಲ್ಲಿ ಸಂಭವಿಸುವ ದೈತಾಕಾರದ ಅಲೆಗಳೇ ಸುನಾಮಿ. | * ಕರಾವಳಿ ಪ್ರದೇಶದ ಕಟ್ಟಡ ಮತ್ತು ಮರಗಳು ಕೊಚ್ಚಿ ಹೋಗುವುದು<br>* ಕರಾವಳಿಯ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ<br>* ಜನರಿಗೆ ಪುನರ್ವಸತಿ ಕಲ್ಪಿಸುವುದು. | 1.ಪಶ್ಚಿಮ ಕರಾವಳಿ: ಗುಜರಾತ್, ಗೋವ, ಕೇರಳ, ಕರ್ನಾಟಕ.<br>2. ಪೂರ್ವ ಕರಾವಳಿಯ ತಮಿಳುನಾಡು. ಆಂಧ್ರಪ್ರದೇಶ, ಒರಿಸ್ಸಾ<br>3. ಪೂರ್ವ ಕರಾವಳಿ ಮತ್ತು ಅಂಡಮಾನ್–ನಿಕೋಬಾರ್ ದ್ವೀಪಗಳು ಕೊರೆತ ಹೆಚ್ಚು | * ಸಮುದ್ರ ಗೋಡೆ, ತಡೆಗಟ್ಟು ಮತ್ತು ಅಲೆತಡೆಗಳ ನಿರ್ಮಾಣ<br>* ತೀರದಲ್ಲಿ ಮರಳು ಮತ್ತು ಗಣಿಗಾರಿಕೆ ನಿಷೇಧ<br>* ಮರಗಳನ್ನು ಬೆಳಸುವುದು. |
| ಭೂಕಂಪಗಳು<br>ಭೂ ಚಿಪ್ಪಿನಲ್ಲಾಗುವ ರಭಸವಾದ ಕಂಪನವೇ ಭೂಕಂಪ | * ಭೂ ಫಲಕಗಳ ಚಲನೆ * ಜ್ವಾಲಾಮುಖಿ<br>* ಶಿಲಾಸ್ತರಗಳ ಭಂಗ ಮತ್ತು ಮಡಿಕೆ<br>* ಮಾನವ ನಿರ್ಮಿತ ಜಲಾಶಯಗಳ ನೀರಿನ ಭಾರ<br>* ಭೂಕುಸಿತ | * ಕಟ್ಟಡ, ರೈಲುಮತ್ತು ರಸ್ತೆ ಮಾರ್ಗಕ್ಕೆ ಹಾನಿ. * ಸಾವು ಮತ್ತು ಆಸ್ತಿಗೆ ಹಾನಿ * ಭೂ ಕುಸಿತ<br>* ಅಂತರ್ಜಲ ಮಟ್ಟದಲ್ಲಿ ವ್ಯತ್ಯಾಸ<br>* ನದಿ ವ್ಯವಸ್ಥೆಯ ವಿಚಲನೆ | * ಹಿಮಾಲಯ ವಲಯ<br>* ಸಿಂಧೂ–ಗಂಗಾ ವಲಯ<br>* ಪರ್ಯಾಯ ದ್ವೀಪ ವಲಯ | * ಅರಣ್ಯ ನಾಶ ಮತ್ತು ಗಣಿಗಾರಿಕೆ ತಡೆಯುವುದು. * ಭೂಕಂಪನಾ ವಲಯಗಳಲ್ಲಿ ಜನವಸತಿಗಳ ನಿರ್ಮಾಣಕ್ಕೆ ನಿಷೇಧ *ಬಹು ದೊಡ್ಡ ಜಲಾಶಯಗಳ ನಿರ್ಮಾಣ ನಿಷೇಧ |

*ವಿ.ಸೂಚನೆ : ಈ ಮೇಲಿನ ಪಟ್ಟಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಅಭ್ಯಾಸ ಪ್ರಶ್ನೆಗಳನ್ನು ಶಿಕ್ಷಕರೇ ರಚಿಸಿ ಅಭ್ಯಾಸ ಮಾಡಿಸುವುದು.*

## ಅರ್ಥಶಾಸ್ತ್ರ

## ಅಧ್ಯಾಯ – 1. ಅಭಿವೃದ್ಧಿ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಅಭಿವೃದ್ಧಿ ಎಂದರೇನು?** – ಒಂದು ದೇಶದ ಎಲ್ಲಾ ಜನರ ಆಶೋತ್ತರಗಳನ್ನು ಈಡೇರಿಸುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆ

**2. ಆರ್ಥಿಕ ಅಭಿವೃದ್ಧಿ ಎಂದರೇನು?**

– ಒಂದು ರಾಷ್ಟ್ರದ ಜನರ ಆರ್ಥಿಕ ಆಶೋತ್ತರಗಳನ್ನು ಪೂರೈಸುವ ಸಾಮರ್ಥ್ಯ ಹೆಚ್ಚಿಸಿ; ಬಡತನ, ನಿರುದ್ಯೋಗ, ಅಸಮಾನತೆ, ಹಣದುಬ್ಬರಗಳಂಥ ಆರ್ಥಿಕ ಸಮಸ್ಯೆಗಳನ್ನು ನಿಯಂತ್ರಿಸುವುದು

**3. ಪ್ರೊ. ಮೇಯರ್ ಮತ್ತು ಬಾಲ್ಡವಿನ್ ಅವರು ಆರ್ಥಿಕ ಅಭಿವೃದ್ಧಿಯನ್ನು ಹೇಗೆ ವ್ಯಾಖ್ಯಾನಿಸಿದ್ದಾರೆ?**

– ಒಂದು ರಾಷ್ಟ್ರದ ನೈಜ ರಾಷ್ಟ್ರೀಯ ವರಮಾನವು ದೀರ್ಘಾವಧಿಯವರೆಗೆ ಹೆಚ್ಚಳವಾಗುವ ಪ್ರಕ್ರಿಯೆಯೇ ಆರ್ಥಿಕ ಅಭಿವೃದ್ಧಿ

4. ಪ್ರಕ್ರಿಯೆ ಎಂದರೇನು?–**ಪ್ರಕ್ರಿಯೆ ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ**

5. **ರಾಷ್ಟ್ರೀಯ ವರಮಾನ ಎಂದರೇನು?** –ಒಂದು ವರ್ಷದ ಅವಧಿಯಲ್ಲಿ ದೇಶದಲ್ಲಿ ಉತ್ಪಾದಿಸಿದ ಎಲ್ಲ ಸರಕು–ಸೇವೆಗಳ ಒಟ್ಟು ಮೌಲ್ಯ.

6. ಜಾಗತಿಕ ಮಾನವ ಅಭಿವೃದ್ಧಿ ವರದಿಗಳ ಪ್ರಕಟಣೆಯ ಹೊಣೆ ಹೊತ್ತಿರುವ ಸಂಸ್ಥೆ ಯಾವುದು? **– ವಿಶ್ವ ಬ್ಯಾಂಕು**

7. 2014ರಲ್ಲಿ ಭಾರತವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಎಷ್ಟನೆಯ ಸ್ಥಾನ ಹೊಂದಿತ್ತು? **– 135**

**8. ಅನಾಭಿವೃದ್ಧಿ ಎಂಬ ಶಬ್ದವು ಏನನ್ನು ಸೂಚಿಸುತ್ತದೆ?**– ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು ಸೂಚಿಸುತ್ತದೆ.

**9. ತಲಾ ವರಮಾನವನ್ನು ಹೇಗೆ ಕಂಡು ಹಿಡಿಯಲಾಗುತ್ತದೆ?**– ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸುವುದರಿಂದ.

**10. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎಂದರೇನು? (ವಿಶ್ವ ಬ್ಯಾಂಕ್ ಪ್ರಕಾರ)**

– ಮಧ್ಯಮ ಮತ್ತು ಕಡಿಮೆ ವರಮಾನ ಹೊಂದಿದ ರಾಷ್ಟ್ರಗಳು.

11. ಸಂಯುಕ್ತ ರಾಷ್ಟ್ರದ(ವಿಶ್ವ ಸಂಸ್ಥೆ) ಪ್ರಕಾರ ಅನಾಭಿವೃದ್ಧಿ ರಾಷ್ಟ್ರಗಳು ಎಂದರೇನು?

**–ಅಮೇರಿಕ, ಕೆನಡಾ, ಆಸ್ಟ್ರೇಲಿಯ ಮತ್ತು ಪಶ್ಚಿಮ ಯುರೋಪ್‌ನ ರಾಷ್ಟ್ರಗಳಿಗಿಂತ ಕಡಿಮೆ ನೈಜ ತಲಾ ವರಮಾನ ಹೊಂದಿರುವ ರಾಷ್ಟ್ರಗಳು.**

**12. ಮಾನವ ಅಭಿವೃದ್ಧಿ ಸೂಚಿಗಳು ಎಂದರೇನು?**

– ವ್ಯಕ್ತಿಗಳ ನಿರೀಕ್ಷಿತ ಜೀವಿತಾವಧಿ, ಸಾಕ್ಷರತೆಯ ಪ್ರಮಾಣ ಮತ್ತು ತಲಾ ವರಮಾನ ಇವುಗಳ ಸರಾಸರಿ.

**13. ಲಿಂಗ ಅನುಪಾತ ಎಂದರೇನು?** – ಪ್ರತಿ 1000 ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆ.

14. 2011ರ ಜನಗಣತಿಯ ಪ್ರಕಾರ ಪುರುಷರು ಮತ್ತು ಮಹಿಳೆಯರ ಸಾಕ್ಷರತಾ ದರವು ಎಷ್ಟಿತ್ತು?

**– ಪುರುಷರ ಸಾಕ್ಷರತಾ ದರ ಶೇ. 82.14, ಮಹಿಳೆಯರ ಸಾಕ್ಷರತಾ ದರ ಶೇ.65.46,**

**15. ಭಾರತದಲ್ಲಿ ಲಿಂಗಾನುಪಾತ ಕುಸಿಯುತ್ತಿದೆ.ಏಕೆ?**

– ತಾಯಿಯ ಗರ್ಭದಲ್ಲಿರುವಾಗಲೇ ಹೆಣ್ಣು ಭ್ರೂಣಗಳನ್ನು ಪತ್ತೆಹಚ್ಚಿ, ಹತ್ಯೆ ಮಾಡುತ್ತಿರುವುದರಿಂದ.

**16. ಸ್ವಸಹಾಯ ಸಮೂಹಗಳನ್ನು ಏಕೆ ಸ್ಥಾಪಿಸಲಾಗಿದೆ?**

– ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಅವರ ಸಬಲೀಕರಣವನ್ನು ಸಾಧಿಸಲು.

**17. ಮಹಿಳಾ ಸಬಲೀಕರಣ ಎಂದರೇನು?**

– ಈ ಹಿಂದೆ ಮಹಿಳೆಯರಿಗೆ ನಿರಾಕರಿಸಲಾದ ಜೀವನದ ಮಹತ್ವದ ಆಯ್ಕೆಗಳನ್ನು ಮಾಡುವ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಕ್ರಿಯೆ

18. ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ರಾಷ್ಟ್ರೀಯ ವರಮಾನವು ಸೂಕ್ತವಾಗುವುದಿಲ್ಲ. ಏಕೆ?

**– ರಾಷ್ಟ್ರೀಯ ವರಮಾನದ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.**

**19. ನಿರೀಕ್ಷಿತ ಜೀವಿತಾವಧಿಯನ್ನು ವ್ಯಾಖ್ಯಾನಿಸಿ.** – ಒಂದು ದೇಶದಲ್ಲಿರುವ ಜನರು ಜೀವಿಸುವ ಸರಾಸರಿ ಆಯಸ್ಸು.

**20. ಪ್ರೊ. ಕೋಲಿನ್ ಕ್ಲಾರ್ಕ್ ಪ್ರಕಾರ ಆರ್ಥಿಕ ಅಭಿವೃದ್ಧಿ ಎಂದರೇನು?**

– ಆರ್ಥಿಕ ಅಭಿವೃದ್ಧಿಯು ಜನರ ಆರ್ಥಿಕ ಕಲ್ಯಾಣದ ಹೆಚ್ಚಳವೆಂದು ವಿವರಿಸುತ್ತಾರೆ.

21. **ಮಾನವ ಅಭಿವೃದ್ಧಿ ಸೂಚ್ಯಂಕ** ಎಂಬ ಮಾನದಂಡವನ್ನು ರಚಿಸಿ, ರಾಷ್ಟ್ರಗಳ ಪ್ರಗತಿಯನ್ನು ಮಾಪನ ಮಾಡುತ್ತಿರುವ ಸಂಸ್ಥೆ ಯಾವುದು? **– ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP)**

**II.ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಅಭಿವೃದ್ಧಿ ಪ್ರಕ್ರಿಯೆಯ ವಿವರಣೆ ನೀಡಿ.**

1. ಪ್ರಕ್ರಿಯೆ ಎಂಬ ಪದವು ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.
2. **ಉತ್ಪಾದನಾಂಗಗಳ ಪೂರೈಕೆಯ ಬದಲಾವಣೆಗೆ ಕಾರಣ** : ಹೊಸ ಸಂಪನ್ಮೂಲಗಳ ಶೋಧ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಬಂಡವಾಳ ಸಂಚಯನ, ಜನಸಂಖ್ಯಾ ಬೆಳವಣಿಗೆ, ಉತ್ತಮ ತಾಂತ್ರಿಕತೆ
3. **ಸರಕುಗಳ ಬೇಡಿಕೆಯ ಬದಲಾವಣೆಗೆ ಕಾರಣ** : ಜನಸಂಖ್ಯೆಯ ಬೆಳವಣಿಗೆ ಮತ್ತು ಅದರ ಲಕ್ಷಣಗಳ ಬದಲಾವಣೆ, ವರಮಾನದಮಟ್ಟ ಹಾಗೂ ಅದರ ಹಂಚಿಕೆಯಲ್ಲಿನ ಬದಲಾವಣೆ, ಜನರ ಅಭಿರುಚಿಗಳಲ್ಲಿನ ಬದಲಾವಣೆ

**2. ಅನಾಭಿವೃದ್ಧಿ ರಾಷ್ಟ್ರಗಳ ಲಕ್ಷಣಗಳಾವುವು?** –1. ಉತ್ಪಾದನೆ ಕಡಿಮೆ, 2. ಜನಸಂಖ್ಯೆಯ ಹೆಚ್ಚಳ, 3. ಕಡಿಮೆ ತಲಾವರಮಾನ

**3. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೇಗೆ ಲೆಕ್ಕ ಹಾಕುತ್ತೀರಿ?**

– ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿ, ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣ, ಹಾಗೂ ಖರೀದಿ ಶಕ್ತಿಯನ್ನು ತಲಾ ವರಮಾನ ಬಳಸಿ ಅಳೆಯಲಾಗುತ್ತದೆ

**4. ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.**

1. ಆಹಾರದ ಕೊರತೆ 2.ವಸತಿಯ ಕೊರತೆ 3. ಬಟ್ಟೆಯ ಕೊರತೆ 4. ಶಿಕ್ಷಣದ ಕೊರತೆ 5. ಶುದ್ಧ ಕುಡಿಯುವ ನೀರಿನ ಕೊರತೆ 6. ಆರೋಗ್ಯದ ಕೊರತೆ 7. ಸಾಮಾಜಿಕ ಭದ್ರತೆಯ ಕೊರತೆ 8. ಶುದ್ಧ ಗಾಳಿಯ ಕೊರತೆ 9. ಸ್ವಚ್ಛ ಪರಿಸರದ ಕೊರತೆ

**5. ಲಿಂಗ ಸಮಾನತೆಯನ್ನು ಸಾಧಿಸುವುದು ಹೇಗೆ?**

1. ಸಮಾನ ವೇತನ ಜಾರಿ, 2. ಉದ್ಯೋಗ ಮತ್ತು ರಾಜಕೀಯದಲ್ಲಿ ಮೀಸಲಾತಿ 3. ಮಹಿಳಾ ಸಾಕ್ಷರತೆ ಹೆಚ್ಚಿಸುವುದು
4. ಮಹಿಳೆಯರ ಸಬಲೀಕರಣಕ್ಕೆ ಕ್ರಮ 5. ಮಹಿಳೆಯರ ವಿರುದ್ಧದ ಹಿಂಸೆ ತಡೆಗಟ್ಟುವುದು

**6. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ**

1. ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಪ್ರೇರೇಪಣೆ. 2. 20 ಸಮಾನ ಮನಸ್ಕ ಮಹಿಳೆಯರ ಒಂದು ಸಂಘ
3. ಸಂಪನ್ಮೂಲಗಳನ್ನು ಕ್ರೋಢೀಕರಿಸಿ ವರಮಾನ ಹೆಚ್ಚಳಕ್ಕೆ ಪ್ರಯತ್ನ
4. ಬ್ಯಾಂಕಿನ ಜೊತೆ ವ್ಯವಹಾರ, ಲೆಕ್ಕ ನಿರ್ವಹಣೆ, ವರಮಾನ ಸೃಷ್ಟಿ ಉದ್ಯೋಗ ತರಬೇತಿ
5. ಮಹಿಳೆಯರ ವರಮಾನ ಹಾಗೂ ಉಳಿತಾಯಕ್ಕೆ ಕಾರಣ. 6. ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ

**7. ತಲಾವರಮಾನವು ಅಭಿವೃದ್ಧಿಯ ನೈಜ ಮಾಪಕವಾಗಲಾರದು ಏಕೆ?**

1. ತಲಾ ವರಮಾನವು ಜನರ ನಡುವಿನ ವರಮಾನ ಹಂಚಿಕೆಯನ್ನು ಅದು ತೋರಿಸುವುದಿಲ್ಲ.
2. ಅದು ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ.

**8. ರಾಷ್ಟ್ರೀಯ ವರಮಾನವು ಅಭಿವೃದ್ಧಿಯ ನೈಜ ಮಾಪಕವಾಗಲಾರದು ಏಕೆ?**

1. ರಾಷ್ಟ್ರೀಯ ವರಮಾನದ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.
2. ವಿಭಿನ್ನ ವರಮಾನ ಮತ್ತು ಜನಸಂಖ್ಯೆಗಳುಳ್ಳ ರಾಷ್ಟ್ರಗಳ ಅಭಿವೃದ್ಧಿಯ ಹೋಲಿಕೆ ಮಾಡುವುದಕ್ಕೆ ಇದು ಸೂಕ್ತವಲ್ಲ.

**9. ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಹೇಗೆ ಅಳೆಯುತ್ತಾರೆ?**

1. ದೇಶದಲ್ಲಿನ 25 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರು ಪೂರ್ಣಗೊಳಿಸಿದ ಶಿಕ್ಷಣದ ಅವಧಿ.
2. ಐದು ವರ್ಷದ ಮಕ್ಕಳು ಪಡೆಯಬಹುದಾದ ಶಿಕ್ಷಣದ ಅವಧಿ. ಇವುಗಳನ್ನು ಬಳಸಿ.

**10. ನಿರೀಕ್ಷಿತ ಜೀವಿತಾವಧಿಯನ್ನು ನಿರ್ಧರಿಸುವ ಅಂಶಗಳಾವುವು?**

1. ಪೌಷ್ಠಿಕ ಆಹಾರ, 2. ಆರೋಗ್ಯ ಮತ್ತು ನೈರ್ಮಲ್ಯ, 3. ಸ್ವಚ್ಛ ಪರಿಸರ 4. ಶುದ್ಧ ಕುಡಿಯುವ ನೀರು 5. ಶುದ್ಧ ಗಾಳಿ

11. ಮಹಿಳೆಯರನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಕೈಗೊಂಡಿರುವ ಕ್ರಮಗಳಾವುವು? ಅಥವಾ ಮಹಿಳಾ ಸಬಲೀಕರಣಕ್ಕೆ ಕೈಗೊಂಡಿರುವ ಕ್ರಮಗಳಾವುವು?

**1. ಮಹಿಳೆಯರ ಮೇಲಿನ ಹಿಂಸೆ ತಡೆಗಟ್ಟಲು ಕಾನೂನು ಜಾರಿ, 2. ಸಮಾನ ವೇತನ ಜಾರಿ, 3. ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ**

**12. ಅರ್ಥಶಾಸ್ತ್ರಜ್ಞರಾದ ಮಹಬೂಬ್ ಉಲ್ ಹಕ್ ರವರ ಪ್ರಕಾರ ಮಾನವರು ಘನತೆಯುತ ಜೀವನ ನಡೆಸಲು ಬೇಕಾಗಿರುವ ಅತ್ಯಂತ ಮಹತ್ವದ ಅಂಶಗಳು ಯಾವುವು?**

1. ಸುದೀರ್ಘವಾದ ಆರೋಗ್ಯಯುತ ಜೀವನ ನಡೆಸುವುದು 2. ಜ್ಞಾನವಂತರಾಗಿರುವುದು.
3. ಜೀವನಕ್ಕೆ ಅವಶ್ಯವಿರುವ ಕನಿಷ್ಠ ಸೌಲಭ್ಯಗಳನ್ನು ಖರೀದಿಸಲು ಅವಶ್ಯವಿರುವ ವರಮಾನ ಹೊಂದುವುದು.

## ಅಧ್ಯಾಯ – 2. ಗ್ರಾಮೀಣ ಅಭಿವೃದ್ಧಿ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.**

–ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉತ್ತಮಪಡಿಸುವ ಹಾಗೂ ಗ್ರಾಮ ಪ್ರದೇಶಗಳ ಏಳ್ಗೆಯನ್ನು ಸಾಧಿಸುವ ಪ್ರಕ್ರಿಯೆ

2. **ಭಾರತದ ನೈಜ ಅಭಿವೃದ್ಧಿಯೆಂದರೆಅದು ಗ್ರಾಮಗಳ ಅಭಿವೃದ್ಧಿ** ಎಂದು ಹೇಳಿದವರು ಯಾರು?**– ಮಹಾತ್ಮ ಗಾಂಧೀಜಿ**

**3. ಮಹಿಳಾ ಸ್ವಸಹಾಯ ಸಂಘ ಏಕೆ ಸ್ಥಾಪಿಸಲಾಗಿದೆ?**

– ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು

**4. ವಿಕೇಂದ್ರೀಕರಣ ಎಂದರೇನು?**

– ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸುವುದು.

**5. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.** (ಸಂವಿಧಾನದ 73 ನೆಯ ತಿದ್ದುಪಡಿಯಂತೆ)

1. ಗ್ರಾಮ ಪಂಚಾಯತಿ, 2. ತಾಲ್ಲೂಕು ಪಂಚಾಯತಿ 3. ಜಿಲ್ಲಾ ಪಂಚಾಯತಿ

**6. ಸರ್ಕಾರ ಜಾರಿಗೆ ತಂದಿರುವ ವಸತಿ ಯೋಜನೆಗಳನ್ನು ತಿಳಿಸಿ.**

– ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್– ವಾಲ್ಮೀಕಿ ವಸತಿ ಯೋಜನೆ, ಆಶ್ರಯ ಯೋಜನೆ

**7. ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವೇನು?** – ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆ

8. ಗಾಂಧೀಜಿಯವರು**ಗ್ರಾಮ ಸ್ವರಾಜ್**ಎಂದು ಯಾವುದನ್ನು ಕರೆದರು?

– ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸುವುದು.

9. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕೆ ಪುನರುಜ್ಜೀವನ ಮಾಡಲಾಗಿದೆ? **–ವಿಕೇಂದ್ರೀಕರಣಕ್ಕೆ ಪ್ರೋತ್ಸಾಹ**

10. ಪಂಚಾಯತ್ ಸಂಸ್ಥೆಗಳು ಯಾವ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ? **–ವಿಕೇಂದ್ರೀಕರಣ**

11. ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಯಾವಾಗ ಅಸ್ತಿತ್ವಕ್ಕೆ ಬಂದವು? **–1993**

**12. ಕರ್ನಾಟಕದಲ್ಲಿ ಎಷ್ಟು ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳಿವೆ?**

– 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು 6,022 ಗ್ರಾಮ ಪಂಚಾಯತಿಗಳಿವೆ.

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

1. ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ. 2. ಶೇ.60 ರಷ್ಟು ಜನರು ಕೃಷಿಯಲ್ಲಿ ದುಡಿಮೆ,
3. ರಾಷ್ಟ್ರೀಯ ಆದಾಯಕ್ಕೆ ಕೃಷಿಯ ಕೊಡುಗೆ ಕಡಿಮೆ.
4. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಹೆಚ್ಚಾಗುತ್ತಿದೆ.

**2. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.**

1. ಗ್ರಾಮೀಣ ಅಭಿವೃದ್ಧಿ ಒಟ್ಟಾರೆ ರಾಷ್ಟ್ರದ ಅಭಿವೃದ್ಧಿಯಾಗಿರುತ್ತದೆ. 2. ಕೃಷಿ ವರಮಾನ ಹೆಚ್ಚಳ
3. ಔದ್ಯಮಿಕ ಸರಕು–ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ, 4. ಅಧಿಕ ಉದ್ಯೋಗ ಸೃಷ್ಟಿ. 5. ಬಡತನ ಇಳಿಮುಖ.
6. ಶಿಕ್ಷಣ ಮತ್ತು ಕೌಶಲಗಳಿಂದ ಹೆಚ್ಚಿನ ಉತ್ಪಾದನೆ ಸಾಧ್ಯ 7. ಕೃಷಿ ಸಂಸ್ಕರಣೆ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ.
8. ಉತ್ತಮ ಆರೋಗ್ಯದಿಂದ ಜನರ ಕೆಲಸದ ಸಹಭಾಗಿತ್ವ ಹೆಚ್ಚಾಗುತ್ತದೆ, 9. ರಾಷ್ಟ್ರೀಯ ಉತ್ಪನ್ನ ಹೆಚ್ಚಾಗುತ್ತದೆ.

**3. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.**

1. ಗ್ರಾಮದ ಆಡಳಿತ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಿವುದು
2. ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾಲುದಾರಿಕೆಯ ಹೆಚ್ಚಳ. 3.ಇದನ್ನೇ ಗಾಂಧೀಜಿಯವರು ಗ್ರಾಮ ಸ್ವರಾಜ್ಯ ಎಂದು ಕರೆದಿದ್ದರು.
4. ತಳಮಟ್ಟದಿಂದ ಯೋಜನೆ ರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯಾಗಿದೆ.
5. ಎಲ್ಲಾ ರೀತಿಯ ಶೋಷಣೆಗಳನ್ನು ತಡೆಯುತ್ತದೆ, 6. ಮಾನವನ ಸ್ವಾತಂತ್ರ್ಯ ಮತ್ತು ಘನತೆಯ ರಕ್ಷಣೆ.
7. ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳ ವೃದ್ಧಿ.

**4. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೇನು?**

1. ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ, ಆಸ್ಪತ್ರೆ, ಮಾರುಕಟ್ಟೆಗಳ ಅಭಿವೃದ್ಧಿ
2. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕಶಿಕ್ಷಣ, ತಾಂತ್ರಿಕ ಹಾಗೂ ವೃತ್ತಿ ತರಬೇತಿಗೆ ಪ್ರೋತ್ಸಾಹ.
3. ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ 4. ಗ್ರಾಮಸಭೆ ನಡೆಸಿ ಅಭಿವೃದ್ಧಿ ಯೋಜನೆ ರೂಪಿಸುವುದು.
5. ಉದ್ಯೋಗ ಖಾತ್ರಿ ಯೋಜನೆ ಮೂಲಕ ಉದ್ಯೋಗ ನಿರ್ಮಾಣ ಮತ್ತು ಬಡತನ ನಿರ್ಮೂಲನೆ.
6. ವಸತಿ ಇಲ್ಲದವರಿಗೆ ಆಶ್ರಯ ಯೋಜನೆಗಳ ಜಾರಿ 7. ಅರ್ಹ ಬಡವರಿಗೆ ಪಡಿತರ ವ್ಯವಸ್ಥೆ ಒದಗಿಸುವುದು
8. ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ ಮತ್ತು ಸಾಮಾಜಿಕ ಅರಣ್ಯಗಳ ಅಭಿವೃದ್ಧಿ
9. ಕೆರೆ ಕಟ್ಟೆಗಳ ನಿರ್ಮಾಣ, ಹೂಳು ತೆಗೆಯುವುದು, ನೀರಾವರಿ ಯೋಜನೆಗಳ ವಿಸ್ತರಣೆ.
11. ಗ್ರಾಮೀಣ ಗುಡಿ ಕೈಗಾರಿಕೆಗಳ ಅಭಿವೃದ್ಧಿ.

**5. ಗ್ರಾಮೀಣ ಅಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳು ಯಾವುವು?**

1. ಮಾನವ ಸಂಪನ್ಮೂಲ ಅಭಿವೃದ್ಧಿ 2. ಭೂ ಸುಧಾರಣೆ 3. ಸ್ಥಳೀಯ ಉತ್ಪಾದಕ ಸಂಪನ್ಮೂಲಗಳ ಅಭಿವೃದ್ಧಿ
4. ವಿದ್ಯುತ್ ಶಕ್ತಿ, ನೀರಾವರಿ, ಸಾರಿಗೆ ಅಭಿವೃದ್ಧಿ 5. ಹಣಕಾಸು, ಮಾರುಕಟ್ಟೆಗಳ ಅಭಿವೃದ್ಧಿ
6. ಕೃಷಿ ಸಂಶೋಧನೆ ಹಾಗೂ ಮಾಹಿತಿ ಪ್ರಸರಣಗಳ ಅಭಿವೃದ್ಧಿ 7. ಬಡತನ ನಿರ್ಮೂನೆ ಯೋಜನೆಗಳು.

**6. ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಮುಖ ಲಕ್ಷಣಗಳು ಯಾವುವು?**

1. ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಮೂರು ಹಂತ. ಗ್ರಾಮಸಭೆ ತಳಹದಿ.
2. ನೇರ ಹಾಗೂ ನಿಯಮಿತ ಚುನಾವಣೆಗಳು. 3.ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿ.
4. ಹಣಕಾಸು, ಮುಂಗಡಪತ್ರ ಮಂಡಿಸುವ ಮತ್ತು ಲೆಕ್ಕ ಪರಿಶೋಧಿಸುವ ಜವಾಬ್ದಾರಿ.
5. ಕಾರ್ಯನಿರ್ವಾಹಕ ಮತ್ತು ಇತರ ಸಿಬ್ಬಂದಿ. 6. ಪಂಚಾಯತಿ ವಿಸರ್ಜನೆಗೊಂಡ ಆರು ತಿಂಗಳ ಒಳಗೆ ಕಡ್ಡಾಯ ಚುನಾವಣೆ.

**7. ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿ.**

1. ಕೃಷಿ, ಪಶುಪಾಲನೆ ಮುಂತಾದ ಪ್ರಾಥಮಿಕ ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ.

2. ವ್ಯಾಪಾರ, ಶಿಕ್ಷಣ ಸಂಸ್ಥೆ, ಆಸ್ಪತ್ರೆಗಳು, ವೃದ್ಧಾಶ್ರಮಗಳಲ್ಲಿ ಮಹಿಳೆಯರ ಸೇವೆ.
3. ವಿದ್ಯಾವಂತ ಮಹಿಳೆಯರಿಂದ ಜನಸಂಖ್ಯಾ ನಿಯಂತ್ರಣ. 4. ಸ್ವಚ್ಛ ಹಾಗೂ ಪ್ರಗತಿಪರ ಸಮಾಜ ಕಟ್ಟುವಲ್ಲಿ ಮಹಿಳೆಯರ ಪಾತ್ರ.
5. ಸರ್ಕಾರಿ ಕಛೇರಿಗಳಲ್ಲಿ ಪುರುಷರಿಗೆ ಸರಿಸಮನಾಗಿ ದುಡಿಮೆ. 6. ರಾಜಕೀಯದಲ್ಲಿ ಅಧಿಕಾರ ಹಿಡಿದು ದೇಶದ ಪ್ರಗತಿಗೆ ಶ್ರಮ.
7. ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಆರ್ಥಿಕ ಸ್ವಾವಲಂಬಿಗಳಾಗುತ್ತಿದ್ದಾರೆ.

**8. ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.**

1. ಎಲ್ಲಾ ಗ್ರಾಮಗಳಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸ್ಥಾಪನೆ.
2. ಗ್ರಾಮೀಣ ಮಹಿಳೆಯರನ್ನು ಸಂಘಟಿಸಿ ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುತ್ತಿವೆ
3. ಇವುಗಳಲ್ಲಿ ಮಹಿಳೆಯರು ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದಾರೆ.
4. ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಸಾಧನೆ ಮಾಡುತ್ತಿವೆ.
5. ಹಳ್ಳಿಗಳಲ್ಲಿರುವ ಸಾಮಾಜಿಕ ಪಿಡುಗುಗಳ ವಿರುದ್ಧ ಸಂಘಟಿತ ಹೋರಾಟ.
6. ಸ್ವಚ್ಛ ಹಾಗೂ ಪ್ರಗತಿಪರ ಸಮಾಜ ಕಟ್ಟಲು ಮಹಿಳೆಯರ ನೆರವು.

## ಅಧ್ಯಾಯ – 3. ಹಣ ಮತ್ತು ಸಾಲ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಚೆಕ್ಕುಗಳು ಯಾವ ಹಣದ ಸಾಧನವಾಗಿವೆ? **–ಬ್ಯಾಂಕ್ ಹಣ**
2. ಭಾರತೀಯ ರಿಜರ್ವ ಬ್ಯಾಂಕು ಯಾವಾಗ ಸ್ಥಾಪನೆಯಾಯಿತು? **– 1935 ಎಪ್ರಿಲ್ 1**
3. ಜಪಾನ್ ದೇಶದ ಹಣವನ್ನು ಏನೆಂದು ಕರೆಯುತ್ತೇವೆ? **– ಯೆನ್**
4. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು ಯಾವ ವರ್ಷ ರಾಷ್ಟ್ರೀಕರಿಸಿತು? **– 1969**
5. ಕಿರಿದಾದ ಹಣದ ಪೂರೈಕೆಯನ್ನು ಯಾವುದರ ಮೂಲಕ ಅಳೆಯುತ್ತೇವೆ? **– M1 ಮತ್ತು M2**
6. ಸಾಟಿವಿನಿಮಯ ಪದ್ಧತಿ ಎಂದರೇನು? **– ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುವುದು.**

**7. ಹಣದುಬ್ಬರವು ಯಾವಾಗ ಸಂಭವಿಸುತ್ತದೆ?** – ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ ಹೆಚ್ಚಾದಾಗ

**8. ಹಣ ಎಂದರೇನು?**

– ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಿಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣ

**9. ವಸ್ತು ರೂಪದ ಹಣಕ್ಕೆ ಯಾವ ಯಾವ ದೇಶಗಳಲ್ಲಿ ಯಾವುದನ್ನು ಬಳಸುತ್ತಿದ್ದರು?**

– ಗ್ರೀಸ್‌ನಲ್ಲಿ ಜಾನುವಾರುಗಳು, ರೋಮ್‌ನಲ್ಲಿ ಕುರಿಗಳು, ಚೀನಾದಲ್ಲಿ ಹಲ್ಲುಗಳು

**10. ಕಾಗದದ ಹಣವನ್ನು ಯಾವ ಯಾವ ದೇಶಗಳಲ್ಲಿ ಯಾವ ಹೆಸರಿನಿಂದ ಕರೆಯುತ್ತಾರೆ?**

– ಭಾರತದ– ರೂಪಾಯಿ, ಅಮೇರಿಕ– ಡಾಲರ್, ಇಂಗ್ಲೆಂಡ್– ಪೌಂಡ್, ಜಪಾನ್– ಯೆನ್, ಚೀನಾ– ಯುವಾನ್

11\. ಬ್ಯಾಂಕ್ ಹಣಕ್ಕೆ ಉದಾಹರಣೆ ಕೊಡಿ. **– ಚೆಕ್ಕುಗಳು, ಡ್ರಾಫ್ಟ್‌ಗಳು, ಠೇವಣಿ ರಸೀದಿ**

12\. ಪ್ಲಾಸ್ಟಿಕ್ ಹಣಕ್ಕೆ ಉದಾಹರಣೆ ಕೊಡಿ – ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್

**13. ಬ್ಯಾಂಕಿಂಗ್ ಎಂದರೇನು?**

– ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ, ಬೇಡಿಕೆ ಆಧಾರದ ಮೇಲೆ ಹಣ ಮರುಪಾವತಿಸುವುದು, ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳ ಮೂಲಕ ಹಣ ಹಿಂಪಡೆಯುವ ಪ್ರಕ್ರಿಯೆ.

14\. ಭಾರತೀಯ ರಿಜರ್ವ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣ ಮಾಡಲಾಯಿತು? **– ಜನವರಿ 1, 1949**

15\. ಭಾರತದಲ್ಲಿ ಒಂದು ರೂಪಾಯಿಯ ನೋಟನ್ನು ಯಾರು ಮುದ್ರಿಸಿ ಚಲಾಯಿಸುತ್ತಾರೆ? **– ಸರ್ಕಾರದ ಪರವಾಗಿ ಆರ್.ಬಿ.ಐ**

**16. ಹಣಕಾಸು ನೀತಿ ಎಂದರೇನು?**

– ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳು.

**18. ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದರೇನು?**

– ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿರುವ ಹಣವನ್ನು ಬ್ಯಾಂಕುಗಳಿಂದ ಅಲ್ಪಾವಧಿ ಸೂಚನೆ ನೀಡಿ ಬೇಡಿಕೆಯಾಧಾರದ ಮೇಲೆ ಹೊರತೆಗೆಯುವ ಠೇವಣಿ.

**19. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್‌ಗಳನ್ನು ಇ–ಹಣ ಎಂತಲೂ ಕರೆಯುವರು ಏಕೆ?**

– ವಿದ್ಯುನ್ಮಾನ ಸಾಧನಗಳ ಮೂಲಕ ವ್ಯವಹಾರ ನಡೆಸುವುದರಿಂದ

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**2. ಬ್ಯಾಂಕುಗಳ ಮಹತ್ವವನ್ನು ವಿವರಿಸಿ.**

1. ಸಾರ್ವಜನಿಕರ ಉಳಿತಾಯ ಸಂಗ್ರಹಿಸಿ ಹೂಡಿಕೆದಾರರಿಗೆ ಒದಗಿಸುತ್ತವೆ. 2. ಬಂಡವಾಳ ಸಂಗ್ರಹಣೆ
3. ಗ್ರಾಹಕರಿಗೆ ಹಣ ಸಂದಾಯದ ಮಾರ್ಗಸೂಚಿ 4. ನಿರ್ದಿಷ್ಟ ಅವಧಿ ಠೇವಣಿಗಳಿಗೆ ಬಡ್ಡಿ ನೀಡುತ್ತವೆ

5. ಕೃಷಿಗೆ ಸಾಲ. 6. ಕೈಗಾರಿಕೆಗಳಿಗೆ ಸಾಲ. 7. ಸೇವಾ ವಲಯಗಳ ಅಭಿವೃದ್ಧಿಗೆ ಸಾಲ ನೀಡುತ್ತವೆ.
8. ಹುಂಡಿ ಗಳನ್ನು ವಟ್ಟಾಯಿಸುತ್ತವೆ 9. ಡ್ರಾಫ್ಟುಗಳು, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳನ್ನು ನೀಡುತ್ತವೆ.

**6. ಹಣದ ವಿಕಾಸದ ಹಂತಗಳನ್ನು ಪಟ್ಟಿಮಾಡಿ**

1. ವಸ್ತು ವಿನಿಮಯ ಪದ್ಧತಿ 2. ವಸ್ತು ರೂಪದ ಹಣ 3. ಲೋಹದ ಹಣ
4. ಕಾಗದದ ಹಣ 5. ಬ್ಯಾಂಕ್ ಹಣ 6. ಪ್ಲಾಸ್ಟಿಕ್ ಹಣ

**1. ಹಣದ ಕಾರ್ಯಗಳನ್ನು ವಿವರಿಸಿ.**

**ಪ್ರಾಥಮಿಕ ಅಥವಾ ಮುಖ್ಯ ಕಾರ್ಯಗಳು :** 1. ವಿನಿಮಯ ಮಾಧ್ಯಮ ಅಥವಾ ಸಂದಾಯ ಸಾಧನ 2.ಮೌಲ್ಯ ನಿರ್ಣಯ

**ಪೂರಕ ಕಾರ್ಯಗಳು :** 1. ವಿಳಂಬಿತ ಸಂದಾಯದ ಪ್ರಮಾಣ 2. ಮೌಲ್ಯ ಅಥವಾ ಖರೀದಿ ಶಕ್ತಿಯ ಸಂಗ್ರಹ
3. ಮೌಲ್ಯ ವರ್ಗಾವಣೆ ಅಥವಾ ಖರೀದಿ ಶಕ್ತಿಯ ವರ್ಗಾವಣೆ

**3. ಆರ್‌ಬಿಐನ ಕಾರ್ಯಗಳು ಯಾವುವು? ಅಥವಾ ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳಾವುವು?**

1. ನೋಟು ಚಲಾವಣೆಯ ಏಕಸ್ವಾಮ್ಯ 2.ಸರ್ಕಾರದ ಬ್ಯಾಂಕು3.ಬ್ಯಾಂಕುಗಳ ಬ್ಯಾಂಕು
4. ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯ. 5. ಸಾಲ ಪ್ರಮಾಣದ ನಿಯಂತ್ರಕ
6. ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ 7. ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ

**4. ಆರ್‌ಬಿಐ ಬಳಸುವ ಸಾಲ/ಪತ್ತು ನಿಯಂತ್ರಣ ಕ್ರಮಗಳನ್ನು ವಿವರಿಸಿ.**

**ಪರಿಮಾಣಾತ್ಮಕ ಸಾಲ ನಿಯಂತ್ರಣ ಕ್ರಮಗಳು:** 1.ಬ್ಯಾಂಕ್ ದರ 2. ಮುಕ್ತ ಮಾರುಕಟ್ಟೆ ಕಾರ್ಯಾಚರಣೆ
3. ಮೀಸಲು ಅನುಪಾತದ ಅವಶ್ಯಕತೆಯನ್ನು ಏರಿಳಿತಗೊಳಿಸುವುದು

**ಗುಣಾತ್ಮಕ ಸಾಲ ನಿಯಂತ್ರಣ ಕ್ರಮಗಳು:** 1. ಮಾರ್ಜಿನ್ ಪ್ರಮಾಣದ ಬದಲಾವಣೆ
2. ಸಾಲದ ಗರಿಷ್ಠ ಮಿತಿ ನಿಗದಿ ಅಥವಾ ಸಾಲದ ಪಡಿತರ 3. ನೈತಿಕ ಒತ್ತಡ 4. ನೇರ ಕ್ರಮ

**5. ಭಾರತದಲ್ಲಿ ಬಳಸಲಾಗುತ್ತಿರುವ ಹಣದ ಪೂರೈಕೆಯ ವಿವಿಧ ಪರಿಕಲ್ಪನೆಗಳನ್ನು ವಿವರಿಸಿ.**

1. M1 = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು
2. M2 = M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು
3. M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು
4. M4 = M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು

## ಅಧ್ಯಾಯ – 4. ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸರ್ಕಾರವು ಸಾರ್ವಜನಿಕ ಹಣಕಾಸನ್ನು ಯಾವ ನೀತಿಯ ಮೂಲಕ ನಿರ್ವಹಿಸುತ್ತದೆ. **– ಕೋಶೀಯ ನೀತಿ**
2. ಆಯ–ವ್ಯಯದಲ್ಲಿ ಸರ್ಕಾರದ ವರಮಾನ ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಏನೆಂದು ಕರೆಯುತ್ತಾರೆ? **–ಉಳಿತಾಯ ಆಯ–ವ್ಯಯ**
3. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ ಯಾರು ಮಂಡಿಸುತ್ತಾರೆ? **– ಕೇಂದ್ರ ಹಣಕಾಸು ಸಚಿವರು**
4. ಜಿಎಸ್‌ಟಿ ಯಾವ ದಿನಾಂಕದಿಂದ ಜಾರಿಗೆ ಬಂದಿದೆ? **– 1. ಜುಲೈ. 2017**

**5. ವೈಯಕ್ತಿಕ ಹಣಕಾಸು ಎಂದರೇನು?**

– ವ್ಯಕ್ತಿ ಅಥವಾ ಕುಟುಂಬದ ವರಮಾನ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿಕೊಡುವುದು

**6. ಸಾರ್ವಜನಿಕ ಹಣಕಾಸಿನ ಅರ್ಥ ತಿಳಿಸಿ.**

– ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತು ಅಧ್ಯಯನ ಮಾಡುವುದು

**7. ಕೋಶೀಯ ನೀತಿ ಅಥವಾ ವಿತ್ತೀಯ ನೀತಿ ಎಂದರೇನು?**

–ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸುವ ಉದ್ದೇಶದಿಂದ ಸರ್ಕಾರವು ತನ್ನ ವರಮಾನ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿ.

8. ಭಾರತದಲ್ಲಿಹಣಕಾಸು ವರ್ಷವು ಯಾವಾಗ ಆರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ?

**– ಈ ವರ್ಷದ ಏಪ್ರಿಲ್ 1 ರಿಂದ ಮುಂದಿನ ವರ್ಷದ ಮಾರ್ಚ್ 31**

**9. ಆಯವ್ಯಯ ಎಂದರೇನು? ಅಥವಾ ಮುಂಗಡ ಪತ್ರ ಎಂದರೇನು?**

– ಸರ್ಕಾರದ ಒಂದು ವರ್ಷದ ವರಮಾನ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ

**10. ಆಯ–ವ್ಯಯ ಪತ್ರದ ಮೂರು ವಿಧಗಳು ಯಾವುವು?**

1. ಉಳಿತಾಯ ಆಯ–ವ್ಯಯ (ವರಮಾನ ಹೆಚ್ಚು ವೆಚ್ಚ ಕಡಿಮೆ)
2. ಕೊರತೆಯ ಆಯ–ವ್ಯಯ (ವೆಚ್ಚ ಹೆಚ್ಚು ವರಮಾನ ಕಡಿಮೆ)
3. ಸಮತೋಲನ ಆಯ– ವ್ಯಯ (ವರಮಾನ ಮತ್ತು ವೆಚ್ಚಗಳು ಸಮವಾಗಿರುವುದು)

**11. ಸಾರ್ವಜನಿಕ ವೆಚ್ಚ ಎಂದರೇನು?**

– ಸರ್ಕಾರ ರಾಷ್ಟ್ರದ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಟಿಯಿಂದ ಮಾಡುವ ವೆಚ್ಚ.

**12. ಕಂದಾಯ ವರಮಾನ ಎಂದರೇನು?**–ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ವರಮಾನ

**13. ತೆರಿಗೆ ಎಂದರೇನು?** –ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ.

**14. ಪ್ರಗತಿಪರ ತೆರಿಗೆ ನೀತಿ ಎಂದರೇನು?**

– ಶ್ರೀಮಂತರು ಬಳಸುವ ಸರಕು–ಸೇವೆಗಳ ಮೇಲೆ ಹೆಚ್ಚಿನ ತೆರಿಗೆಯನ್ನೂ ಮತ್ತು ಸಾಮಾನ್ಯ ಜನರು ಬಳಸುವ ಸರಕು–ಸೇವೆಗಳ ಮೇಲೆ ಕಡಿಮೆ ತೆರಿಗೆಯನ್ನು ಸರ್ಕಾರ ವಿಧಿಸುತ್ತಿದೆ. ಸರ್ಕಾರ ತೆರಿಗೆ ವಿಧಿಸುವಲ್ಲಿ ಅನುಸರಿಸುವ ಈ ನೀತಿ.

**17. ಹೂಡಿಕೆ ಹಿಂತೆಗೆತ ಎಂದರೇನು?**

– ಸರ್ಕಾರವು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುವುದು.

**18. ವಿತ್ತೀಯ ಕೊರತೆ ಎಂದರೇನು?**

– ಆಯವ್ಯಯದಲ್ಲಿ ಸರ್ಕಾರದ ಕಂದಾಯ ವರಮಾನ ಮತ್ತು ಸಾಲೇತರ ಬಂಡವಾಳ ವರಮಾನಗಳಿಗಿಂತ ಸರ್ಕಾರದ ಒಟ್ಟು ವೆಚ್ಚಹೆಚ್ಚಾಗಿರುವುದು.

**19. ವಿತ್ತೀಯ ಕೊರತೆಯ ಸೂತ್ರ ಬರೆಯಿರಿ.**

ವಿತ್ತೀಯ ಕೊರತೆ = (ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ) – ಒಟ್ಟು ವೆಚ್ಚ

**20. ರೆವೆನ್ಯೂ ಕೊರತೆಯ ಸೂತ್ರ ಬರೆಯಿರಿ**

ರೆವೆನ್ಯೂ ಕೊರತೆ = ರೆವೆನ್ಯೂ ಖಾತೆಯ ವರಮಾನ– ರೆವೆನ್ಯೂ ಖಾತೆಯ ವೆಚ್ಚ

**21. ಪ್ರಾಥಮಿಕ ಕೊರತೆಯ ಸೂತ್ರ ಬರೆಯಿರಿ.** – ಪ್ರಾಥಮಿಕ ಕೊರತೆ = ವಿತ್ತೀಯ ಕೊರತೆ – ಬಡ್ಡಿಪಾವತಿ

**22. ಮುಂಗಡಪತ್ರ ಅಥವಾ ಆಯ–ವ್ಯಯದ ಕೊರತೆಯ ಸೂತ್ರ ಬರೆಯಿರಿ**

– ಮುಂಗಡಪತ್ರ ಅಥವಾ ಆಯ–ವ್ಯಯ ಕೊರತೆ = ಒಟ್ಟು ವರಮಾನ – ಒಟ್ಟು ವೆಚ್ಚ

23. ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆ ಯಾವಾಗ ಜಾರಿಗೆ ಬಂತು? **– 2003**

**26. ಕೊರತೆ ಹಣಕಾಸು ಎಂದರೇನು?** – ಸರ್ಕಾರವು ತನ್ನ ವರಮಾನಕ್ಕಿಂತ ಹೆಚ್ಚು ವೆಚ್ಚ ಮಾಡುವುದು.

**II. ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.**

**1. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ**

1. ಸರ್ಕಾರ ಕೋಶಿಯ ನೀತಿ ರಚಿಸಲು ಸಹಕಾರಿ 2. ಆರ್ಥಿಕ ಬೆಳವಣಿಗೆಗೆ ಸಹಕಾರಿ
3. ಆರ್ಥಿಕ ಸ್ಥಿರತೆಗೆ ಸಹಕಾರಿ 4. ವರಮಾನದ ಸಮಾನ ಹಂಚಿಕೆಗೆ
5. ಆಯ–ವ್ಯಯ ವಿಶ್ಲೇಷಣೆಗೆ ಸಹಕಾರಿ 6. ಬಡತನ ನಿರುದ್ಯೋಗ ನಿರ್ಮೂಲನೆ 7. ಬೆಲೆಗಳಲ್ಲಿನ ಸ್ಥಿರತೆಗೆ

**2. ಸಾರ್ವಜನಿಕ ವೆಚ್ಚದ ಪ್ರಮುಖ ಉದ್ದೇಶಗಳು ಯಾವುವು?**

1. ಆರ್ಥಿಕ ಬೆಳವಣಿಗೆಯನ್ನು ತೀವ್ರಗೊಳಿಸುವುದು 2. ವ್ಯವಹಾರ ಮತ್ತು ವಾಣಿಜ್ಯಗಳಿಗೆ ನೆರವು.
3. ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಪ್ರೋತ್ಸಾಹ. 4. ಸಮಾನ ಪ್ರಾದೇಶಿಕ ಬೆಳವಣಿಗೆಗೆ ಪ್ರೋತ್ಸಾಹ
5. ಸಾಮಾಜಿಕ–ಆರ್ಥಿಕ ಸೌಲಭ್ಯ ನೀಡಲು. 6. ಸಂಪೂರ್ಣ ಉದ್ಯೋಗ ಸಾಧಿಸುವುದು 7. ಸಾಮಾಜಿಕ ಕಲ್ಯಾಣಕ್ಕೆ

**3. ಸಾರ್ವಜನಿಕ ವೆಚ್ಚದ ಏರಿಕೆಗೆ ಕಾರಣಗಳನ್ನು ವಿವರಿಸಿ.**

1. ಇಪ್ಪತ್ತನೆಯ ಶತಮಾನದಲ್ಲಿ ಸರ್ಕಾರದ ಪಾತ್ರಗಳ ಹೆಚ್ಚಾಗಿದೆ. 2. ಆರ್ಥಿಕ ಅಭಿವೃದ್ಧಿ ಪೋಷಿಸುವ ಸೌಕರ್ಯಗಳ ಸೃಷ್ಟಿ
3. ಬಂಡವಾಳ ಹೂಡಿಕೆಗೆ ಸೂಕ್ತ ವಾತಾವರಣ ಒದಗಿಸುವುದು. 4.ಉಳಿತಾಯ, ಹೂಡಿಕೆ ಮತ್ತು ಆವಿಷ್ಕಾರಗಳಿಗೆ ಉತ್ತೇಜನ
5. ಆರ್ಥಿಕ ಸ್ಥಿರತೆ ಕಾಪಾಡಲು. 6. ಕೃಷಿ, ಗ್ರಾಮೀಣ ಅಭಿವೃದ್ಧಿ. 7. ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳ ಅಭಿವೃದ್ಧಿ.

**4. ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ ಮೂಲಗಳನ್ನು ತಿಳಿಸಿ.**

1. ಭಾರತೀಯ ರಿಜರ್ವ್ ಬ್ಯಾಂಕು ಗಳಿಸುವ ಲಾಭ 2. ಭಾರತೀಯ ರೈಲ್ವೆ ಗಳಿಸುವ ಲಾಭ
3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ 4. ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ
5. ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ 6. ವಿವಿಧ ರೀತಿಯ ಶುಲ್ಕಗಳು, ದಂಡಗಳು

5. **ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆಗಳಿಗಿರುವ ವ್ಯತ್ಯಾಸ ತಿಳಿಸಿ.**

| **ಪ್ರತ್ಯಕ್ಷ ತೆರಿಗೆಗಳು** | **ಪರೋಕ್ಷ ತೆರಿಗೆಗಳು** |
|---|---|
| 1.ಸರ್ಕಾರ ಯಾರ ಮೇಲೆ ತೆರಿಗೆ ವಿಧಿಸುತ್ತದೆಯೋ ಅವರೇ ಆ ತೆರಿಗೆ ಪಾವತಿಸುವುದು | 1. ಸರ್ಕಾರ ವಿಧಿಸುವ ತೆರಿಗೆಯನ್ನು ಇತರರ ಮೇಲೆ ವರ್ಗಾಯಿಸಲು ಸಾಧ್ಯವಿರುವಂತಹ ತೆರಿಗೆ. |
| 2. ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ, ಸ್ಟಾಂಪ್ ಶುಲ್ಕ | 2. ಕೇಂದ್ರ ಅಬಕಾರಿ ತೆರಿಗೆ, ಮೌಲ್ಯವರ್ಧಿತ ತೆರಿಗೆ, ಆಮದು ರಫ್ತು ಸುಂಕಗಳು, ಸೇವಾ ತೆರಿಗೆ |

**6. ಭಾರತ ಸರ್ಕಾರವು 2003ರಲ್ಲಿ ಜಾರಿಗೆ ತಂದ ಕೋಶೀಯ ಹೊಣೆಗಾರಿಕೆ ಮತ್ತು ಮುಂಗಡಪತ್ರ ನಿರ್ವಹಣೆ ಕಾಯ್ದೆಯ ಗುರಿಗಳಾವುವು?**
1. ಹಣಕಾಸಿನ ಶಿಸ್ತು ಪಾಲಿಸುವುದು, 2. ಕೊರತೆಯನ್ನು ಕಮ್ಮಿ ಮಾಡುವುದು, 3. ಆರ್ಥಿಕ ನಿರ್ವಹಣೆ ಉತ್ತಮಪಡಿಸುವುದು, 4.ಸಾರ್ವಜನಿಕ ನಿಧಿಗಳ ಸೂಕ್ತ ನಿರ್ವಹಣೆ 5.ಮುಂಗಡಪತ್ರದಲ್ಲಿ ಸಮತೋಲನ ಸಾಧಿಸುವುದು 6.ಹಣದುಬ್ಬರದ ನಿಯಂತ್ರಣ

## ವ್ಯವಹಾರ ಅಧ್ಯಯನ

## ಅಧ್ಯಾಯ – 1. ಬ್ಯಾಂಕು ವ್ಯವಹಾರಗಳು

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಬ್ಯಾಂಕ್ ಎಂಬ ಪದವು ಯಾವ ಯಾವ ಭಾಷೆಯ ಪದಗಳಿಂದ ಬಂದಿದೆ? – ಪ್ರೆಂಚ್‌ನ **ಬ್ಯಾಂಕ್, ಇಟಾಲಿಯನ್‌ನ ಬ್ಯಾಂಕೋ.**
2. ಬ್ಯಾಂಕುಗಳ ಬ್ಯಾಂಕ್ ಯಾವುದು? ಭಾರತದ ಕೇಂದ್ರ ಬ್ಯಾಂಕ್ ಯಾವುದು? ಬ್ಯಾಂಕುಗಳ ತಾಯಿ ಎಂದು ಕರೆಯುವ ಬ್ಯಾಂಕ್ **– ರಿಜರ್ವ ಬ್ಯಾಂಕ್.**
3. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಯಾವ ಇಲಾಖೆಯು ನೀಡುತ್ತದೆ? – **ಭಾರತೀಯ ಅಂಚೆ ಇಲಾಖೆ**
4. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ ಯಾವುದು ? **– ಚಾಲ್ತಿ** ಖಾತೆ.
5. ಠೇವಣಿಯನ್ನು ನಿಗಧಿತ ಅವಧಿಗೆ ಯಾವ ಖಾತೆಯಲ್ಲಿ ಇಡಬಹುದಾಗಿದೆ? **– ನಿಶ್ಚಿತ ಠೇವಣಿ**
6. ಜನರು ಹಣ ಉಳಿತಾಯ ಮಾಡಲು ಯಾವ ಖಾತೆಯನ್ನು ತೆರೆಯುತ್ತಾರೆ? **– ಉಳಿತಾಯ ಖಾತೆ**
7. ಬ್ಯಾಂಕುಗಳು ಯಾವ ಖಾತೆಯ ಠೇವಣಿಗಳಿಗೆ ಬಡ್ಡಿ ಕೊಡುವುದಿಲ್ಲ? **– ಚಾಲ್ತಿ** ಖಾತೆ.
8. ಬ್ಯಾಂಕಿನಲ್ಲಿ ಹಣ ಪಾವತಿ ಮಾಡುವ ನಮೂನೆಗೆ ಏನೆಂದು ಕರೆಯುವರು? **– ಚಲನ್**

**9. ಬ್ಯಾಂಕು ಎಂದರೇನು?**
– ಗ್ರಾಹಕರಿಂದ ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲದ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುವ ಸಂಸ್ಥೆ.

**10. ಬ್ಯಾಂಕಿಂಗ್ ಎಂದರೇನು?** – ಬ್ಯಾಂಕಿನಲ್ಲಿನ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

**11. ಬ್ಯಾಂಕು ವ್ಯವಹಾರ ಎಂದರೇನು?** –ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳು

**12. ಬ್ಯಾಂಕ್ ಸಾಲ ಎಂದರೇನು?**
– ಗ್ರಾಹಕರ ಹಣವನ್ನು ಠೇವಣಿಗಳಾಗಿ ಇಟ್ಟುಕೊಳ್ಳುತ್ತವೆ. ಈ ಠೇವಣಿಗಳಿಂದ ಸಂಗ್ರಹವಾದ ಹಣವನ್ನು ಗ್ರಾಹಕರಿಗೆ ಸಾಲವಾಗಿ ಕೊಡುತ್ತವೆ. ಈ ಸಾಲಗಳನ್ನು ಬ್ಯಾಂಕ್ ಸಾಲ ಎನ್ನುತ್ತೇವೆ.

**13. ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಯಾವುದು?**
– ಅಂಚೆ ಕಚೇರಿಗಳನ್ನು ಬ್ಯಾಂಕು ವ್ಯವಹಾರಗಳ ಅಂಕಿತದೊಳಕ್ಕೆ ತಂದಿರುವುದು

14. ಸಾಮಾನ್ಯವಾಗಿ ವೇತನ ಪಡೆಯುವವರು ಅಥವ ಒಂದು ನಿಯಮಿತ ಆದಾಯ ಹೊಂದಿರುವ ಜನರಿಗೆ ಸೂಕ್ತವಾದ ಖಾತೆ ಯಾವುದು? **–ಉಳಿತಾಯ ಖಾತೆ**
15. ಯಾವ ಖಾತೆಯಲ್ಲಿ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ? **– ಉಳಿತಾಯ ಖಾತೆ**
16. ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರಿಗೆ ಸೂಕ್ತವಾದ ಖಾತೆ ಯಾವುದು? **– ಚಾಲ್ತಿ ಖಾತೆ**
17. ಯಾವ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ. ಆದರೆ ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತವೆ? **– ಚಾಲ್ತಿ ಖಾತೆ**
18. ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಕೊಳ್ಳಲು ಹಣ ಉಳಿಸಲು ಸೂಕ್ತವಾದ ಖಾತೆ ಯಾವುದು? **– ಆವರ್ತ ಠೇವಣಿ ಖಾತೆ**
19. ಯಾವ ಖಾತೆಯಲ್ಲಿ ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ? **–ನಿಶ್ಚಿತ ಠೇವಣಿ ಖಾತೆ**

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಭಾರತೀಯ ರಿಜರ್ವ್ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯಲು ಕಾರಣಗಳೇನು?**
– ಭಾರತದಲ್ಲಿ ಬ್ಯಾಂಕುಗಳ ಎಲ್ಲಾ ಚಟುವಟಿಕೆಗಳು ರಿಜರ್ವ ಬ್ಯಾಂಕಿನ ಹತೋಟಿಯಲ್ಲಿರುತ್ತವೆ. ಇದು ದೇಶದ ಕೇಂದ್ರ ಬ್ಯಾಂಕಾಗಿದ್ದು ಇದು ರೂಪಿಸುವ ಹಣಕಾಸಿನ ನೀತಿಯನ್ನು ಎಲ್ಲಾ ಬ್ಯಾಂಕುಗಳು ಪಾಲಿಸಬೇಕಾಗುತ್ತದೆ.

**3. ಬ್ಯಾಂಕ್ & ಗ್ರಾಹಕರ ಸಂಬಂಧವನ್ನು ತಿಳಿಸಿ.**

**1. ಸಾಮಾನ್ಯ ಸಂಬಂಧ** –1. ಸಾಲಿಗ & ಸಾಲಗಾರನ ಸಂಬಂಧ, 2. ಸಹಾಯಕ ಅಥವಾ ಉಪಕಾರ ಸಂಬಂಧ, 3. ಕಾರುಬಾರಿ ಅಥವಾ ನಿಯೋಗಿ & ಮುಖ್ಯಸ್ಥನ ಸಂಬಂಧ.

**2. ವಿಶೇಷ ಸಂಬಂಧ** –1. ಚೆಕ್ಕುಗಳನ್ನು ಮನ್ನಣೆ ಮಾಡುವುದು. 2. ಗ್ರಾಹಕರ ಲೆಕ್ಕಗಳ ಗೋಪ್ಯತೆ ಕಾಪಾಡುವುದು.

**4. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.**
– ಜನರು ಹಣ ಉಳಿತಾಯ ಮಾಡಲು ಸಹಾಯ. ವೇತನ ಪಡೆಯುವವರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು & ಪಿಂಚಣಿದಾರರು ಈ ಖಾತೆ ತೆರೆಯುತ್ತಾರೆ. ಸರ್ಕಾರದ ಎಲ್ಲಾ ರಿಯಾಯತಿ, ಧನಸಹಾಯ & ವಿದ್ಯಾರ್ಥಿ ವೇತನ ನೇರವಾಗಿ ಖಾತೆಗೆ ಹಾಕುತ್ತಿರುವುದು.

**5. ಭಾರತೀಯ ಅಂಚೆ ಕಛೇರಿಯು ಯಾವ ರೀತಿ ಬ್ಯಾಂಕಿಂಗ್ ವ್ಯವಹಾರ ಮಾಡುತ್ತದೆ? ಅಥವಾ ಅಂಚೆ ಕಛೇರಿಗಳು ಅನೇಕ ಹಣಕಾಸಿನ ವ್ಯವಹಾರಗಳನ್ನೂ ಸಹ ಕೈಗೊಳ್ಳುತ್ತಿವೆ. ಸಮರ್ಥಿಸಿ.**

* ರಾಷ್ಟ್ರೀಯ ಉಳಿತಾಯ ಪತ್ರಗಳು * ಅಂಚೆ ಉಳಿತಾಯ ಖಾತೆಗಳು, * ಕಿಸಾನ ವಿಕಾಸ ಪತ್ರಗಳು,
* ಮಾಹೆಯಾನ ತೀರು ಠೇವಣಿಗಳು, * ಅಂಚೆ ವಿಮೆ, * ನಿವೃತ್ತಿ ವೇತನ * ಹಣವನ್ನು ವರ್ಗಾಯಿಸುವುದು.

**6. ಬ್ಯಾಂಕಿನ ಗುಣಲಕ್ಷಣಗಳನ್ನು ಪಟ್ಟಿಮಾಡಿ.**

1. ಹಣದ ವಹಿವಾಟನ್ನು ಮಾಡುತ್ತವೆ. 2. ಬ್ಯಾಂಕ್ ಒಬ್ಬ ವ್ಯಕ್ತಿ, ಒಂದು ಸಂಸ್ಥೆ, ಒಂದು ಕಂಪನಿ.
3. ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತವೆ. 4. ಪಾವತಿ ಮತ್ತು ಹಿಂದಕ್ಕೆ ಮಡೆಯುವುದು.
5. ಸಾಲಗಳನ್ನು ಕೊಡುವುದು. 6. ಲಾಭ ಮತ್ತು ಸೇವಾಮನೋಬಾವನೆ ಹೊಂದಿದೆ. 7. ಹೆಸರಿನ ಗುರುತು.
8. ಏಜೆಂಟ್ ಮತ್ತು ಉಪಯುಕ್ತ ಸೇವೆ. 9. ಬ್ಯಾಂಕಿಂಗ್ ವ್ಯವಹಾರ 10. ಸಂಬಂಧ ಕಲ್ಪಿಸುವ ಕೊಂಡಿ,

**7. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವವು?**

1. ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು. 2. ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲ
3. ಹಣದ ವರ್ಗಾವಣೆ 4. ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲು
5. ಸಾಲಪತ್ರಗಳನ್ನು & ಜವಬ್ದಾರಿ ಪತ್ರಗಳನ್ನು ಕೊಡುವುದು. 6. ಭದ್ರತಾ ಕಪಾಟುಗಳ ಬಾಡಿಗೆ
7. ವಿದೇಶಿ ವಿನಿಮಯ ವ್ಯವಹಾರ 8. ಹಣಕಾಸಿನ ವ್ಯವಹಾರ

**8. ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳಾವವು? ಅಥವಾ ಬ್ಯಾಂಕ್ ಖಾತೆ ಅನುಕೂಲಕರವಾದದ್ದು ಹೇಗೆ?**

1. ಹಣದ ಭದ್ರತೆ ಕಾಪಾಡುತ್ತದೆ. 2. ಹಣದ ಪಾವತಿಗಳನ್ನು ಮಾಡಲು ಸಹಾಯ
3. ಸಾಲ ಪಡೆಯಲು ಸಹಾಯ 4. ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ
5. ಭದ್ರತಾ ಕಪಾಟುಗಳನ್ನು ಪಡೆಯಬಹುದು. 6. ಹಣ ವಸೂಲಿಗೆ ಸಹಾಯ

**9. ಬ್ಯಾಂಕುಗಳ ಪ್ರಮುಖ ವಿಧಗಳಾವವು?**

1. ಕೇಂದ್ರ ಬ್ಯಾಂಕು ಅಥವಾ ಭಾರತೀಯ ರಿಜರ್ವ ಬ್ಯಾಂಕು 2. ವಾಣಿಜ್ಯ ಬ್ಯಾಂಕುಗಳು
3. ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು 4. ಭೂ–ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
5. ಸ್ಥಳೀಯ ಬ್ಯಾಂಕುಗಳು 6. ಸಹಕಾರಿ ಬ್ಯಾಂಕುಗಳು

**10. ಬ್ಯಾಂಕು ಸಲ್ಲಿಸುವ ಸೇವೆಗಳಾವವು?**

1. ಖರ್ಚು ಮತ್ತು ಜಮಾ ಕಾರ್ಡು ಕೊಡುತ್ತದೆ 2. ಖಾಸಗಿ ಸಾಲ ಕೊಡುತ್ತದೆ 3. ಇ–ಬ್ಯಾಂಕಿಂಗ್ ಸೇವೆಗಳು.
4. ಪರಸ್ಪರ ನಿಧಿಗಳನ್ನು ನಿರ್ವಹಿಸುವುದು. 5. ಮನೆ ಕಟ್ಟಲು/ ವಾಹನ ಖರೀದಿಸಲು ಸಾಲ.
6. ಭದ್ರತಾ ಕಪಾಟುಗಳನ್ನು ಕೊಡುತ್ತದೆ 7. ಭರವಸೆ ಸೇವೆ 8. ಸಹಿಗಳಿಗೆ ಜವಾಬ್ದಾರಿ ಹಾಕುವುದು

**11. ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಹಂತಗಳನ್ನು ತಿಳಿಸಿ.**

1. ಯಾವ ವಿಧದ ಬ್ಯಾಂಕ್ ಖಾತೆ ತೆರೆಯಬೇಕೆಂದು ನಿರ್ಧರಿಸುವುದು. 2. ಅನುಕೂಲವಾದ ಬ್ಯಾಂಕಿನ ಅಧಿಕಾರಿ ಸಂಪರ್ಕ.
3. ಅರ್ಜಿ ಪ್ರಸ್ತಾವನೆ ಮತ್ತು ಖಾತೆ ತೆರೆಯುವ ಲೆಕ್ಕದ ನಮೂನೆ ತುಂಬುವುದು
4. ಪರಿಚಿತರ ಉಲ್ಲೇಖ ಕೊಡುವುದು. 5. ಬ್ಯಾಂಕ್ ಖಾತೆ ತೆಗೆಯುವ ನಮೂನೆ ಬ್ಯಾಂಕಿಗೆ ಕೊಡುವುದು
6. ಅಧಿಕಾರಿಯ ಒಪ್ಪಿಗೆ ಪಡೆಯುವುದು 7. ಪ್ರಾರಂಭಿಕ ಠೇವಣಿ ಕಟ್ಟುವುದು.

**12. ವಿವಿಧ ಖಾತೆಗಳ ಲಕ್ಷಣಗಳನ್ನು ತಿಳಿಸಿ. ಅಥವಾ ವಿವಿಧ ಖಾತೆಗಳ ನಡುವಿನ ವ್ಯತ್ಯಾಸಗಳು**

| **ಉಳಿತಾಯ ಖಾತೆ** | **ಚಾಲ್ತಿ ಖಾತೆ** |
|---|---|
| 1 ವೇತನ ಪಡೆಯುವವರು ನಿಯಮಿತ ಆದಾಯ ಹೊಂದಿರುವವರು ತೆರೆಯುವ ಖಾತೆ<br>2 ಹಣ ಉಳಿತಾಯಕ್ಕೆ ಸಹಾಯ<br>3 ಚೆಕ್ಕು ಪುಸ್ತಕ/ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಹಣ ಹಿಂಪಡೆಯಬಹುದು<br>4 ಬಡ್ಡಿಯನ್ನು ನೀಡಲಾಗುತ್ತದೆ | 1 **ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಗಳು** ತೆರೆಯುವ ಖಾತೆ<br>2 ದಿನಕ್ಕೆ ಎಷ್ಟು ಬಾರಿ ಯಾರದರೂ ವ್ಯವಹರಿಸಬಹುದು<br>3. ಬಡ್ಡಿಯನ್ನು ನೀಡುವುದಿಲ್ಲ.<br>4. ಖಾತೆದಾರರಿಂದ ಬ್ಯಾಂಕ್ ಸೇವಾ ಶುಲ್ಕವನ್ನು ವಸೂಲಿ |
| **ಆವರ್ತ ಠೇವಣಿ ಖಾತೆ** | **ನಿಶ್ಚಿತ ಠೇವಣಿ ಖಾತೆ** |
| 1. ಮದುವೆ, ಗೃಹ ನಿರ್ಮಾಣ, ಆಸ್ತಿ ಖರೀದಿ, ಭವಿಷ್ಯಕ್ಕೆ ಹಣ ಉಳಿಸಲು ತೆರೆಯುವ ಖಾತೆ<br>2. ಒಂದು ನಿರ್ದಿಷ್ಟ ಅವಧಿಯವರೆಗೆ ಪ್ರತಿ ತಿಂಗಳು ಹಣವನ್ನು ಜಮಾ ಮಾಡುತ್ತಾ ಹೋಗುತ್ತಾನೆ.<br>3. ಅವಧಿ ಮುಗಿದ ನಂತರ ಹಣಕ್ಕೆ ಬಡ್ಡಿ ನೀಡುತ್ತಾರೆ. | 1. ಒಂದು ನಿಶ್ಚಿತ ಅವಧಿಗೆ ಠೇವಣಿಗಳನ್ನು ಇಡಲಾಗುತ್ತದೆ.<br>2. ಠೇವಣಿಗೆ ಅಧಿಕ ಬಡ್ಡಿಯನ್ನು ಬ್ಯಾಂಕ್ ನೀಡುತ್ತದೆ.<br>3. ಒಂದು ತಿಂಗಳಿಂದ ಹತ್ತು ವರ್ಷಗಳ ಅವಧಿಯವರೆಗೆ ಠೇವಣಿ ಇಡಬಹುದಾಗಿದೆ |

# ಅಧ್ಯಾಯ – 2. ಉದ್ಯಮಗಾರಿಕೆ

**I. ಬಿಟ್ಟ ಸ್ಥಳಗಳನ್ನು ಸೂಕ್ತ ಸ್ಥಳಗಳಿಂದ ತುಂಬಿರಿ.**

1. **ಉದ್ಯಮಿ** ಎಂಬ ಪದವು ಫ್ರೆಂಚ್ ಭಾಷೆಯ ಯಾವ ಪದದಿಂದ ಬಂದಿದೆ? **– ಎಂಟ್ರ ಪ್ರೆಂಡೆ**

2. **ಉದ್ಯಮಗಾರಿಕೆ ಎಂದರೇನು**? – ಉದ್ಯಮಿಯು ಉದ್ದಿಮೆ ಸ್ಥಾಪಿಸಲು ಕೈಗೊಳ್ಳುವ ಪ್ರಕ್ರಿಯೆ.

3. **NASDAQ** ನಲ್ಲಿ ನೊಂದಾಯಿಸಿಕೊಂಡ ಭಾರತದ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ ಯಾವುದು? **– ಇನ್ಫೋಸಿಸ್.**

4. **ವರ್ಗೀಸ್ ಕುರಿಯನ್**ರವರು **ಆನಂದ್** ಹೈನುಗಾರಿಕೆಯನ್ನು ಎಲ್ಲಿ ಆರಂಭಿಸಿದರು? **– ಗುಜರಾತ್ ರಾಜ್ಯದ ಕೈರಾ ಜಿಲ್ಲೆಯಲ್ಲಿ**

5. **ಮೌಂಟ್‌ಗಿರ್‌ನಾರ್**ನಲ್ಲಿ ವಾರಾಂತ್ಯದಲ್ಲಿ ಭಜನೆಗಳ ಪುಸ್ತಕಗಳನ್ನು ಮಾರುತ್ತಿದ್ದ ಉದ್ಯಮಿ ಯಾರು? **– ಧೀರೂಬಾಯಿ ಅಂಬಾನಿ**

**6. ಉದ್ಯಮಿ ಎಂದರೇನು**?

– ಹೊಸ ಕಲ್ಪನೆ ಮತ್ತು ಆಡಳಿತ ನಿರ್ವಹಣೆಯ ಕೌಶಲ್ಯದಿಂದ ಉದ್ಯಮವನ್ನು ಯಶಸ್ವಿಯಾಗಿ ನಡೆಸುವವನು.

7. ಬಿಳಿಕ್ರಾಂತಿಯ ಪಿತಾಮಹ ಯಾರು? **ಅಥವಾ** ಅಮುಲ್ ಹಾಲು & ಹಾಲಿನ ಉತ್ಪನ್ನಗಳ ತಯಾರಕರು ಯಾರು?
**ಅಥವಾ** ಭಾರತದಲ್ಲೇ ಅತ್ಯಂತ ದೊಡ್ಡ ಹೈನುಗಾರಿಕೆ ಅಭಿವೃದ್ಧಿಪಡಿಸಿದವರು ಯಾರು? **– ವರ್ಗೀಸ್ ಕುರಿಯನ್.**

8. ಆರ್ಥಿಕತೆಯ **"**ಅಗ್ನಿಬಿರಟೆ**"** (ಸ್ಪಾರ್ಕ್ ಪ್ಲಗ್)ಎಂದು ಯಾರನ್ನು ಕರೆಯುತ್ತಾರೆ? **– ಉದ್ಯಮಿಗಳು**

9. ಭಾರತದಲ್ಲಿ ಜೀವ ವಿಜ್ಞಾನ ತಂತ್ರಜ್ಞಾನದ ಅತೀ ದೊಡ್ಡ ಸಂಸ್ಥೆ ಯಾವುದು. **– ಬಯೋಕಾನ್** ನಿಗಮ.

**10.** ಭಾರತದಲ್ಲಿ ಅತ್ಯಂತ ದೊಡ್ಡ ಸಾಫ್ಟ್ ವೇರ್ ಸಂಸ್ಥೆ ಯಾವುದು? **– ವಿಪ್ರೋ**

11. ಸಂಶೋಧನೆ ಮತ್ತು ಅಭಿವೃದ್ಧಿ ಸೇವೆಯಲ್ಲಿ ಅತ್ಯಂತ ದೊಡ್ಡ ಸ್ವಾಯತ್ತ ಸಂಸ್ಥೆ ಯಾವುದು? **– ವಿಪ್ರೋ** ತಂತ್ರಜ್ಞಾನ ಸಂಸ್ಥೆ

**II. ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಉದ್ಯಮಗಾರಿಕೆಯು ಸಾಹಸ ಕಾರ್ಯವಾಗಿದೆ. ಹೇಗೆ?** ಅಥವಾ **ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ. ಏಕೆ?**

1. ಹೊಸದನ್ನು ಸೃಜಿಸುವ ಚಟುವಟಿಕೆಯಾಗಿದೆ. 2. ಹೊಸ ವಸ್ತುಗಳು ಮತ್ತು ಸೇವೆಗಳನ್ನು ಉತ್ಪಾದಿಸುತ್ತಾರೆ.
3. ಕಷ್ಟಸಾಧ್ಯವಾದ ಗೊಂದಲಮಯ ಅವಕಾಶವನ್ನು ಗುರ್ತಿಸಿ ಅದನ್ನು ಕಾರ್ಯರೂಪಕ್ಕೆ ತರುವುದಾಗಿದೆ.
4. ಅವಕಾಶಗಳನ್ನು ಹುಡುಕಿ ಲಾಭಪಡೆಯಲು ಕಾರ್ಯ ಸ್ಥಾಪಿಸುತ್ತದೆ.
5. ಹೊಸ ತಾಂತ್ರಿಕತೆಯನ್ನು ಬಳಸುತ್ತಾರೆ. 6. ಏನೂ ಇಲ್ಲದುದನ್ನು ಏನಾದರೊಂದಾಗಿ ಸೃಜಿಸುವ ಸಾಮರ್ಥ್ಯವಾಗಿದೆ.

**2. ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು**?

1. ಸೃಜನಾತ್ಮಕ, 2. ಕ್ರಿಯಾತ್ಮಕ, 3. ಗುಂಪು ಕಟ್ಟುವದು, 4. ಸಮಸ್ಯೆಯ ಪರಿಹಾರ,
5. ನಷ್ಟಭರಿತಕ್ಕೆ ಸಿದ್ಧ, 6. ವಚನಬದ್ಧತೆ, 7. ಹೊಸ ಪದ್ಧತಿಯನ್ನು ರೂಢಿಗೆ ತರುವುದು, 8. ನಾಯಕತ್ವ,
9. ಪ್ರಚೋದನೆಯ ಸಾಧನೆ, 10. ಗುರಿಮುಟ್ಟುವಿಕೆ, 11. ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.

**3. ಉದ್ದಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವೇನು**?

1. ಜನರ ಉಳಿತಾಯಗಳನ್ನು ಬಂಡವಾಳ ರೂಪದಲ್ಲಿ ಸಂಗ್ರಹಿಸಿ ಬಳಕೆ. 2. ಉದ್ಯೋಗ ಒದಗಿಸುತ್ತಾರೆ.
3. ದೇಶದ ನಿವ್ವಳ ದೇಶಿಯ ಉತ್ಪನ್ನ ಹೆಚ್ಚಳ. 4. ಜನರ ತಲಾವರಮಾನ ಹೆಚ್ಚಿಸುತ್ತಾರೆ.
4. ಜನರ ಜೀವನಮಟ್ಟವನ್ನು ಉತ್ತಮಗೊಳ್ಳುತ್ತದೆ. 5. ಕೈಗಾರಿಕೆಗಳ ಅಭಿವೃದ್ಧಿ
6. ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ. 7. ಮಾರುಕಟ್ಟೆಗಳ ಅಭಿವೃದ್ಧಿ 8. ಸಮಾಜದ ಏಳಿಗೆಗೆ ಸಹಾಯ

**4. ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು ಯಾವುವು**?

1 . ಜಿಲ್ಲಾ ಕೈಗಾರಿಕೆ ಕೇಂದ್ರಗಳು 2. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
3. ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ 4. ಸಣ್ಣ ಪ್ರಮಾಣದ ಕೈಗಾರಿಕೆ ಸಂಸ್ಥೆ
5. ಖಾದಿ & ಗ್ರಾಮೋದ್ಯೋಗ ಮಂಡಳಿ 6. ತಾಂತ್ರಿಕ ಸಲಹಾ ಸಂಸ್ಥೆಗಳು 7. ಕೈಗಾರಿಕಾ ಪ್ರದೇಶಗಳು

**5. ಉದ್ಯಮಿಯ ಕಾರ್ಯಗಳು ಯಾವುವು**?

1. ಅನೇಕ ಯೋಜನೆಗಳ ಮೂಲಕ ವ್ಯಾಪಾರ ಚಟುವಟಿಕೆ ಪ್ರಾರಂಭ. 2. ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
3. ಉತ್ಪಾದಿಸಿದ ವಸ್ತು, ತಾಂತ್ರಿಕತೆ, ಮಾರುಕಟ್ಟೆ ಬಗ್ಗೆ ನಿರ್ಧಾರ. 4. ಉದ್ಯಮದ ಆಯ–ವ್ಯಯ ನಿಭಾಯಿಸುತ್ತಾನೆ.
5. ಉತ್ಪಾದನಾಂಗಗಳನ್ನು ಒಟ್ಟುಗೂಡಿಸುತ್ತಾರೆ. 6. ಕಷ್ಟ ನಷ್ಟ & ಅನಿಶ್ಚಿತತೆಗಳನ್ನು ಎದುರಿಸುತ್ತಾನೆ.
7. ವ್ಯಾಪಾರವು ಸರಿಯಾಗಿ ನಡೆಯುವಂತೆ ಮಾರ್ಗದರ್ಶನ.

**6. ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದುಕೊಳ್ಳಬಹುದಾದ ಸಂಸ್ಥೆಗಳು ಯಾವುವು**?

1. ಜಾಹಿರಾತು ಸೇವಾ ಸಂಸ್ಥೆಗಳು, 2. ಮಾರುಕಟ್ಟೆ ಸಲಹಾ ಸಂಸ್ಥೆ,
3. ಕೈಗಾರಿಕಾ ಸಲಹಾ ಸಂಸ್ಥೆ, 4. ವಸ್ತುಗಳನ್ನು ಬಾಡಿಗೆಗೆ & ಗುತ್ತಿಗೆಗೆ ನೀಡುವ ಸಂಸ್ಥೆಗಳು,
5. ಛಾಯಾಪ್ರತಿ ತೆಗೆಯುವ ಕೇಂದ್ರಗಳು, 6. ಕೈಗಾರಿಕಾ ಸಂಶೋಧನೆ & ಅಭಿವೃದ್ಧಿ ಪ್ರಯೋಗಾಲಯಗಳು
7. ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು 8. ಅಂತರ್ಜಾಲ & ಸಂಹವನ ಅಂಗಡಿಗಳು
9. ದೂರದರ್ಶನ ಜಾಲ ಬಂದರ ಸೇವಾಕ್ಷೇತ್ರಗಳು 10. ಕ್ರೇಜ್ & ಬ್ಯೂಟಿಪಾರ್ಲರ್‌ಗಳು

| ಕ್ರಸಂ | ಸಂಸ್ಥೆಯ ಹೆಸರು | ಸ್ಥಾಪಕ ಉದ್ಯಮಿಯ ಹೆಸರು |
|---|---|---|
| 1 | ಅಪೋಲೋ ವೈದ್ಯಶಾಲೆಗಳ ಗುಂಪು | **ಡಾ. ಪ್ರತಾಪರಡ್ಡಿ.** |
| 2 | ವಿಪ್ರೋ ತಂತ್ರಜ್ಞಾನ ಸಂಸ್ಥೆ | **ಅಜೀಮ್ ಪ್ರೇಮ್‌ಜಿ.** |
| 3 | ಜೆಟ್ ವಾಯುಮಾರ್ಗ | **ನರೇಶ್ ಗೋಯಲ್** |
| 4 | ಇನ್ಫೋಸಿಸ್ ತಂತ್ರಜ್ಞಾನ ಸಂಸ್ಥೆ (1999) | **ನಾರಾಯಣಮೂರ್ತಿ** |
| 5 | ದೂರದರ್ಶನ ಕ್ಷೇತ್ರದಲ್ಲಿ ಅಧಿಪತ್ಯ ಸಾಧಿಸಿದ ರಾಣಿ/ಬಾಲಾಜಿ ದೂರದರ್ಶನ ಸಂಸ್ಥೆ | **ಏಕ್ತಾಕಪೂರ್.** |
| 6 | ಬಯೋಕಾನ್ ನಿಗಮದ (1978) | **ಕಿರಣ್ ಮುಜುಮ್‌ದಾರ್ ಷಾ** |
| 7 | ಬಿಳಿ ಕ್ರಾಂತಿಯ ಪಿತಾಮಹ | **ವರ್ಗೀಸ್ ಕುರಿಯನ್.** |
| 8 | ರಿಲಯನ್ಸ್ ಸಂಸ್ಥೆಯ | **ಧೀರೂಬಾಯಿ ಅಂಬಾನಿಯವರು** |

**7. ಸ್ವ ಉದ್ಯೋಗದ ಯೋಜನೆಗೆ ಸಾಲ ಕೊಡುವ ಸಂಸ್ಥೆಗಳು ಯಾವುವು?**

1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು 2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
3. ಆಮದು ಮತ್ತು ರಫ್ತು ಬ್ಯಾಂಕು 4. ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕ್
5. ಭಾರತೀಯ ಕೈಗಾರಿಕಾ ಹಣಕಾಸು ಬ್ಯಾಂಕು 6. ಭಾರತೀಯ ವಾಣಿಜ್ಯ & ಇತರೆ ಬ್ಯಾಂಕುಗಳು
7. ರಾಜ್ಯ ಹಣಕಾಸು ನಿಗಮ 8. ಭಾರತೀಯ ಜೀವವಿಮಾ ನಿಗಮ 9. ಯುನಿಟ್ ಟ್ರಸ್ಟ್ ಆಫ್ ಇಂಡಿಯಾ

## ಅಧ್ಯಾಯ – 3. ವ್ಯವಹಾರದ ಜಾಗತೀಕರಣ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಜಾಗತೀಕರಣದ ಅರ್ಥ ತಿಳಿಸಿ. **– ಬಂಡವಾಳದ, ತಾಂತ್ರಿಕತೆಯ ಮತ್ತು ಮಾಹಿತಿ ಅಂತರರಾಷ್ಟ್ರೀಯ ಅರಿವು.**
2. ವಿಶ್ವ ವ್ಯಾಪಾರ ಸಂಘಟನೆ ಎಷ್ಟರಲ್ಲಿ ಅಸ್ತಿತ್ವಕ್ಕೆ ಬಂದಿತು? **– 1995 ಜನವರಿ–01**
3. ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಕಛೇರಿ ಎಲ್ಲಿದೆ? **– ಸ್ವಿಟ್ಜರ್‌ಲ್ಯಾಂಡಿನ ಜಿನೇವಾ**
4. ವಿಶ್ವ ವ್ಯಾಪಾರ ಸಂಘಟನೆಯ ಮುಖ್ಯ ಉದ್ದೇಶವೇನು? **–ಅಂತರರಾಷ್ಟ್ರೀಯ ಮುಕ್ತ ವ್ಯಾಪಾರ ನೀತಿಯನ್ನು ಜಾರಿಗೊಳಿಸುವುದು.**

**5. ಜಾಗತೀಕರಣ ಎಂದರೇನು? ವಿವರಿಸಿ.**

– ಸರಕು & ಸೇವೆಗಳು ಹಾಗೂ ಅಂತರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ & ವ್ಯಾಪಕವಾದ ತಾಂತ್ರಿಕತೆಯ ಪ್ರಸರಣದ ಮೂಲಕ ಇಡಿ ವಿಶ್ವವನ್ನೇ ಒಂದು ಮಾರುಕಟ್ಟೆಯಾಗಿಸಿಕೊಂಡು ಎಲ್ಲಾ ರೀತಿಯ ಸಂಪನ್ಮೂಲಗಳನ್ನು ವಿಶ್ವದ ಅಗ್ಗದ ಮಾರುಕಟ್ಟೆಯಿಂದ ಪಡೆಯುವುದು.

**6. ಜಾಗತೀಕರಣದಿಂದ ಸರಕುಗಳ ಬೆಲೆ ಕಡಿಮೆಯಾಗುತ್ತದೆ. ಹೇಗೆ?** – ಸ್ಥಳೀಯ ವ್ಯಾಪಾರ ಸಂಸ್ಥೆಗಳ ಮಧ್ಯೆ ಪೈಪೋಟಿಯಿಂದ.

**II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಜಾಗತೀಕರಣದಿಂದಾಗುವ ಅನುಕೂಲಗಳಾವುವು? ( ಸಕಾರಾತ್ಮಕ ಪರಿಣಾಮಗಳು )**

1. ಆರ್ಥಿಕ ಬೆಳವಣಿಗೆಗೆ ಉತ್ತೇಜನ, 2. ಪ್ರಪಂಚದಾದ್ಯಂತ ಒಂದೇ ರೀತಿಯ ವಸ್ತುಗಳು ದೊರೆಯುತ್ತವೆ
3. ದೇಶದ ರಾಷ್ಟ್ರೀಯ ಉತ್ಪನ್ನ ಹೆಚ್ಚಿಸುತ್ತದೆ. 4. ದೇಶದ ಜನರ ವರಮಾನ ಹೆಚ್ಚಿಸುತ್ತದೆ.
5. ಸರಕುಗಳ ಬೆಲೆಗಳು ಕಡಿಮೆ ಇರುತ್ತವೆ. 6. ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ
7. ದೇಶಗಳ ನಡುವೆ ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ 8. ಸರಕು & ಸೇವೆಗಳು ಉತ್ಪಾದನೆಗೆ ಸಹಾಯ

**2. ಜಾಗತೀಕರಣವು ವಿಶ್ವದಾದ್ಯಂತ ಆರ್ಥಿಕ ಚಲನೆಗೆ (ಚಳುವಳಿ) ಹೇಗೆ ಸಹಾಯಕವಾಗಿದೆ?**

1. ಸರಕು ಸೇವೆಗಳ ಗಡಿಯಾಚೆಗಿನ ಚಲನೆ 2. ಬಂಡವಾಳ, ತಾಂತ್ರಿಕತೆ, ಮಾಹಿತಿಯ ಅಂತರಾಷ್ಟ್ರೀಯ ಹರಿವು
3. ಯಾವುದೇ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಸರಕು ಉತ್ಪಾದನೆ
4. ಕಚ್ಚಾವಸ್ತು ಮತ್ತು ಸಂಪನ್ಮೂಲಗಳನ್ನು ವಿಶ್ವದ ಅಗ್ಗದ ಮಾರುಕಟ್ಟೆಯಿಂದ ಪಡೆಯುವುದು.

**3. ವಿಶ್ವ ವ್ಯಾಪಾರ ಸಂಘಟನೆಯ ಗುರಿಗಳು ಯಾವುವು?**

1. ಸದಸ್ಯ ರಾಷ್ಟ್ರಗಳ ಜನರ ಜೀವನಮಟ್ಟ ಹೆಚ್ಚಿಸುವುದು.
2. ಸದಸ್ಯ ರಾಷ್ಟ್ರಗಳ ನಡುವೆ ಉದ್ಭವಿಸುವ ವ್ಯಾಪಾರ ವ್ಯಾಜ್ಯಗಳನ್ನು ಬಗೆಹರಿಸುವುದು.
3. ಸದಸ್ಯ ರಾಷ್ಟ್ರಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಿ, ಹೆಚ್ಚು ಉದ್ಯೋಗವಕಾಶ ಕಲ್ಪಿಸುವುದು.
4. ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವೆಚ್ಚಗಳನ್ನು ಕಡಿಮೆ ಮಾಡುವುದು.
5. ಸದಸ್ಯ ರಾಷ್ಟ್ರಗಳಲ್ಲಿ ಉತ್ತಮ ಸರ್ಕಾರ ರಚಿಸಲು ಸಹಾಯ ಮಾಡುವುದು.
6. ಸದಸ್ಯ ರಾಷ್ಟ್ರಗಳಲ್ಲಿ ಶಾಂತಿ, ಸ್ಥಿರತೆ ಅಥವಾ ದೃಡತೆ ಕಾಪಾಡಲು ಸಹಕರಿಸುವುದು.

**4. ಜಾಗತೀಕರಣದಿಂದ ಉಂಟಾಗುವ ನಕರಾತ್ಮಕ ಪರಿಣಾಮಗಳನ್ನು ಉದಾಹರಣೆಯೊಂದಿಗೆ ವಿವರಿಸಿ.**

1. ವಿಶ್ವಮಾರುಕಟ್ಟೆಯಲ್ಲಿ ತೀವ್ರವಾದ ಪೈಪೋಟಿಯಿಂದಾಗಿ ನೀತಿಬಾಹಿರ ಪದ್ದತಿಗಳು ರೂಡಿ ಸಾಧ್ಯತೆ.
2. ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗಿ ಮಾರ್ಪಾಡಾಗುತ್ತವೆ..
3. ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಒಂದು ಊಟಕ್ಕೂ ಶ್ರಮ ಪಡಬೇಕಾಗುತ್ತದೆ.
4. ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗಿದೆ.
5. ಅಗ್ಗದ ವಸ್ತುಗಳ ಆಮದಿನಿಂದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉತ್ಪಾದನೆ ಕಡಿಮೆಯಾಗಿ ನಿರುದ್ಯೋಗ ಹೆಚ್ಚಾಗುತ್ತದೆ.

**5. ಜಾಗತೀಕರಣದಲ್ಲಿ ಗುರುತಿಸಬಹುದಾದ ಲಕ್ಷಣಗಳನ್ನು ಪಟ್ಟಿಮಾಡಿ.**

1. ಅಂತರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ. 2. ಬಂಡವಾಳದ ಹರಿವು & ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.
3. ವಿಶ್ವ ಹಣಕಾಸಿನ ನೀತಿಯ ಅಭಿವೃದ್ಧಿ 4. ಅಂತರಾಷ್ಟ್ರೀಯ ಸಂಚಾರ & ಪರ್ಯಟನೆಗಳಿಗೆ ಅವಕಾಶ.
5. ಸ್ಥಳೀಯ ಆಹಾರ ಪದಾರ್ಥಗಳು ಬೇರೆ ದೇಶಗಳಿಗೆ ಹರಡುತ್ತವೆ. 6. WTO ಮತ್ತು IMFನ ಪಾತ್ರ ಹಚ್ಚಿಸುತ್ತದೆ.
7. ಅಂತರಾಷ್ಟ್ರೀಯ ಸಾಂಸ್ಕೃತಿಕ ವಿನಿಮಯಗಳನ್ನು ಹೆಚ್ಚುಮಾಡುತ್ತದೆ.

**6. ವಿಶ್ವವ್ಯಾಪಾರ ಸಂಘಟನೆಗಳ ಉದ್ದೇಶಗಳು ಯಾವುವು?**

1. ಬಹುಪಕ್ಷೀಯ ವ್ಯಾಪಾರ ಒಪ್ಪಂದಗಳನ್ನು ವಿಶ್ವದಾದ್ಯಂತ ಜಾರಿಗೆ ತರುವುದು.
2. ಬಹುಪಕ್ಷೀಯ ವ್ಯಾಪಾರ ವ್ಯವಹಾರಗಳ ನಡುವೆ ಮಧ್ಯವರ್ತಿಯಾಗಿ ಕೆಲಸ.
3. ವಿಶ್ವದಾದ್ಯಂತ ಮುಕ್ತ ಹಾಗೂ ಸ್ವತಂತ್ರ ಅಂತರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು.
4. ವಿವಿಧ ದೇಶಗಳ ನಡುವೆ ಉದ್ಭವಿಸುವ ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬರೆಹರಿಸುವುದು.
5. ಅಂತರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಯನ್ನು ಕಡಿಮೆ ಮಾಡುವುದು.
6. ಅಂತರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವುದು.

**7. ಜಾಗತೀಕರಣದ ಪರಿಣಾಮವಾಗಿ ಶೀಘ್ರ ಆಹಾರ ಸರಪಳಿಗಳು ಜನರ ಆರೋಗ್ಯದ ಅವನತಿಗೆ ಕಾರಣವಾಗಿವೆ. ಹೇಗೆ?**
**ಜಾಗತೀಕರಣದಿಂದಾಗಿ ಸಾಂಪ್ರದಾಯಿಕ ಆಹಾರ ಸೇವನೆ ಕಡಿಮೆಯಾಗುತ್ತಿದೆ ಏಕೆ?**

1. ಶೀಘ್ರ ಆಹಾರ ಸರಪಳಿಗಳು ಹೆಚ್ಚಾಗಿ ಹರಡುತ್ತಿವೆ.
2. ಕೆ.ಎಫ್.ಸಿ, ಮ್ಯಾಕ್ ಡೊನಾಲ್ಡ್ ನಂತಹ ಪ್ರಯೋಜನಕಾರಿಯಲ್ಲದ ಆಹಾರ (ಜಂಕ್ ಪುಡ್) ಸೇವನೆ ಜಾಸ್ತಿಯಾಗುತ್ತಿದೆ.
3. ಜನರ ಆರೋಗ್ಯ ಹಾಳಾಗಿ ಅನೇಕ ರೋಗಗಳು ಬರುತ್ತಿವೆ. 4. ವಿದೇಶಿ ಆಹಾರ ಸೇವನೆ ರೂಢಿಗೆ ಬರುತ್ತದೆ.

**8. ಜಾಗತೀಕರಣ ಪರಿಸರ ನಾಶಕ್ಕೆ ಕಾರಣ ಹೇಗೆ?**

1. ಜಾಗತೀಕರಣದಿಂದಾಗಿ ಪಟ್ಟಣಗಳು ಅಭಿವೃದ್ಧಿ ಹೊಂದಿ ಕಸದ ತೊಟ್ಟಿಗಳಾಗುತ್ತವೆ.
2. ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ ಉಂಟಾಗುತ್ತದೆ. 3. ಕೈಗಾರಿಕಾ ತ್ಯಾಜ್ಯಗಳ ಶೇಖರಣೆ

**9. ಜಾಗತೀಕರಣ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗುಲಾಮಗಿರಿ ಮತ್ತು ಬಾಲ ಕಾರ್ಮಿಕ ಪದ್ಧತಿಗೆ ಕಾರಣವಾಗಬಹುದು. ಹೇಗೆ ?**

– ವೆಚ್ಚವನ್ನು ಕಡಿಮೆ ಮಾಡುವ ದಿಸೆಯಲ್ಲಿ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಉತ್ಪಾದನೆಗಳನ್ನು ಹೊರಮೂಲಗಳಿಂದ ರೂಢಿಗೆ ತಂದು ನೌಕರಶಾಹಿ ಕೆಲಸವನ್ನು ಉತ್ತೇಜಿಸುವುದರಿಂದ.

**10. ಜಾಗತೀಕರಣದಿಂದ ಅಭಿವೃದ್ಧಿಶೀಲ ರಾಷ್ಟ್ರಗಳ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ. ಈ ಹೇಳಿಕೆಯನ್ನು ಸಮರ್ಥಿಸಿ**

1. ಅಗ್ಗದ ವಸ್ತುಗಳ ಆಮದಿನಿಂದಾಗಿ ಉತ್ಪಾದನೆ ಕಡಿಮೆಯಾಗಿ ನಿರುದ್ಯೋಗ ಹೆಚ್ಚುತ್ತದೆ.
2. ಜಾಗತೀಕರಣದಿಂದ ಹೊಸ ಕೈಗಾರಿಕೆಗಳ ಸ್ಥಾಪನೆಯಾಗುವುದಿಲ್ಲ.
3. ಮುಂದುವರೆದ ರಾಷ್ಟ್ರಗಳಿಂದ ಹೆಚ್ಚು ಸರಕುಗಳು ಬರುತ್ತವೆ.
4. ಸ್ಥಳೀಯ ವಸ್ತುಗಳ ಬೇಡಿಕೆ ಕಡಿಮೆಯಾಗಿ ಉತ್ಪಾದನಾ ಸಾಮರ್ಥ್ಯ ನಾಶ.

**11. ಜಾಗತೀಕರಣದಲ್ಲಿ ಅಡಕವಾಗಿರುವ ಅಂಶಗಳು ಯಾವುವು?**

1. ವಿಶ್ವದಾದ್ಯಂತ ಆಧುನಿಕ ಸಂಪರ್ಕಜಾಲ, 2. ಸಂಚಾರ ಸೌಲಭ್ಯಗಳು, ಕಾನೂನಿನ ಮೂಲಭೂತ ಸ್ಥಿರತೆ
3. ಆರ್ಥಿಕ, ತಾಂತ್ರಿಕ, ರಾಜಕೀಯ ಹಾಗೂ ಸಂಸ್ಕೃತಿಗಳಲ್ಲಿ ವಿನಿಮಯ. 4. ಆಮದು ಮತ್ತು ರಫ್ತುಗಳ ಸುಂಕ ನಿರ್ಮೂಲನೆ
5. ಅಂತರರಾಷ್ಟ್ರೀಯ ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ. 6. ಮುಕ್ತ ವಲಯಗಳ ಸೃಷ್ಟಿ.
7. ಸಾರಿಗೆ ವೆಚ್ಚವನ್ನು ಸಮುದ್ರಯಾನದಲ್ಲಿ ಕಂಟೈನರ್ ಮೂಲಕ ಕಡಿಮೆ ಮಾಡುವುದು.
8. ಬಂಡವಾಳ ಹತೋಟಿಯನ್ನು ಕಡಿಮೆಗೊಳಿಸುವುದು 9. ವಿಶ್ವವ್ಯಾಪಿ ಸಂಸ್ಥೆಗಳಿಗೆ ಪ್ರೋತ್ಸಾಹ

## ಅಧ್ಯಾಯ – 4. ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಗ್ರಾಹಕನಿಗಿರುವ ಮತ್ತೊಂದು ಹೆಸರೇನು? **– ಮಾರುಕಟ್ಟೆಯ ರಾಜ**
2. ಹಣಪಡೆದು ವಸ್ತು ಅಥವಾ ಸೇವೆಯನ್ನು ನೀಡುವಾತ ಯಾರು? **– ಪೂರೈಕೆದಾರ**
3. ಪ್ರತಿವರ್ಷ ವಿಶ್ವ ಗ್ರಾಹಕರ ದಿನವನ್ನು ಯಾವ ದಿನಾಂಕದಂದು ಆಚರಿಸುತ್ತೇವೆ? **–ಮಾರ್ಚ್ 15**

4. ಪರಿಹಾರ ಮೊತ್ತವು 20 ಲಕ್ಷ ರೂಪಾಯಿಗಳನ್ನು ಮೀರಿದ್ದರೆ ದೂರನ್ನು ಯಾವ ಆಯೋಗಕ್ಕೆ ಸಲ್ಲಿಸಬೇಕು? **– ರಾಜ್ಯ ಆಯೋಗ**

5. **ಪರಿಹಾರ ಮೊತ್ತ ಒಂದು ಕೋಟಿ ರೂಪಾಯಿಗಿಂತ ಮೀರಿದ್ದರೆ ಯಾವ ಆಯೋಗಕ್ಕೆ ದೂರು ಸಲ್ಲಿಸಬೇಕು? –ರಾಷ್ಟ್ರೀಯ ಆಯೋಗ**

**6. ಗ್ರಾಹಕ ಎಂದರೆ ಯಾರು?** – ವಸ್ತುಗಳನ್ನು ಕೊಳ್ಳುವವರು ಅಥವಾ ಪದಾರ್ಥಗಳನ್ನು ಬಳಸಿಕೊಳ್ಳುವವರಾಗಿದ್ದಾರೆ.

7. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು? **–1986**

8. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ? **– ರಾಜ್ಯ ಸರ್ಕಾರ**

9. **ಅವೇರ್(AWARE)** ಎಂಬ ಸಂಸ್ಥೆಯನ್ನು ಪ್ರಾರಂಭಿಸಿದವರು ಯಾರು? – ಮುಂಬೈ ಪಟ್ಟಣದ ಕೆಲವುಮಹಿಳೆಯರು

10. **AWARE ನ್ನು** ವಿಸ್ತರಿಸಿ. – The Association of Women Against Rising Expenses

**11. ಟೆಲಿಷಾಪಿಂಗ್ ಎಂದರೇನು?** – ಮಾಹಿತಿ ತಂತ್ರಜ್ಞಾನದ ಬಳಕೆಯಿಂದ ಮನೆಯಲ್ಲೇ ಕುಳಿತು ವಸ್ತುಗಳನ್ನು ಕೊಳ್ಳುವುದು.

12. ಗ್ರಾಹಕ ಸಂರಕ್ಷಣಾ ಕಾಯ್ದೆಯು ಭಾರತದಲ್ಲಿ ಯಾವ ರಾಜ್ಯಕ್ಕೆ ಅನ್ವಯಿಸುವುದಿಲ್ಲ? **– ಜಮ್ಮು ಮತ್ತು ಕಾಶ್ಮೀರ**

13. ಭಾರತದಲ್ಲಿ ಯೋಜನಾ ಆಯೋಗವು ಭಾರತದ ಗ್ರಾಹಕ ಸಂಘದ ಸ್ಥಾಪನೆಗೆ ಯಾವಾಗ ಒತ್ತು ಕೊಟ್ಟಿತು? **– 1956**ರಲ್ಲಿ

**14. ಪ್ರತಿ ವರ್ಷ ಮಾರ್ಚ್ 15ರಂದು ವಿಶ್ವ ಗ್ರಾಹಕರ ದಿನಾಚರಣೆ ಆಚರಿಸಲಾಗುತ್ತದೆ ಯಾಕೆ? ಅಥವಾ ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಒಂದು ಮಹತ್ವದ ದಿನವಾಗಿದೆ. ಏಕೆ?**

– ಆ ದಿನದಂದು ಅಂದಿನ ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರು ಅಲ್ಲಿನ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದ ಕಾರಣದಿಂದ

**II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳಾವುವು?**

1. ಅಧಿಕ ಬೆಲೆ ವಿಧಿಸುವುದು **2.** ತೂಕ ಮತ್ತು ಅಳತೆಗಳಲ್ಲಿ ಮೋಸ
**3.** ಕಲಬೆರಕೆ ವಸ್ತುಗಳ ಮಾರಾಟ **4.** ಕಳಪೆ ಗುಣಮಟ್ಟದ ವಸ್ತುಗಳ ಮಾರಾಟ

**2. ಬಳಕೆದಾರರ ಶೋಷಣೆಗೆ ಕಾರಣಗಳಾವುವು?**

1. ಮಧ್ಯವರ್ತಿಗಳ ಹಾವಳಿ 2. ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿದ್ದು.
3. ನೇರ ವ್ಯವಹಾರ ಇಲ್ಲವಾಗಿದ್ದು. 4. ಸರಕುಗಳ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದ್ದು.

**3. ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮುಖ್ಯ ಕಾರ್ಯವೇನು?**

– ಆರೋಗ್ಯಕರ ಸ್ಪರ್ಧೆಯೊಂದಿಗೆ ಯೋಗ್ಯ ಬೆಲೆಗೆ ಉತ್ತಮ ಗುಣಮಟ್ಟದ ವಸ್ತು ಅಥವಾ ಸೇವೆ ದೊರೆಯುವಂತೆ ಮಾಡುವುದು.

**4. ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳನ್ನು ತಿಳಿಸಿರಿ.**

1. ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ. 2. ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟ ತಪ್ಪಿಸುವುದು.
3. ಮಾರುಕಟ್ಟೆಯಲ್ಲಿನ ಅನುಚಿತ ವ್ಯವಹಾರ ತಡೆಗಟ್ಟುವುದು. 4. ಗುಣಮಟ್ಟ, ಅಳತೆ, ತೂಕ, ಬೆಲೆಗಳ ಮೇಲೆ ನಿಗಾ.
5. ಗ್ರಾಹಕ ಶಿಕ್ಷಣದ ಮೂಲಕ ಜನರಲ್ಲಿ ಜಾಗೃತಿ. 6. ತೊಂದರೆಗೊಳಗಾದ ಬಳಕೆದಾರರಿಗೆ ಸೂಕ್ತ ಪರಿಹಾರ.

**5. ಮೂರು ಹಂತದ ಗ್ರಾಹಕ ನ್ಯಾಯಾಲಯಗಳನ್ನು ತಿಳಿಸಿರಿ.**

– 1.ಜಿಲ್ಲಾ ವೇದಿಕೆ 2. ರಾಜ್ಯ ಆಯೋಗ 3. ರಾಷ್ಟ್ರೀಯ ಆಯೋಗ

**6. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?**

1. ದೂರುಗಳು ಕೈಬರಹದ ಅಥವ ಬೆರಳಚ್ಚಿನ ಮಾದರಿಯಲ್ಲಿರಬೇಕು.
2. ದೂರುಕೊಡುವವನ ಹೆಸರು, ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸಿರಬೇಕು.
3. ಯಾವ ಪೂರೈಕೆದಾರನ ವಿರುದ್ಧ ದೂರು ಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸಿರಬೇಕು.
4. ಯಾವ ವಸ್ತುವಿನಿಂದ ನಷ್ಟವಾಗಿದೆ ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟುಂಬುದನ್ನು ಸರಿಯಾಗಿ ನಮೂದಿಸಿರಬೇಕು.
5. ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀತಿಯನ್ನು ಲಗತ್ತಿಸಬೇಕು.

**7. ಗ್ರಾಹಕರ ಹಕ್ಕುಗಳನ್ನು ತಿಳಿಸಿ.**

1. ಗ್ರಾಹಕರ ಜೀವನ ರಕ್ಷಿಸುವ ಹಕ್ಕು 2. ಮಾಹಿತಿ ಪಡೆಯುವ ಹಕ್ಕು 3. ವಸ್ತುಗಳ ಆಯ್ಕೆಯ ಹಕ್ಕು
4. ವಸ್ತುಗಳ ಬಗ್ಗೆ ಆಲಿಸುವ ಹಕ್ಕು 5. ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು 6. ಗ್ರಾಹಕ ಶಿಕ್ಷಣದ ಹಕ್ಕು
7. ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು 8. ಜೀವನ ಉತ್ತಮ ಪಡಿಸಿಕೊಳ್ಳುವ ಹಕ್ಕು


ಇಂದಿರಾಕೋಲ್
ಉತ್ತರಅಕ್ಷಾಂಶ 37° 6'
ಭಾರತ
ಅಕ್ಷಾಂಶ ಮತ್ತು ರೇಖಾಂಶಗಳ ವಿಸ್ತರಣೆ
ಪಾಕಿಸ್ತಾನ
ಕಿಬಿತು
ಪೂರ್ವ ಪಶ್ಚಿಮ ಅಗಲ 2933 ಕಿ.ಮೀ.
ಕರ್ಕಾಟಕವೃತ್ತ 23° 30'
ಭಾರತದ
ಭೌಗೋಳಿಕ
ಕೇಂದ್ರ
ಉತ್ತರ ದಕ್ಷಿಣ ಉದ್ದ 3214 ಕಿ.ಮೀ.
ಅರಬ್ಬಿ ಸಮುದ್ರ
ಬಂಗಾಳ ಕೊಲ್ಲಿ
ಅಂಡಮಾನ್
ನಿಕೋಬಾರ್
ದ್ವೀಪಗಳು
ಲಕ್ಷದ್ವೀಪ
ಕನ್ಯಾಕುಮಾರಿ
ಶ್ರೀಲಂಕ
ಅತ್ಯಂತ ದಕ್ಷಿಣ ಅಕ್ಷಾಂಶ 6° 45'
ಇಂದಿರಾ ಪಾಯಿಂಟ್
ಹಿಂದೂ ಮಹಾಸಾಗರ


ಭಾರತದ
ವಿವಿಧೋದ್ದೇಶ ನದಿ
ಕಣಿವೆ ಯೋಜನೆಗಳು
ಬಿಯಾಸ್
ಭಾಕ್ರಾನಂಗಲ್
ತೆಹರಿ
ಗಂಡಕ್
ಕೋಸಿ
ಚಂಬಲ್
ರಿಹಾಂಡ್.
ದಾಮೋದರ ಕಣಿವೆ
ನರ್ಮದಾ
ಹಿರಾಕುಡ್
ನಾಗಾರ್ಜುನ ಸಾಗರ
ಅರಬ್ಬೀ
ಸಮುದ್ರ
ತುಂಗಭದ್ರಾ
ಬಂಗಾಳ ಕೊಲ್ಲಿ
SCALE
Km 200 100 0 200 400 Km



ಗಂಗಾ ನಗರ
ದೆಹಲಿ
ಮೌಸಿನ್ ರಾಮ್
ಕೊಂಕಣ
ತೀರ
ಪಶ್ಚಿಮ ಘಟ್ಟಗಳು
ಪೂರ್ವ ಘಟ್ಟಗಳು
ಕೋರ ಮಂಡಲ ತೀರ
ಮಲಬಾರ್
ತೀರ
ನೀಲಗಿರಿ ಬೆಟ್ಟಗಳು
ಕನ್ಯಾಕುಮಾರಿ
ಮನ್ನಾರ್
ಕೊಲ್ಲಿ




ಭಾರತದ
ಪ್ರಮುಖ ಬಂದರುಗಳು
ಕಾಂಡ್ಲ
ಮುಂಬಯಿ
ನವಶೇವ
ಮರ್ಮಗೋವ
ಮಂಗಳೂರು
ಕೊಚಿ
ತುತಕುಡಿ
ಚೆನ್ನೈ
ಎನ್ನೋರ್
ವಿಶಾಖಪಟ್ಟಣ
ಪಾರಾದೀಪ್
ಕೊಲ್ಕತ್ತ
ಹಾಲ್ದಿಯ
ಬಂಗಾಳಕೊಲ್ಲಿ
ಪೋರ್ಟ್ ಬ್ಲೇರ್
ಶ್ರೀಲಂಕ


ಭಾರತ
ಅಂತಾರಾಷ್ಟ್ರೀಯ ವಿಮಾನ
ನಿಲ್ದಾಣಗಳು
ಶ್ರೀನಗರ
ಅಮೃತಸರ
ಜೈಪುರ
ಗಯಾ
ಗುವಹಾತಿ
ಭೂಪಾಲ್
ಇಂಡೋರ್
ನಾಗ್ಪುರ
ಮುಂಬಯಿ
ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ
ಮರ್ಮಗೋವ
ಬೆಂಗಳೂರು
ಚೆನ್ನೈ
ಕೊಯಮತ್ತೂರು
ತಿರುವನಂತಪುರ
ಹಿಂದೂ
ಶ್ರೀಲಂಕ
ಸಾಗರ


ಭಾರತದ
ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು
ದಿಗ್ಬಾಯ್
ನಹರ್ ಕಟಿಯಾ
ಬಾರಾಮರ್
ರಾಜಸ್ಥಾನ
ನರೋರ
ಉತ್ತರಪ್ರದೇಶ
ಅಸ್ಸಾಂ
ಝರಿಯಾ
ಮಧ್ಯಪ್ರದೇಶ
ಅಂಕಲೇಶ್ವರ
ಗುಜರಾತ್
ರಾಣಿಗಂಜ್
ಸಿಂಗಭೂಮ್
ಮಯೂರ್ ಭಂಜ್
ಬಾಂಬೆ ಹೈ
ತಾರಾಪುರ
ಕಿಯೋಂಜಾರ್
ಹಟ್ಟಿ
ಗದಗ(ಕಪ್ಪತ ಗುಡ್ಡ)
ಸುಂದರ್ ಭಂಜ್
ಬಳ್ಳಾರಿ
ಶ್ರೀಶೈಲಂ
ಕೈಗಾ
ಕೆಮ್ಮಣ್ಣು ಗುಂಡಿ
&
ಕುದುರೆ ಮುಖ
ಕರ್ನಾಟಕ
ಕಲ್ಪಕಂ
ಕೋಲಾರ
ತಮಿಳುನಾಡು

## ಈ ಕೆಳಗಿನ ಸ್ಥಳ/ಪ್ರದೇಶಗಳನ್ನು ನಕ್ಷೆಯಲ್ಲಿ ಗುರುತಿಸಿ ಅಭ್ಯಾಸ ಮಾಡುವುದು.

1. ಉತ್ತರ ಸರ್ಕಾರ್, 2. ವಿಂಧ್ಯ ಮತ್ತು ಸಾತ್ಪುರ ಬೆಟ್ಟಗಳು 3. ನಾಗ ಬೆಟ್ಟಗಳು, 5. ಗಾರೊ ಬೆಟ್ಟಗಳು, 6. ಜಾಸ್ಕರ್ ಸರಣಿ 7. ನಂಗ ಪರ್ವತ 8. ನಿತ್ಯಹರಿದ್ವರ್ಣದ ಕಾಡುಗಳು. 9. ಎಲೆ ಉದುರಿಸುವ ಕಾಡುಗಳು. 10. ಕುರುಚಲು ಸಸ್ಯ & ಹುಲ್ಲುಗಾವಲು. 11. ಮರುಭೂಮಿ ಸಸ್ಯವರ್ಗ. 12. ಪರ್ವತ ಕಾಡುಗಳು. 13. ಮ್ಯಾಂಗ್ರೋವ್ ಕಾಡುಗಳು. 14. ರಿಹಾಂಡ್ ಯೋಜನೆ 15. ದಿಬ್ರುಗರ್ 16. ತೋರಣಗಲ್ 17. ದೋಲ್ವಿ, 18. ಬರ್ನಪುರ, 19 ಗೋಪಾಲ್ಪುರ 20. ಬಿಲಾಯಿ, 21. ದುರ್ಗಾಪುರ, 22. ಸೇಲಂ, 23.ಕೊರಬ 24. ಅಲುಪುರಂ,25. ಜಯಕಾಯ್‌ನಗರ, 26. ರೇನುಕೂಟ 27. ಕುಂದನ್ ಕುಲಂ, 28. ಮಾಕುಂ 29. ಆರಾವಳಿ ಬೆಟ್ಟಗಳು 30. ನೀಲಗಿರಿ ಬೆಟ್ಟಗಳು 31.**8°4'**ಉತ್ತರ ಅಕ್ಷಾಂಶ, 32. **37°6'**ಉತ್ತರ ಅಕ್ಷಾಂಶ 33. ಇಂದಿರಾ ಪಾಯಿಂಟ್, 34.ಗೋದಾವರಿ ನದಿ, 35. **68°7'**ಪೂರ್ವ ರೇಖಾಂಶ 36. **97°3'**ಪೂರ್ವ ರೇಖಾಂಶ, 37. ತಾಪಿ ನದಿ, 38. ಸೋನೆ ನದಿ, 39. ಪೆನ್‌ಗಂಗ ನದಿ 40. ಸುವರ್ಣಾರೇಖಾ ನದಿ, 41. ಪೂರ್ವದ ಜಲಮೇರೆ 41. ಪಶ್ಚಿಮದ ಜಲಮೇರೆ.

## ಹೆಚ್ಚಿನ ಸಂಪನ್ಮೂಲಕ್ಕಾಗಿ ಭೇಟಿ ನೀಡಬಹುದಾದ ಅಂತರ್ಜಾಲ ತಾಣಗಳು

1. http://socialsciencedigitalblogspot.com
2. koer
3. inyatrust
4. http://hsmitra.blogspot.com
5. http://geniuscsk.blogspot.com
6. www.dsert.kar.nic.in
7. http://diksha.gov.in

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ : 2018–19 ವಿಷಯ: ಸಮಾಜ ವಿಜ್ಞಾನ**

**ಒಟ್ಟು ಪ್ರಶ್ನೆಗಳ ಸಂಖ್ಯೆ: 47** **ವಿಷಯ ಸಂಕೇತ: 85ಕೆ**

**ಸಮಯ: 3 ಗಂಟೆ** **ಗರಿಷ್ಠಅಂಕಗಳು: 80**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ. ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. 1x10=10**

1. ಎರಡನೇ ಬಾಜೀರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಲು ಕಾರಣ
   ಎ) ಹೊಳ್ಕರನ ಸೈನ್ಯ ಎರಡನೇ ಬಾಜೀರಾಯನ ಸೈನ್ಯವನ್ನು ಸೋಲಿಸಿತು. ಬಿ) ಮರಾಠ ಮನೆತನಗಳ ನಾಯಕರಲ್ಲಿ ಸಂಘರ್ಷವಿತ್ತು.
   ಸಿ) ಪಶ್ಚಿಮ ಸೈನ್ಯವನ್ನು ಲಾರ್ಡ್‌ವೆಲ್ಲೆಸ್ಲಿ ಸೋಲಿಸಿದನು
   ಡಿ) ಪೇಶ್ವೆ ಎರಡನೇ ಭಾಜೀರಾಯನು ಬ್ರಿಟೀಷರಿಂದ ಸೋಲನ್ನನ್ನುಭವಿಸಿದನು.
2. 1905 ರಲ್ಲಿ ಬಂಗಾಳವನ್ನು ವಿಭಜಿಸಲು ಕಾರಣ
   ಎ) ಹಿಂದೂ ಮುಸಲ್ಮಾನರನ್ನು ಬೇರ್ಪಡಿಸುವುದು. ಬಿ) ಬ್ರಿಟೀಷರ ವಿರುದ್ಧ ಹೋರಾಟಗಳನ್ನು ಧಮನಗೊಳಿಸುವುದು.
   ಸಿ) ಪಶ್ಚಿಮ ಬಂಗಾಳ ಬಾಗವನ್ನು ಅಭಿವೃದ್ಧಿಗೊಳಿಸುವುದು. ಡಿ) ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದು.
3. (ಯು.ಎಸ್.ಎಸ್.ಆರ್.) ಸೋವಿಯಟ್ ರಷ್ಯಾದಲ್ಲಿ ಸಮಾಜವಾದ ಕುಸಿಯಲು ಕಾರಣ
   ಎ) ಗೋರ್ಬಚೆವ್‌ನ ಸುಧಾರಣೆಗಳು ಬಿ) ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದ
   ಸಿ) ಅಕ್ಟೋಬರ್ ಕ್ರಾಂತಿ ಡಿ) ಸಮಾಜವಾದಿ ರಾಷ್ಟ್ರಗಳ ಬಣದ ನಾಯಕತ್ವ ಜೋಸೆಫ್ ಸ್ಟಾಲಿನ್ ವಹಿಸಿದ್ದು
4. ಭಾರತದ ವಿದೇಶಾಂಗ ನೀತಿ ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಏಕೆಂದರೆ ಭಾರತ
   ಎ) ಆಂಗ್ಲರ ಆಡಳಿತದಿಂದ ಅದನ್ನು ಅನುಭವಿಸಿತ್ತು. ಬಿ) ಪಂಚಶೀಲ ತತ್ವಗಳಿಗೆ ಸಹಿ ಹಾಕಿತು.
   ಸಿ) ತೃತೀಯ ಜಗತ್ತಿನ ನಾಯಕ ಡಿ) ಯುರೋಪಿಯನ್ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದೆ.
5. ಭದ್ರತಾ ಸಮಿತಿಯು ವಿಶ್ವಸಂಸ್ಥೆಯ ಕ್ಯಾಬಿನೆಟ್‌ನಂತೆ ಕಾರಣ
   ಎ) ಐದು ಕಾಯಂ ಸದಸ್ಯರನ್ನು ಹೊಂದಿದೆ ಬಿ) ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತದೆ.
   ಸಿ) ವಿಶೇಷ ಮತ ಚಲಾಯಿಸುವ ಅಧಿಕಾರ ಹೊಂದಿದೆ. ಡಿ) ಹತ್ತು ಹಂಗಾಮಿ ಸದಸ್ಯರನ್ನು ಹೊಂದಿದೆ.
6. ಇತ್ತೀಚಿನ ದಿನಗಳಲ್ಲಿ ಭಾರತದಿಂದ ಮೈಕಾ ರಫ್ತು ಪ್ರಯಾಣ ಕಡಿಮೆಯಾಗಿದೆ. ಕಾರಣ
   ಎ) ಮೈಕಾದ ಉತ್ಪಾದನೆ ಕಡಿಮೆಯಾಗಿದೆ. ಬಿ) ಕೃತಕ ಅಬಕ್ರದ ಉತ್ಪಾದನೆಯಿಂದ
   ಸಿ) ಮೈಕಾ ನಿಕ್ಷೇಪಗಳು ಖಾಲಿಯಾಗಿವೆ. ಡಿ) ಮೈಕಾದ ಬಳಕೆ ನಿಷೇಧಿಸಲ್ಪಟ್ಟಿದೆ.
7. ಶಿವರಾಂ ಕಾರಂತರ ನೇತೃತ್ವದಲ್ಲಿ ಕರ್ನಾಟಕ ಕರಾವಳಿ ಜನ ಹೋರಾಟ ನಡೆಸಿದರು. ಅವರಿಗೆ
   ಎ) ಅಣುಸ್ಥಾವರ ದಟ್ಟ ಅರಣ್ಯವನ್ನು ನಾಶಪಡಿಸಬಹುದಾದ ಭೀತಿಯಿತ್ತು.
   ಬಿ) ಕಲಸಿ ಅರಣ್ಯದಲ್ಲಿ ಸರ್ಕಾರ ಮರ ಕಡಿಯುವುದನ್ನು ನಿಲ್ಲಿಸಬೇಕಿತ್ತು.
   ಸಿ) ಪರಿಸರ ಸಮತೋಲನ ಹಾಳಾಗುವ ಭಯವಿತ್ತು. ಡಿ) ಪರಿಸರ ಮಾಲಿನ್ಯ ಹೆಚ್ಚಾಗುತ್ತೆ ಅನ್ನಿಸಿತ್ತು.
8. ಇವುಗಳಲ್ಲಿ ಕೇವಲ ವ್ಯವಸಾಯಾಧಾರಿತ ಕೈಗಾರಿಕೆಗಳ ಗುಂಪು .
   ಎ) ಕಬ್ಬಿಣ, ಅಲ್ಯುಮಿನಿಯಂ, ತಾಮ್ರ ಕೈಗಾರಿಕೆಗಳು ಬಿ) ಹತ್ತಿಬಟ್ಟೆ, ಸೆಣಬು, ಸಕ್ಕರೆ ಕೈಗಾರಿಕೆಗಳು
   ಸಿ) ಜೈವಿಕ ತಂತ್ರಜ್ಞಾನ ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು ಡಿ) ಚಿತ್ರೋದ್ಯಮ, ವಿದ್ಯುತ್ ಉಪಕರಣ, ಪ್ಲಾಸ್ಟಿಕ್ ಕೈಗಾರಿಕೆಗಳು.
9. ಭಾರತದ ಆಡಳಿ ತ ವ್ಯವಸ್ಥೆಯಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ.ಕಾರಣ
   ಎ) (ಸಿವಿಲ್ ಸರ್ವಿಸ್) ನಾಗರೀಕ ಸೇವಾ ಪದ್ಧತಿ ಜಾರಿಗೆ ಬಂದಿತು.
   ಬಿ) ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿತು.
   ಸಿ) ಮೀಸಲಾತಿ ಪದ್ಧತಿ ಜಾರಿಗೆ ಬಂದಿತು. ಡಿ) ಸಂಸತ್ತಿನ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲಾಯಿತು.
10. ಜಾಗತೀಕರಣ ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು.
    ಎ) ಕಂಟೇನರ್ ಸೌಲಭ್ಯ ಒದಗಿಸುವುದರ ಮೂಲಕ ಬಿ) ಸಹಾಯಧನ ಸೃಷ್ಟಿಸುವುದರ ಮೂಲಕ
    ಸಿ) ಆಮದು ಮತ್ತು ರಫ್ತು ಸುಂಕಗಳನ್ನು ನಿರ್ಮೂಲನ ಮಾಡುವುದರ ಮೂಲಕ.
    ಡಿ) ರಾಜಕೀಯ ಅಡಚಣೆಗಳನ್ನು ನಿವಾರಿಸುವುದರ ಮೂಲಕ.

**II. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : 1 x 14=14**

11. ಲಾರ್ಡ್ ವೆಲ್ಲೆಸ್ಲಿಯ ಕಾಲದಲ್ಲಿ ಬ್ರಿಟೀಷ್ ಆಡಳಿತದ ವಿಸ್ತರಣೆ ಸುಲಭವಾಯಿತು. ಏಕೆ ?
12. 'ಪಾಲಿಸಿ ಆಫ್ ಅಸರ್ಷನ್' (Policy of Assertion) ಎಂದರೇನು ?
13. ಎರಡನೆ ಆಂಗ್ಲೋ ಮೈಸೂರು ಕದನವನ್ನು ಕೊನೆಗೊಳಿಸಲು ಕೈ ಗೊಂಡ ಒಪ್ಪಂದ ಯಾವುದು ?

14. ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯಿಂದ ಭಾರತೀಯರ ಮತ್ತು ಬ್ರಿಟೀಷರ ನಡುವಿನ ಅಂತರ ಕಡಿಮೆಯಾಯಿತು. ಹೇಗೆ ?
15. ಭಾರತೀಯ ವೃತ್ತ ಪತ್ರಿಕೆಗಳ ಅಭಿವೃದ್ಧಿಯಲ್ಲಿ ದೇಶೀಯ ಭಾಷಾ ಪತ್ರಿಕಾ ಕಾಯ್ದೆ (ವರ್ನಾಕ್ಯುಲರ್ ಪ್ರೆಸ್ ಆಕ್ಟ್) ಒಂದು ತೊಡಕಾಗಿತ್ತು. ಏಕೆ?
16. ವರ್ಣಭೇದ ನೀತಿಯನ್ನು ಜಗತ್ತಿನಲ್ಲಿ ಎಲ್ಲಿಯೂ, ಯಾವ ರಾಷ್ಟ್ರವೂ ಅನುಸರಿಸಬಾರದು ಎಂಬ ವಿದೇಶಾಂಗ ನೀತಿಯನ್ನು ಭಾರತ ಹೇಳಿದೆ. ಏಕೆ?
17. ಸಾಮಾಜಿಕ ಸ್ಥರ ವಿನ್ಯಾಸ ಎಂದರೇನು ?
18. ಮಹಿಳಾ ಚಳುವಳಿ ಎಂದರೇನು ?
19. ಸಾಂದ್ರ ಬೇಸಾಯವನ್ನು ವ್ಯಾಖ್ಯಾನಿಸಿ.
20. ಇಂದು ನಮ್ಮ ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ. ಏಕೆ?
21. ವಿಶ್ವ ವ್ಯಾಪಾರ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ ?
22. **RBI**ಸ್ಥಾಪನೆಗೊಂಡಿದ್ದು ಯಾವಾಗ ?
23. ಭೌಗೋಳಿಕ ಮೇಲ್ಮೈ ಲಕ್ಷಣಗಳು ಜನಸಂಖ್ಯಾ ಹಂಚಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ?
24. ಜನಸಾಂದ್ರತೆ ಮತ್ತು ಜನಸಂಖ್ಯೆಗಳಿಗಿರುವ ವ್ಯತ್ಯಾಸವೇನು ?

**III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x 15=30**

25. ಮೂರನೆಯ ಕರ್ನಾಟಕ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳೇನು ?
26. ಭಾರತದ ಸಾಮಾಜಿಕ ಸುಧಾರಣಾ ಚಳುವಳಿಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು. ಉತ್ತರಿಸಿ.
27. ರಾಜಕೀಯ ಅಂಶಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೇಗೆ ದಾರಿಯಾಯಿತು ?
28. ಭಾರತವು ಸ್ವಾತಂತ್ರ್ಯಗಳಿಸಿದ ನಂತರ ಎದುರಿಸಿದ ಸಮಸ್ಯೆಗಳನ್ನು ಹೆಸರಿಸಿ. **ಅಥವಾ**
    ಭಾರತದ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಳ್ಳಲ್ಪಟ್ಟ ದೇಶೀಯ ಸಂಸ್ಥಾನಗಳನ್ನು ಹೆಸರಿಸಿ.
29. ಶಸ್ತ್ರಾಸ್ತ್ರ ಸಂಗ್ರಹ ಪೈಪೋಟಿಯಲ್ಲಿ ಅಮೇರಿಕವು ಹೇಗೆ ಮೇಲುಗೈ ಸಾಧಿಸಿತು ?
30. ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ. ಏಕೆ ?
31. ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಕುಂದು ಕೊರತೆಗಳೇನು ?
32. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ಜಾರಿಗೆ ತರಲು ಕಾರಣಗಳೇನು ?
33. ಉತ್ತರದ ಮೈದಾನಗಳ ಪ್ರಾಮುಖ್ಯತೆಯನ್ನು ವಿವರಿಸಿ.
34. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
35. ಅರಣ್ಯಗಳ ಪ್ರಾಮುಖ್ಯತೆಯಲ್ಲಿ ಯಾವುದಾದರೂ ನಾಲ್ಕನ್ನು ತಿಳಿಸಿ.
36. ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ. ಏಕೆ ?
37. ಭಾರತದ ಸಾಗರ ಜಲಸಾರಿಗೆಗೆ ಪೂರಕವಾಗಿರುವ ಅಂಶಗಳಾವುವು ?
38. ಭಾರತದ ಸಂವಿಧಾನವು ಮಹಿಳೆಯರಿಗೆ ಪುರುಷರಷ್ಟೇ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ. ಏಕೆ ?
39. ಒಬ್ಬ ಗ್ರಾಹಕನು ತಾನು ಕೊಂಡ ವಸ್ತುವಿಗೆ ಗ್ಯಾರೆಂಟಿ ಇದ್ದಾಗ್ಯೂ ತಿರಸ್ಕರಿಸಲ್ಪಟ್ಟಾಗ ಆತನು ಏನು ಮಾಡಬಹುದು ?

**IV. ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 3 x 6=18**

40. ಭಾರತೀಯರ ಮೇಲೆ ಬ್ರಿಟೀಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳನ್ನು ವಿವರಿಸಿ. **ಅಥವಾ**
    ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ.
41. ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳೇನು ? **ಅಥವಾ** ವಿಶ್ವಸಂಸ್ಥೆಯ ಗುರಿಗಳೇನು ?
42. ಶೈಕ್ಷಣಿಕ ಸಮಾನತೆಯನ್ನು ಸ್ಥಾಪಿಸಲು ನಮ್ಮ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ. **ಅಥವಾ**
    ಭಾರತದ ದುಡಿಮೆಯೊಳಗಿರುವ ಅಸಮಾನತೆಗಳನ್ನು ವಿವರಿಸಿ.
43. ಮುಂಬಯಿ ನಗರವು ಇಂದಿಗೂ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದೆ. ಏಕೆ ? **ಅಥವಾ**
    ಪ್ರಪಂಚದಲ್ಲಿ ಇಂದು ಸಂಭವಿಸುವ ಭೂಕುಸಿತಗಳಿಗೆ ಮಾನವ ಕೃತ್ಯಗಳು ಕಾರಣವಾಗಿವೆ. ಹೇಗೆ ?
44. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳೇನು ? **ಅಥವಾ** ಸಾರ್ವಜನಿಕ ವೆಚ್ಚದ ಉದ್ದೇಶಗಳೇನು ?
45. ಅಂಚೆ ಕಛೇರಿಗಳು ಒದಗಿಸುವ ಸೇವೆಗಳೇನು ? **ಅಥವಾ** ಉದ್ಯಮಿಯ ಕಾರ್ಯಗಳೇನು ?

**V. ಈ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4 x 1=4**

46. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪ್ರತಿಭಟನೆಗಳ ಪಾತ್ರವನ್ನು ವಿವರಿಸಿ.

**47. ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ. 1+3=4**

ಎ) 82 **1/2** ಪೂರ್ವ ರೇಖಾಂಶ     ಬಿ) ಎನ್ನೋರ್     ಸಿ) ನಹರ್ಕಾತಿಯ

## ಮಾದರಿ ಪ್ರಶ್ನೆಪತ್ರಿಕೆ– 2018–19 ವಿಷಯ: ಸಮಾಜ ವಿಜ್ಞಾನ

**ಒಟ್ಟು ಪ್ರಶ್ನೆಗಳ ಸಂಖ್ಯೆ: 47** — **ವಿಷಯ ಸಂಕೇತ: 85ಕೆ**

**ಸಮಯ: 3 ಗಂಟೆ** — **ಗರಿಷ್ಠ ಅಂಕಗಳು: 80**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ. ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. 1x10=10**

1. ಮರಾಠರಲ್ಲಿ ಪೇಶ್ವೆ ಹುದ್ದೆಗೆ ಕಲಹ ಏರ್ಪಡಲು ಕಾರಣ
   ಎ) ಮರಾಠರ ಪೇಶ್ವೆ ಮಾಧವರಾವ್ ನಿಧನಹೊಂದಿದ್ದು ಬಿ) ನಾರಾಯಣರಾವ್‌ನನ್ನು ರಘುನಾಥರಾವ್ ಕೊಲೆ ಮಾಡಿದ್ದು
   ಸಿ) ಮರಾಠರು ಬ್ರಿಟಿಷರ ಸ್ನೇಹ ಗಳಿಸಿದ್ದು ಡಿ) ನಾನಾ ಪಡ್ನವೀಸನು ಎರಡನೇ ಮಾಧವರಾವ್‌ಗೆ ಪಟ್ಟಕಟ್ಟಿದ್ದು
2. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಮೊದಲ ಅಧ್ಯಕ್ಷರು
   ಎ) ಮಹಾತ್ಮ ಗಾಂಧೀಜಿ ಬಿ) ಸುಭಾಷ್ ಚಂದ್ರಬೋಸ್
   ಸಿ) ಡಬ್ಲ್ಯು. ಸಿ. ಬ್ಯಾನರ್ಜಿ ಡಿ) ಬಾಲಗಂಗಾಧರ ತಿಲಕ್
3. ರಷ್ಯಾವು ಮೊದಲ ಮಹಾಯುದ್ಧದಿಂದ ಹಿಂದೆ ಸರಿಯಲು ಕಾರಣ
   ಎ) ರೈತರು ಝಾರ್ ದೊರೆಗಳ ವಿರುದ್ಧ ದಂಗೆಯೆದ್ದಿದ್ದು ಬಿ) ಗೊರ್ಬಚೇವನ ಸುಧಾರಣೆಗಳು
   ಸಿ) ರಷ್ಯಾದಲ್ಲಿ ಉಂಟಾದ ಸಮಾಜವಾದಿ ಕ್ರಾಂತಿ ಡಿ) ಕಾರ್ಲ್‌ಮಾರ್ಕ್ಸನ ಸಮಾಜವಾದ
4. ಪಂಚಶೀಲ ಒಪ್ಪಂದಕ್ಕೆ ಸಹಿಹಾಕಿದ ನಾಯಕರು
   ಎ) ಇಂದಿರಾಗಾಂಧಿ ಮತ್ತು ಮಾವೋತ್ಸೆತುಂಗ್ ಬಿ) ಜವಾಹರಲಾಲ್ ನೆಹರೂ ಮತ್ತು ಚೌ.ಎನ್.ಲಾಯ್
   ಸಿ) ಅಟಲ್‌ಬಿಹಾರಿ ವಾಜಪೇಯಿ ಮತ್ತು ಸನ್‌ಯಾತ್ ಸೇನ್ ಡಿ) ರಾಜೀವ್‌ಗಾಂಧಿ ಮತ್ತು ಚಿಯಾಂಗ್ ಕೈಷೇಕ್
5. ವಿಶ್ವ ಸಂಸ್ಥೆಯ ಪ್ರಸ್ತಾವನೆಯು ಈ ಕೆಳಗಿನ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ.
   ಎ) ವಿಶ್ವದ ಪ್ರಜೆಗಳಾದ ನಾವು ಬಿ) ವಿಶ್ವದ ಜನಸಮುದಾಯವೆನಿಸಿದ ನಾವು
   ಸಿ) ವಿಶ್ವದ ನಾಯಕರುಗಳಾದ ನಾವು ಡಿ) ವಿಶ್ವದ ಪ್ರಬಲರಾಷ್ಟಗಳಾದ ನಾವು
6. ರೈತ ಚಳುವಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾರಿಯಾದ ಹೇಳಿಕೆ
   ಎ) ರೈತ ಚಳುವಳಿಯು ಅರಣ್ಯನಾಶವನ್ನು ವಿರೋಧಿಸಿ ನಡೆದ ಚಳುವಳಿಯಾಗಿದೆ
   ಬಿ) ರೈತ ಚಳುವಳಿಯು ಮಧ್ಯಪಾನವನ್ನು ವಿರೋಧಿಸಿ ನಡೆದ ಚಳುವಳಿಯಾಗಿದೆ
   ಸಿ) ರೈತ ಚಳುವಳಿಯು ಅಸ್ಪೃಶ್ಯತೆಯನ್ನು ವಿರೋಧಿಸಿ ನಡೆದ ಚಳುವಳಿಯಾಗಿದೆ
   ಡಿ) ರೈತ ಚಳುವಳಿಯು ಕೃಷಿಕರನ್ನು ಆವರಿಸಿರುವ ಆರ್ಥಿಕ ಬಿಕ್ಕಟ್ಟುಗಳನ್ನು ವಿರೋಧಿಸಿ ನಡೆದ ಚಳುವಳಿಯಾಗಿದೆ.
7. ಈ ಕೆಳಗಿನವುಗಳಲ್ಲಿ ಸಾಂಪ್ರದಾಯಿಕ ಶಕ್ತಿಸಂಪನ್ಮೂಲಗಳ ಸರಿಯಾದ ಗುಂಪು
   ಎ) ಸೌರಶಕ್ತಿ, ಪವನಶಕ್ತಿ, ಉಬ್ಬರವಿಳಿತ ಶಕ್ತಿ ಬಿ) ಕಲ್ಲಿದ್ದಲು, ಪೆಟ್ರೋಲಿಯಂ, ಅಣು ಖನಿಜಗಳು
   ಸಿ) ಪವನಶಕ್ತಿ, ಪೆಟ್ರೋಲಿಯಂ. ಜಲವಿದ್ಯುಚ್ಛಕ್ತಿ ಡಿ) ಕಲ್ಲಿದ್ದಲು, ಅಣುಖನಿಜಗಳು, ಪವನಶಕ್ತಿ
8. ಮುಂಬಯಿ ನಗರವನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯಲು ಕಾರಣ
   ಎ) ಇಲ್ಲಿ ಹೆಚ್ಚು ಹತ್ತಿ ಬೆಳೆಯುವ ಪ್ರದೇಶಗಳಿವೆ ಬಿ) ಇಲ್ಲಿ ಹತ್ತಿ ಬಟ್ಟೆಗಳನ್ನು ಹೆಚ್ಚಾಗಿ ಮಾರಾಟ ಮಾಡಲಾಗುತ್ತದೆ.
   ಸಿ) ಇಲ್ಲಿ ಹೆಚ್ಚಾಗಿ ಹತ್ತಿಯನ್ನು ಕೊಂಡುಕೊಳ್ಳಲಾಗುತ್ತದೆ. ಡಿ) ಇಲ್ಲಿ ಹೆಚ್ಚು ಹತ್ತಿ ಬಟ್ಟೆ ಕೈಗಾರಿಕೆಗಳು ಕೇಂದ್ರೀಕೃತಗೊಂಡಿವೆ
9. ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಸಭೆಯು ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ
   ಎ) ಎಲ್ಲಾ ಅಧಿಕಾರವನ್ನು ಗ್ರಾಮಸಭೆಯೇ ಚಲಾಯಿಸುತ್ತದೆ.
   ಬಿ) ಗ್ರಾಮ ಪಂಚಾಯಿತಿಯ ಸಂಪೂರ್ಣ ಮೇಲ್ವಿಚಾರಣೆಯನ್ನು ಗ್ರಾಮಸಭೆಯೇ ನೋಡಿಕೊಳ್ಳಲಾಗುತ್ತದೆ.
   ಸಿ) ಗ್ರಾಮಗಳ ಅಭಿವೃದ್ಧಿಯ ಯೋಜನೆಗಳನ್ನು ಇಲ್ಲಿಯೇ ಸಿದ್ಧಪಡಿಸಲಾಗುತ್ತದೆ.
   ಡಿ) ಗ್ರಾಮಸಭೆಯು ಗ್ರಾಮೀಣ ಸಂಸ್ಕೃತಿಯನ್ನು ರಕ್ಷಿಸುತ್ತದೆ.
10. ಜಾಗತೀಕರಣವು ಪ್ರಪಂಚದ ದೇಶಗಳ ನಡುವೆ ಸಾಮಾಜಿಕ ಮತ್ತು ರಾಜಕೀಯ ಸಾಮರಸ್ಯ ಉಂಟುಮಾಡುವುದು
    ಎ) ವ್ಯಾಪಾರದ ಮೇಲಿನ ಸುಂಕಗಳು ಮತ್ತು ತೆರಿಗೆಗಳನ್ನು ತೆಗೆದು ಹಾಕುವುದರ ಮೂಲಕ
    ಬಿ) ಸರಕುಗಳ ಉತ್ಪಾದನೆಯಲ್ಲಿ ಪ್ರಾವೀಣ್ಯತೆಯನ್ನು ಸೃಷ್ಟಿಸುವುದರ ಮೂಲಕ
    ಸಿ) ದೇಶಗಳ ನಡುವೆ ಪರಸ್ಪರ ಆರ್ಥಿಕ ಅವಲಂಬನೆ ಉಂಟುಮಾಡುವುದರ ಮೂಲಕ
    ಡಿ) ಅಂತರರಾಷ್ಟ್ರೀಯ ಬಂಡವಾಳದ ಮೇಲೆ ಹತೋಟಿ ಸಾಧಿಸುವ ಮೂಲಕ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. 14x1=14**

11. ಬ್ರಿಟಿಷರು ಬಂಗಾಳ ಪ್ರಾಂತ್ಯದ ಮೇಲೆ ಹೇಗೆ ಸಂಪೂರ್ಣ ಹಿಡಿತ ಸಾಧಿಸಿದರು?
12. ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿ ಯಾವುದು?
13. ಮೊದಲನೇ ಆಂಗ್ಲೋ– ಮೈಸೂರು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?

14. ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿ ಗಂಭೀರವಾಗಿತ್ತು ಎಂದು ಹೇಗೆ ಹೇಳುವಿರಿ?
15. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು?
16. ಭಾರತದ ವಿದೇಶಾಂಗ ನೀತಿಯನ್ನು 'ನೆಹರೂರವರ ವಿದೇಶಾಂಗ ನೀತಿ' ಎಂದು ಕರೆಯಲು ಕಾರಣವೇನು?
17. ಸಾಮಾಜಿಕ ಅಸಮಾನತೆ ಏನನ್ನು ಸೂಚಿಸುತ್ತದೆ?
18. ಸಾಮಾಜಿಕ ಚಳುವಳಿ ಎಂದರೇನು?
19. ಜೀವನಾಧಾರಿತ ಬೇಸಾಯ ಎಂದರೇನು?
20. ಭಾರತದಲ್ಲಿ ನೀರಾವರಿ ಬೇಸಾಯ ಅತ್ಯಂತ ಅವಶ್ಯಕ. ಏಕೆ?
21. 1951–1991 ರ ಅವಧಿಯಲ್ಲಿ ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆ ದರವು ತ್ವರಿತವಾಗಿತ್ತು. ಏಕೆ?
22. ಹಿಮಾಲಯ ಪರ್ವತ ಪ್ರದೇಶ ಮತ್ತು ಥಾರ್ ಮರುಭೂಮಿ ಪ್ರದೇಶಗಳಲ್ಲಿ ಜನಸಾಂದ್ರತೆ ಕಡಿಮೆಯಿದೆ. ಏಕೆ?
23. ಚೆಕ್ಕುಗಳು ಯಾವ ಹಣದ ಸಾಧನವಾಗಿವೆ?
24. ಜಾಗತೀಕರಣ ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 15x2=30**

25. ಕಾನ್‌ಸ್ಟಾಂಟಿನೋಪಲ್‌ನ ಪತನವು ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾಯಿತು ಹೇಗೆ?
26. ಭಾರತದ ಸಮಾಜ ಸುಧಾರಣೆಯಲ್ಲಿ ರಾಜಾರಾಮ್ ಮೋಹನ ರಾಯ್‌ರ ಪಾತ್ರವನ್ನು ತಿಳಿಸಿ.
    **ಅಥವಾ** ಸತ್ಯಶೋಧಕ ಸಮಾಜದ ಉದ್ದೇಶಗಳನ್ನು ವಿವರಿಸಿ.
27. "ಬ್ರಿಟಿಷರು ಜಾರಿಗೆ ತಂದ ಆಡಳಿತ ಸುಧಾರಣೆಗಳು 1857ರ ದಂಗೆಗೆ ಕಾರಣವಾದವು". ಹೇಗೆ?
28. ಜುನಾಘಡ್ ಸಂಸ್ಥಾನವು ಭಾರತದ ಒಕ್ಕೂಟವನ್ನು ಹೇಗೆ ಸೇರಿತು?
29. "ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು" ಸಮರ್ಥಿಸಿ.
30. ಭಾರತ ಮತ್ತು ಚೀನಾದ ನಡುವಿನ ಸಂಬಂಧ ಹದಗೆಡಲು ಕಾರಣಗಳೇನು?
31. ವರ್ಣಭೇದ ನೀತಿಯು ಮಾನವತಾವಾದಕ್ಕೆ ವಿರೋಧವಾದುದು". ಈ ಹೇಳಿಕೆ ಸಮರ್ಥಿಸಿ.
32. ಮಕ್ಕಳ ದುಡಿಮೆಯಿಂದ ಮಕ್ಕಳ ವಿಕಾಸವು ಕುಂಠಿತವಾಗುತ್ತದೆ ಹೇಗೆ?.
33. ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
34. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ.
35. ಮರುಭೂಮಿ ಸಸ್ಯವರ್ಗದ ಲಕ್ಷಣಗಳನ್ನು ತಿಳಿಸಿ.
36. ಸರ್ವಕಾಲಿಕ ಕಾಲುವೆ ಮತ್ತು ಪ್ರವಾಹ ಕಾಲುವೆಗಳ ವ್ಯತ್ಯಾಸ ತಿಳಿಸಿ.
37. ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.
38. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೇಗೆ ಅಳೆಯಬಹುದು?
39. ಗ್ರಾಹಕನು ಮಾರುಕಟ್ಟೆಯ ರಾಜ ಎನಿಸಿಕೊಂಡಿದ್ದರೂ, ಎಲ್ಲೆಡೆ ಶೋಷಣೆಗೆ ಒಳಗಾಗುತ್ತಿದ್ದಾನೆ. ಹೇಗೆ?

**IV. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ. 6x3=18**

40. ಬ್ರಿಟಿಷರ ಕಂದಾಯ ನೀತಿಗಳಿಂದಾದ ಪರಿಣಾಮಗಳಾವುವು?
    **ಅಥವಾ** ಕಿತ್ತೂರಿನ ವೀರರಾಣಿ ಚೆನ್ನಮ್ಮ ಮತ್ತು ಬ್ರಿಟಿಷರ ನಡುವಿನ ಹೋರಾರವನ್ನು ವಿವರಿಸಿ.
41. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳನ್ನು ಪಟ್ಟಿಮಾಡಿ.
    **ಅಥವಾ** ವಿಶ್ವಸಂಸ್ಥೆಯ ಸಾಧನೆಗಳನ್ನು ಪಟ್ಟಿ ಮಾಡಿ.
42. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?
    **ಅಥವಾ** ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವಿನ ವ್ಯತ್ಯಾಸಗಳೇನು?
43. "ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಸ್ಥಾಪನೆಗೆ ಉತ್ತಮವಾದ ಅವಕಾಶಗಳಿವೆ" ಸಮರ್ಥಿಸಿ.
    **ಅಥವಾ** "ಉಷ್ಣವಲಯದ ಆವರ್ತ ಮಾರುತಗಳು ಬಹಳ ವಿನಾಶಕಾರಿಯಾದವು"ಸಮರ್ಥಿಸಿ.
44. ಹಣದ ವಿಕಾಸದ ವಿವಿಧ ಹಂತಗಳನ್ನು ತಿಳಿಸಿ **ಅಥವಾ** ಕೇಂದ್ರ ಸರ್ಕಾರದ ತೆರಿಗೇತರ ವರಮಾನದ ಮೂಲಗಳನ್ನು ತಿಳಿಸಿ.
45. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವವು? **ಅಥವಾ**
    ಸ್ವ ಉದ್ಯೋಗ ಸ್ಥಾಪಿಸಲು ವ್ಯಕ್ತಿಯು ಆಯ್ದುಕೊಳ್ಳಬಹುದಾದ ಸಂಸ್ಥೆಗಳು ಯಾವುವು?

**V. ಈ ಕೆಳಗಿನ ಪ್ರಶ್ನೆಗೆ 8 ರಿಂದ 10 ವಾಕ್ಯಗಳಲ್ಲಿ ಉತ್ತರಿಸಿ. 1x4=4**

46. ಅಸಹಕಾರ ಚಳವಳಿಯ ಸಂದರ್ಭದಲ್ಲಿ ಆದ ಪ್ರಮುಖ ಬೆಳವಣಿಗೆಗಳನ್ನು ವಿವರಿಸಿ.

**VI. ಭಾರತದ ಅಂದವಾದ ನಕ್ಷೆ ಬರೆದು ಈ ಕೆಳಗಿನ ಅಂಶಗಳನ್ನು ಗುರ್ತಿಸಿ. 1+3=4**

ಎ) ಕರ್ಕಾಟಕ ಸಂಕ್ರಾಂತಿ ವೃತ್ತ ಬಿ) ಕಪ್ಪತಗುಡ್ಡ ಸಿ) ನರೋರ